ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೫ ನವೆಂಬರ್ - ೨೦೧೪ ಸಂಚಿಕೆ - ೦೪

'ಕ್ವಿಟ್ ಇಂಡಿಯ ಚಳುವಳಿಯ' ಬೀಜ ಬಿತ್ತಲ್ಪಡುತ್ತಿದೆ



ಸಂತ ಇಟಗಿ ಭೀಮಾಂಬಿಕೆ ನೂಲುತ್ತ ಕುಳಿತ ದೇವತೆ

ಜನಪದ ವಿಚಾರದಲ್ಲಿ

ನವೆಂಬರ್ – ೨೦೧೪

೧) 'ಕ್ವಿಟ್ ಇಂಡಿಯ ಚಳುವಳಿಯ' ಬೀಜ ಬಿತ್ತಲ್ಪಡುತ್ತಿದೆ. – ಸುರೇಂದ್ರ ಕೌಲಗಿ

ಕೇಂದ್ರ ಸರ್ಕಾರ ಬಹುರಾಷ್ಟ್ರೀಯ ಕಂನಿಗಳನ್ನು ದೇಶದ ಅಭಿವೃದ್ಧಿ ಕಾರ್ಯದಲ್ಲಿ ಬಂಡವಾಳ ತೊಡಗಿಸಲು ಆಹ್ವಾನಿಸುತ್ತಿದೆ. ದೇಶದಲ್ಲಿ ಲಭ್ಯವಿರುವ ಸಂಪನ್ಮೂಲ ಮತ್ತು ಅಗ್ಗದ ಶ್ರಮವನ್ನು ಉಪಯೋಗಿಸಿ ಪದಾರ್ಥಗಳನ್ನು ತಯಾರುಮಾಡುವುದಕ್ಕಾಗಿ ಹೊರ ದೇಶದ ಕಂಪನಿಗಳಿಗೆ Make In India ಎಂದು ಸರ್ಕಾರ ಆಹ್ವಾನಿಸುತ್ತಿದೆ. ಇದು ಸ್ವರಾಜ್ಯದ ಕಲ್ಪನೆಗೆ ವಿರೋಧವಾಗಿದೆ. ಸ್ವರಾಜ್ಯದ ಕಲ್ಪನೆಗೆ ವಿರೋಧವಾಗಿರುವ ಇದನ್ನು ಪ್ರತಿಭಟಿಸಬೇಕಿದೆ ಎಂಬುದು ಈ ಲೇಖನದ ಕರೆ.

೨) ಪರಿಪೂರ್ಣತೆ ಕುರಿತು ಒಂದು ಚಿಂತನೆ – ಡಾ.ಬೋರೇಗೌಡ ಚಿಕ್ಕಮರಳಿ

ಪರಿಪೂರ್ಣತೆ ಎಂಬುದು ವ್ಯಕ್ತಿತ್ವ ವಿಕಾಸದ ದೃಷ್ಟಿಯಿಂದ ಆಗುತ್ತಾ ಸಾಗುವ ಒಂದು ಪ್ರಕ್ರಿಯೆ. ಮಾಗಿದಷ್ಟು ಬೀಜ ಬಲಿಯುತ್ತದೆ, ಬೆಳಸು ಫಲಿಸುತ್ತದೆ ಎಂಬ ಧಾಟಿಯ ವಿಚಾರಗಳು ಈ ಲೇಖನದಲ್ಲಿವೆ.

೩) ಶಿಕ್ಷಣದ ಹಳೆಯ ರಚನೆ ಅಶೋಭನೀಯ – ಮೂಲ : ವಿನೋಬಾ; ಅನು – ಸುಕೌ

ಕೆಂಪು ಕೋಟೆಯ ಮೇಲೆ ಹಾರುತ್ತಿದ್ದ ಯೂನಿಯನ್ ಜಾಕ್ ಇಳಿದು ಸ್ವತಂತ್ರ ದೇಶದ ತ್ರಿವರ್ಣ ಧ್ವಜ ಹಾರಿದ ದಿನವೆ ಗುಲಾಮಗಿರಿಯ ಶಿಕ್ಷಣ ಪದ್ಧತಿಯ ಬದಲಾಗಿ ಹೊಸ ಶಿಕ್ಷಣ ಪದ್ಧತಿ ಜಾರಿಗೆ ಬರಬೇಕಿತ್ತು ಎಂಬುದು ಲೇಖಕರ ಬಯಕೆ.

೪) ಘಟನೆಗಳಲ್ಲಿ ಗಾಂಧಿ : ಎರಡು ದೃಷ್ಟಾಂತ ಕಥೆಗಳು – ಲೆಕ್ಕ ಇಡದ ಕಾರ್ಯಕರ್ತ ಮತ್ತು ಹಟಮಾರಿ ಕುರುಡಿ – ಶ್ರೀ.ಜಿ.ಎಸ್.ಜಯದೇವ

ಎಲ್ಲೆಡೆ ಭ್ರಷ್ಟಾಚಾರ ವ್ಯಾಪಿಸಿರುವಾಗ ಗಾಂಧಿ ಕಾಲದಲ್ಲಿ ನಡೆದ ಹಣದ ವ್ಯವಹಾರದ ಶುದ್ಧತೆಯ ದೃಷ್ಟಾಂತ ಲೇಖನದಲ್ಲಿದೆ.

೫) ಚಿಕ್ಕ ಹಿಡುವಳಿ ರೈತರು ಅಪಾಯದ ನೆರಳಲ್ಲಿ – ಮೂಲ : ಕೋಲಿನ್ ಟಾಡ್ ಹಂಟರ್; ಅನು : ಸುಕೌ

ಆಹಾರೋತ್ಪಾದನೆಯಲ್ಲಿ ಸಣ್ಣ ಹಿಡುವಳಿದಾರರ ಪಾತ್ರ ಹಿರಿದಾಗಿದ್ದರೂ ಸರ್ಕಾರ ಅವರನ್ನು ಉಚ್ಚಾಟಿಸಿ ಕೈಗಾರಿಕೀಕರಣಕ್ಕಾಗಿ ಅವರ ಜಮೀನನ್ನು ಆಕ್ರಮಿಸಿಕೊಳ್ಳುತ್ತಿರುವುದು ದುರಂತಕ್ಕೆ ಎಡೆ ಮಾಡಿಕೊಡುತ್ತದೆಂಬ ಎಚ್ಚರಿಕೆ ಲೇಖಕರು ಕೊಟ್ಟಿದ್ದಾರೆ.

೬) ನೂಲುತ್ತ ಕುಳಿತ ದೇವತೆ – ಪ್ರಸನ್ನ

ಇಟಗಿ ಎಂಬ ಗ್ರಾಮದಲ್ಲಿ ಇರುವ ಭೀಮಾಂಬಿಕೆ ಎಂಬ ದೇವತೆಯ ಕೈಯಲ್ಲಿ ಇರುವುದು ಚರಕ. ಪ್ರಾಯಶಃ ವಿಶ್ವದಲ್ಲಿಯೇ ಇಂತದು ಮತ್ತೊಂದಿಲ್ಲ. ಗುಜರಾತಿನ ಗಾಂಧಿಗೆ ಕರ್ನಾಟಕದ ಭೀಮವ್ವ ಹಿರಿಯಕ್ಕನಿದ್ದಂತೆ ಎಂಬ ಸಂಗತಿ ಅರಹುವ ಈ ಲೇಖನವನ್ನು ಎಲ್ಲರೂ ಓದಬೇಕು.

೭) ನಮ್ಮ ಪ್ರಗತಿಪರ ಚಿಂತನೆ ಎಡವಿದ್ದಲ್ಲಿ – ಡಾ. ಟಿ.ಎಸ್.ವಾಸುದೇವಮೂರ್ತಿ

ಪ್ರಗತಿಪರ ಚಿಂತಕರೆಂದು ತಮ್ಮನ್ನು ತಾವೇ ಗುರುತಿಸಿಕೊಳ್ಳುವ ಚಿಂತಕರೆಲ್ಲರೂ ಓದಬೇಕಾದ ಲೇಖನ. ವಿವಾದಾತ್ಮಕ ವಿಚಾರಗಳು ಈ ಲೇಖನದ ತುಂಬಾ ಇವೆ.

೮) ಸರ್ವೋದಯ ಆಂದೋಲನದ ಮುನ್ನಡೆ

೯) ಜನಪದ ನಿಲಯದ ಅಂತರಂಗದಲ್ಲಿ – ೧೨೭

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ನವೆಂಬರ್ - ೨೦೧೪
ಸಂಪುಟ - ೧೫
ಸಂಚಿಕೆ - ೦೪

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ
ಫೋನ್ : 08236 - 316344
08236 - 299854
email :
janapada@yahoo.com
Web: janapada.net

ಉಳಿಸಿಹೋಗುವುದೆಂದರೆ...

ಮೇಣದ ಬತ್ತಿ ಬೆಳಕ ಬಿತ್ತಿ
ಕೊನೆಗೂ ಉರಿದುಹೋಯಿತು
ತನಗಾದರೂ ತುಸು ಬೆಳಕ ಉಳಿಸಿಕೊಳ್ಳದೆ!

ಕರ್ಪೂರದಾರತಿ ಕಂಪ ಹರಡಿ
ಕೊನೆಗೂ ಕರಗಿಹೋಯಿತು
ತನಗಾದರೂ ತುಸು ಕಂಪ ಉಳಿಸಿಕೊಳ್ಳದೆ!

ಒರಳಕಲ್ಲು ಸವಿಯ ಸೂಸಿ
ಕೊನೆಗೂ ಸವೆದುಹೋಯಿತು
ತನಗಾದರೂ ತುಸು ರುಚಿ ಉಳಿಸಿಕೊಳ್ಳದೇ!

ಹರಿದ ನದಿ ದಾಹ ನೀಗಿಸಿ
ಕೊನೆಗೂ ಬತ್ತಿಹೋಯಿತು
ತನಗಾದರೂ ತುಸು ಪಸೆ ಉಳಿಸಿಕೊಳ್ಳದೇ!

ಕೆಲವರು ಜೀವತೇದು
ಕೊನೆಗೂ ಸಂದುಹೋದರು
ತಮಗಾದರೂ ತುಸು ಬದುಕ ಉಳಿಸಿಕೊಳ್ಳದೇ!

— ವಾಸುದೇವ ನಾಡಿಗ್

ಚಿಂತನೆಗೊಂದು ಸಂಗತಿ

ಬೆಳಗಾವಿ ಸಮಸ್ಯೆ ಉರಿಯುತ್ತಲೇ ಇದೇ. ಕರ್ನಾಟಕ ರಾಜ್ಯ ರಚನೆಯಾದಾಗಿನಿಂದ ೫೮ ವರ್ಷಗಳಿಂದಲೂ ಬೆಳಗಾವಿ ಸಮಸ್ಯೆ ಉರಿಯುತ್ತಲೇ ಇದೆ. ೨೦೧೪ರ ಮಹಾರಾಷ್ಟ್ರ ರಾಜ್ಯದ ಚುನಾವಣೆಯಲ್ಲಿ ಶಿವಸೇನೆಯ ೪೭ ಸದಸ್ಯರು ಅಲ್ಲಿಯ ವಿಧಾನ ಸಭೆಗೆ ಆಯ್ಕೆಯಾಗಿ ಬಂದಿದ್ದಾರೆ. ಬಹುಮತಗಳಿಸಿರುವ ಬಿ.ಜೆ.ಪಿಯ ಜೊತೆಗೆ ಸರ್ಕಾರ ರಚಿಸಲು ಸಹಕಾರ ಕೊಡುವುದಾಗಿ ಘೋಷಿಸಿದೆ. ಮಹಾರಾಷ್ಟ್ರದ ಹಿತಕ್ಕಾಗಿ ತಮ್ಮ ಮತ ಭೇದವನ್ನು ಮರೆತು ಸರ್ಕಾರ ರಚಿಸಲು ಕೈಜೋಡಿಸುವುದಾಗಿ ಹೇಳಿದೆ. ಆದ್ದರಿಂದ ಬೆಳಗಾವಿ ಸಮಸ್ಯೆಯನ್ನು ಹೆಚ್ಚು ಪ್ರಜ್ವಲವಾಗಿ ಉರಿಯುವಂತೆ ಮಾಡುವುದು ಖಚಿತ. ಕನ್ನಡ ರಾಜ್ಯೋತ್ಸವದ ದಿನ ನವೆಂಬರ್ ೧ ರಂದು ಬೆಳಗಾವಿಯಲ್ಲಿಯ ಮರಾಠಿಗರು ಕರಾಳದಿನವನ್ನಾಗಿ ಆಚರಿಸುವುದಾಗಿ ಹೇಳಿದ್ದಾರೆ. ಸುಪ್ರೀಂಕೋರ್ಟ್ ನ್ಯಾಯಾಧೀಶರೊಬ್ಬರು ಕರ್ನಾಟಕ □ ಮಹಾರಾಷ್ಟ್ರ ಗಡಿ ಸಮಸ್ಯೆಯ ವಿಷಯ ತಿಳಿಯಲು ಬರಲಿದ್ದಾರೆ. ಉರಿಯುತ್ತಿರುವ ಬೆಳಗಾವಿ ಸಮಸ್ಯೆಯನ್ನು ನಂದಿಸಲು ಕರ್ನಾಟಕ ಸರ್ಕಾರವಾಗಲೀ, ಅದರ ಅಂಗ ಸಂಸ್ಥೆಗಳಾಗಲೀ, ಕನ್ನಡ ಸಂಘಟನೆಗಳಾಗಲೀ ಯಾವುದೇ ಪರಿಣಾಮಕಾರಿಯಾದ ಪ್ರಯತ್ನ ಮಾಡಿಲ್ಲ. ಅಲ್ಲೊಂದು ಸುವರ್ಣ ಸೌಧ ಕಟ್ಟಿದ ಮಾತ್ರಕ್ಕೆ ಸಮಸ್ಯೆ ಬಗೆಹರಿಯುವುದಿಲ್ಲ. ಸಮಸ್ಯೆಯ ಮೂಲದ ಇತರ ವಿಷಯಗಳ ಬಗ್ಗೆಯೂ ಗಮನ ಕೊಡಬೇಕಾಗುತ್ತದೆ. ಅದನ್ನು ಕರ್ನಾಟಕ ಸರ್ಕಾರ ಸಮರ್ಪಕವಾಗಿ ಮಾಡಿಲ್ಲ. ಕೇವಲ ಕಾನೂನು ಸಮರವೊಂದನ್ನೇ ನಡೆಸಿದರೆ ಸಾಲದು. ಆ ಸಮಸ್ಯೆಯ ಗರ್ಭದಲ್ಲಿ ಭಾವನಾತ್ಮಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳು ಇವೆ. ಅವುಗಳನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ಬೆಳಗಾವಿಯಲ್ಲದೆ ಕರ್ನಾಟಕದ ಗಡಿ ಪ್ರದೇಶ ಗಳಲ್ಲಿಯ ಕನ್ನಡ ಮತ್ತು ಕನ್ನಡಿಗರ ಸಮಸ್ಯೆಗಳ ಬಗ್ಗೆ ತೀವ್ರ ಗಮನ ಕೊಡ ಬೇಕಾದುದು ಅಗತ್ಯ. ರಾಜ್ಯೋತ್ಸವ ಕೇವಲ ರಾಜ್ಯದ ಮಧ್ಯ ಪ್ರದೇಶದಲ್ಲಿ ಮಾತ್ರ ನಡೆದರೆ ಅದಕ್ಕೆ ಅರ್ಥವಿಲ್ಲ. ನಿಜವಾಗಿ ನಡೆಯಬೇಕಾದುದು ಗಡಿನಾಡಿನಲ್ಲಿ. ಕರ್ನಾಟಕ ರಾಜ್ಯದ ಭಾಷೆ ಕನ್ನಡ ಎಂಬುದು ಉತ್ತರ ಭಾರತೀಯರಿಗೆ ಸರಿಯಾಗಿ ಗೊತ್ತಿಲ್ಲ. ವಿದೇಶೀಯರಿಗೂ ಗೊತ್ತಿಲ್ಲ. ಆದ್ದರಿಂದ ಕರ್ನಾಟಕದ ಭಾಷೆಯಾದ ಕನ್ನಡದ ಹೆಸರೆ ಇರುವ ರೀತಿಯಲ್ಲಿ ರಾಜ್ಯದ ಹೆಸರನ್ನು ಕನ್ನಡ ನಾಡು ಎಂದು ಬದಲಾಯಿಸುವುದು ಬದಲಾಗಿರುವ ಪರಿಸ್ಥಿತಿಯಲ್ಲಿ ಅಗತ್ಯವೆಂದು ಅನಿಸುತ್ತದೆ. ಆಗ ಕನ್ನಡ ಉಳಿದು ಬೆಳೆದು ಪ್ರಫುಲ್ಲಿತಗೊಳ್ಳಬಹುದು.



'ಕ್ವಿಟ್ ಇಂಡಿಯ ಚಳುವಳಿಯ' ಬೀಜ ಬಿತ್ತಲ್ಪಡುತ್ತಿದೆ.

– ಸುರೇಂದ್ರ ಕೌಲಗಿ

ಕೇಂದ್ರ ಸರ್ಕಾರದ ಇಂದಿನ ಕೈಗಾರಿಕಾ ನೀತಿ ಮತ್ತು ಆರ್ಥಿಕ ನೀತಿ ಮತ್ತು ಶಿಕ್ಷಣ ನೀತಿ ಈ ಮೂರು ನೀತಿಗಳು ದೇಶದ ಒಟ್ಟು ಹಿತಕ್ಕೆ ಮಾರಕವಾಗಿವೆ. ಆರ್ಥಿಕ ಅಸಮಾನತೆ, ಹಿಂಸಾಚಾರ, ಮಹಿಳೆ ಮತ್ತು ಮಕ್ಕಳ ಮೇಲೆ ದೌರ್ಜನ್ಯ, ಜಲ,ನೆಲ,ಜಂಗಲ್‌ಗಳು ಪ್ರದೂಶಿತಗೊಳ್ಳುತ್ತಿವೆ. ಮತ್ತು ಅವುಗಳ ಲೂಟಿಯಾಗುತ್ತಿವೆ. ಆರ್ಥಿಕ ಅಸಮಾನತೆ ಹೆಚ್ಚಾಗುತ್ತಿದೆ. ಹಳ್ಳಿಗಳು ದುರ್ಬಲವಾಗುತ್ತಿವೆ. ನಗರಗಳು ಕೊಬ್ಬುತ್ತಿವೆ. ಯುವಕರು ದಾರಿ ತಪ್ಪುತ್ತಿದ್ದಾರೆ. ವಿದ್ಯಾರ್ಥಿಗಳು ಗೊತ್ತು ಗುರಿಯಿಲ್ಲದೆ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ವಿಶ್ವವಿದ್ಯಾನಿಲಯಗಳಲ್ಲಿ ಭ್ರಷ್ಟಾಚಾರ, ಅನಾಚಾರ, ಮಿಥ್ಯಾಚಾರ ತಾಂಡವವಾಡುತ್ತಿವೆ. ಮಹಿಳೆಯ ಅಂಗಾಂಗಗಳು ಪ್ರಯೋಗ ಶಾಲೆಯ ವಸ್ತುವಾಗಿವೆ. ಸರ್ಕಾರದ ಸ್ವಾಮ್ಯದಲ್ಲಿಯ ಕೈಗಾರಿಕೆಗಳು ಖಾಸಗಿ ವಲಯದ ಕೈಗಾರಿಕೋದ್ಯಮಿಗಳ ವಶವಾಗುತ್ತಿವೆ. ರಾಷ್ಟ್ರೀಕೃತಗೊಂಡಿರುವ ಬ್ಯಾಂಕಿಂಗ್ ಕ್ಷೇತ್ರ, ಇನ್ಸೂರೆನ್ಸ್ ಕ್ಷೇತ್ರ, ರೈಲ್ವೆ, ತೈಲ ನಿಕ್ಷೇಪ ಕ್ಷೇತ್ರ ಮುಂತಾದ ಕ್ಷೇತ್ರಗಳಲ್ಲಿ ವಿದೇಶೀ ಕಂಪನಿಗಳು ತಮ್ಮ ಅಪಾರವಾದ ಬಂಡವಾಳ ಹೂಡಿ ಹಾಗೂ ತಾಂತ್ರಿಕ ನೆರವನ್ನು ಕೊಡುವ ನೆಪದಿಂದ ಆ ಕ್ಷೇತ್ರಗಳು ವಿದೇಶೀ ಮತ್ತು ದೇಶೀ ಕಂಪನಿಗಳ ಮಾಲೀಕತ್ವಕ್ಕೆ ಒಳಗಾಗುತ್ತಿವೆ. ದೇಶದ ರಕ್ಷಣಾ ವ್ಯವಸ್ಥೆಯಂತೂ ವಿದೇಶಗಳ ಇಚ್ಛೆಯ ಮೇಕೆಯೇ ನಿಂತಿದೆ. ಸಾಹಿತ್ಯ, ಸಂಸ್ಕೃತಿ, ವೈದ್ಯಕೀಯ ಕ್ಷೇತ್ರ ಮುಂತಾದವುಗಳೆಲ್ಲ ವಾಣಿಜ್ಯಕರಣಗೊಳ್ಳುತ್ತಿವೆ. ಇದು ಸ್ಥೂಲವಾಗಿ ನಮ್ಮ ದೇಶದ ಇಂದಿನ ಪರಿಸ್ಥಿತಿಯನ್ನು ತೋರಿಸುತ್ತದೆ.

ಜಾಗತೀಕರಣದ ನೆಪದಲ್ಲಿ, ಅಭಿವೃದ್ಧಿಯ ನೆಪದಲ್ಲಿ, ಆಧುನಿಕ ವಿಜ್ಞಾನ

ಮತ್ತು ತಂತ್ರಜ್ಞಾನವನ್ನು ಬಳಸಿಕೊಳ್ಳುವ ನೆಪದಲ್ಲಿ ನಮ್ಮ ಸರ್ಕಾರವು ಯಾವ ಸಂಕೋಚವೂ ಇಲ್ಲದೆ ದೇಶ ವಿದೇಶಗಳಲ್ಲಿಯ ವಾಣಿಜ್ಯ ಕಂಪನಿಗಳನ್ನು ಭಾರತದಲ್ಲಿ ಉತ್ಪಾದನಾ ಕ್ಷೇತ್ರದಲ್ಲಿ ಬಂಡವಾಳ ಹೂಡಲು ಆಹ್ವಾನಿಸುತ್ತಿದೆ. ಈ ವಿಷಯದಲ್ಲಿ ರಾಜ್ಯ ಸರ್ಕಾರಗಳೂ ಪೈಪೋಟಿ ಮಾಡುತ್ತಿವೆ. ಇತ್ತೀಚೆಗೆ ಚೀನಾ ದೇಶದ ಅಧ್ಯಕ್ಷರು, ಆಸ್ಟ್ರೇಲಿಯ ದೇಶದ ಪ್ರಧಾನಮಂತ್ರಿ ಭಾರತಕ್ಕೆ ಬಂದಿದ್ದಾಗ ಸಾವಿರಾರು ಬಿಲಿಯನ್ ಡಾಲರ್ ಬಂಡವಾಳ ಹೂಡಿಕೆಯ ಬಗ್ಗೆ ಭಾರತ ಒಪ್ಪಂದ ಮಾಡಿಕೊಂಡಿತು. ಜಪಾನ್ ದೇಶದೊಂದಿಗೂ ಒಪ್ಪಂದ ಮಾಡಿಕೊಂಡಿತು. ಈ ಒಪ್ಪಂದಗಳು ಕೈಗಾರಿಕಾ ಅಭಿವೃದ್ಧಿ, ವಾಣಿಜ್ಯ ಅಭಿವೃದ್ಧಿ, ಆಮದು ಮತ್ತು ರಫ್ತು ಮುಂತಾದ ಪ್ರಮುಖ ಆರ್ಥಿಕ ಕ್ಷೇತ್ರಗಳಲ್ಲಿ ಆಗಿವೆ. ಈ ಎಲ್ಲ ಒಪ್ಪಂದಗಳಲ್ಲಿ ಆರ್ಥಿಕ ಸಹಾಯ ಮಾಡುವ ಅಥವಾ ಬಂಡವಾಳ ಹೂಡುವ ದೇಶಗಳ ಹಿತವೆ ಮುಖ್ಯವಾಗಿರುತ್ತವೆಯೇ ಹೊರತು ಭಾರತದ ಹಿತವಲ್ಲ. ಭಾರತವನ್ನು ಚೀನಾ ದೇಶಕ್ಕಿಂತಲೂ ಬಲಿಷ್ಠ ದೇಶವನ್ನಾಗಿ ಮಾಡುವ ಹೆಬ್ಬಯಕೆಯ ಕಾರಣದಿಂದಾಗಿ ಮತ್ತು ಅಭಿವೃದ್ಧಿ ಹೊಂದಿದ ಅಮೇರಿಕಾ, ಇಂಗ್ಲೆಂಡ್, ಜರ್ಮನಿ ಮುಂತಾದ ದೇಶಗಳಿಗಿಂತ ತಾನೇನು ಕಡಿಮೆಯಿಲ್ಲ ಎಂದು ಸಿದ್ಧಪಡಿಸಿಕೊಳ್ಳುವ ಹೆಬ್ಬಯಕೆಯಿಂದಾಗಿ, ಏಷ್ಯಾ ಖಂಡದಲ್ಲಿ ಅಗ್ರಣಿ ದೇಶವಾಗಿ ನಾಯಕತ್ವ ವಹಿಸಿಕೊಳ್ಳಬೇಕೆಂಬ ಹೆಬ್ಬಯಕೆಯ ಕಾರಣದಿಂದಾಗಿ. ನಮ್ಮ ದೇಶದ ಕೇಂದ್ರ ಸರ್ಕಾರ ವಿದೇಶಗಳಿಂದ ಧನ ಸಹಾಯವನ್ನು ಪಡೆಯುವುದು ಮುಖ್ಯವೆಂದು ಭಾವಿಸುತ್ತಿದೆಯೇ ವಿನಃ ಅಂತತೋಗತ್ವ ದೇಶದ ಆರ್ಥಿಕ ಸ್ವಾತಂತ್ರ್ಯ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗುವುದೆಂಬ ಅಪಾಯದ ಬಗ್ಗೆ ಆಲೋಚನೆ ಮಾಡುತ್ತಿಲ್ಲ. ಜಾಗತಿಕ ಮಟ್ಟದಲ್ಲಿ ಭಾರತ ನಂ ೧ ದೇಶವಾಗಬೇಕೆಂಬ ಮಹತ್ವಾಕಾಂಕ್ಷೆ ಹೊಂದಿರುವ ಇಂದಿನ ಕೇಂದ್ರ ಸರ್ಕಾರ ದೇಶದ ಹಿತವನ್ನು ಬಲಿಗೊಡುತ್ತಿದೆ. ದೇಶದ ಪ್ರಜೆಗಳನ್ನು ಅವರ ಸ್ವಂತ ದೇಶದಲ್ಲಿಯೇ ಪರತಂತ್ರರಾಗಿಸುತ್ತಿದೆ. ಅನೇಕ ವಿಧವಾದ ಕಲ್ಯಾಣಕಾರಿ ಯೋಜನೆಗಳ ಮೂಲಕ ಜನರಿಗೆ ಸುಲಭವಾಗಿ ಹಣ ದೊರೆಯುವಂತೆ ಮಾಡುವುದರ ಮೂಲಕ ದೇಶದ ಜನರು ತಮ್ಮ ಪುರುಷಾರ್ಥವನ್ನು ಮತ್ತು ವೈಚಾರಿಕತೆಯನ್ನು ಕಳೆದುಕೊಳ್ಳುವಂತೆ ಮಾಡಿದೆ. ತನ್ನ ಹತ್ತಾರು ಬಗೆಯ ಅಭಿವೃದ್ಧಿ ಯೋಜನೆಗಳ ಮೂಲಕ ಜನರ ಜೀವನದ ಪ್ರತಿ ರಂಗದಲ್ಲೂ ಸರ್ಕಾರ ಪ್ರವೇಶ ಮಾಡಿದೆ. ಎಲ್ಲವೂ ಸರ್ಕಾರಮಯವಾಗಿದೆ. ಸರ್ಕಾರದ ಈ ನೀತಿಗೆ ಬೆಂಬಲವಾಗಿ ವಿದೇಶೀ ಕಂಪನಿಗಳು ಮತ್ತು ಕಾರ್ಪೋರೇಟ್ ಕಂಪನಿಗಳು ಬೆಂಬಲವಾಗಿ ನಿಂತಿವೆ. ಇದುವರೆಗಿದ್ದ ಯೋಜನ ಆಯೋಗವನ್ನೇ ಕಿತ್ತು ಹಾಕಿ ಹೊಸ ಬಂಡವಾಳ ನೀತಿ ಮತ್ತು ಅಭಿವೃದ್ಧಿ ನೀತಿಗೆ ಅನುಗುಣವಾಗಿ ಯೋಜನೆ ತಯಾರಿಸುವಂಥ ಹೊಸ ಆಯೋಗವನ್ನು ರಚಿಸಲು ಸರ್ಕಾರ ಮುಂದಾಗಿದೆ.

ಇದಕ್ಕೆಲ್ಲ ಕಾರಣ ವಿದೇಶೀ ಬಂಡವಾಳವನ್ನು ಹೆಚ್ಚು ಹೆಚ್ಚಾಗಿ ಭಾರತದ ಅಭಿವೃದ್ಧಿಯಲ್ಲಿ ತೊಡಗಿಸುವಂತೆ ಮಾಡುವುದೇ ಆಗಿದೆ.

ಕೇವಲ ವರಮಾನದ(ಜಿ.ಡಿ.ಪಿ) ಏರಿಕೆಯ ಬೆಳವಣಿಗೆಯೇ ಮುಖ್ಯವೆಂದು ಭಾವಿಸಿರುವ ಪಾಶ್ಚಿಮಾತ್ಯ ಮಾದರಿಯ ಆರ್ಥಿಕ ನೀತಿಯನ್ನು ಭಾರತ ಅನುಸರಿಸುತ್ತಿರುವುದು ದೊಡ್ಡ ತಪ್ಪಾಗಿದೆ. ಜೀವನದಲ್ಲಿಯ ಶಾಂತಿ - ಸುಖ - ನೆಮ್ಮದಿ ಮುಂತಾದವುಗಳಿಗೆ ಕೇವಲ ಜಿ.ಡಿ.ಪಿ ಯಲ್ಲಿಯ ಏರಿಕೆಯೊಂದೆ ಕಾರಣವಲ್ಲವೆಂಬುದನ್ನು ಸರ್ಕಾರ ಅರಿತುಕೊಳ್ಳಬೇಕು.

ದೇಶವನ್ನು ಈ ದುಸ್ಥಿತಿಗೆ ತರುತ್ತಿರುವ ವಿದೇಶೀ ಬಂಡವಾಳ ಹೂಡಿಕೆಯ ನೀತಿಯ ವಿರುದ್ಧವಾಗಿ ಮತ್ತು ಈಗಾಗಲೇ ದೇಶದಲ್ಲಿ ಪ್ರವೇಶಮಾಡಿರುವ ವಿದೇಶೀ ಕಂಪನಿಗಳ ವಿರುದ್ಧವಾಗಿ " ಭಾರತ ಬಿಟ್ಟು ತೊಲಗಿ" ಎಂಬ ಚಳುವಳಿ ಪ್ರಾರಂಭವಾಗಲು ಕಾರಣವಾಗುವಂಥ ಬೀಜಗಳನ್ನು ಸರ್ಕಾರ ಬಿತ್ತುತ್ತಿದೆ. ಸ್ವಾತಂತ್ರ್ಯದ ಪೂರ್ವದಲ್ಲಿ ಇಂಗ್ಲೀಷರ ಆಡಳಿತದ ಕಾರಣದಿಂದಾಗಿ ದೇಶ ತನ್ನ ರಾಜಕೀಯ ಸ್ವಾತಂಣತ್ರ್ಯ, ಆರ್ಥಿಕ ಸ್ವಾತಂತ್ರ್ಯ ಮತ್ತು ಇತರ ಎಲ್ಲ ಸ್ವಾತಂತ್ರ್ಯವನ್ನು ಕಳೆದುಕೊಂಡಿತ್ತು. ದೇಶದ ಈ ದಯನೀಯ ಸ್ಥಿತಿಯನ್ನು ಅರಿತ ಗಾಂಧೀಜಿಯವರು ಇಂಗ್ಲೀಷರಲ್ಲಿ ಸ್ವಾತಂತ್ರ್ಯದ ಬೇಡಿಕೆಗಾಗಿ ಹಲವಾರು ರೀತಿಯಲ್ಲಿ ಮನವರಿಕೆಮಾಡಿಕೊಡಲು ಪ್ರಯತ್ನಿಸಿದರು. ತಮ್ಮ ಜೀವನದ ಮೂಲಭೂತ ಸಿದ್ಧಾಂತವಾಗಿದ್ದ ಸತ್ಯ ಮತ್ತು ಅಹಿಂಸೆಯನ್ನು ಒರೆಗೆ ಹಚ್ಚಲು ಪ್ರಯತ್ನಿಸಿದರು. ಆದರೆ ಇಂಗ್ಲೀಷ್ ಸರ್ಕಾರ ಗಾಂಧೀಜಿಯವರ ಮನವಿಗೆ ಮತ್ತು ಪ್ರಯತ್ನಕ್ಕೆ ಮನ್ನಣೆ ಕೊಡದೇ ಇದ್ದಾಗ ಅಂತಿಮವಾಗಿ " ಮಾಡು ಇಲ್ಲವೇ ಮಡಿ" ಎಂಬ ದೃಢ ನಿರ್ಧಾರದ ಅಡಿಪಾಯದ ಮೇಲೆ ಇಂಗ್ಲೀಷ್ ಆಡಳಿತದ ವಿರುದ್ಧ ಭಾರತ ಬಿಟ್ಟು ತೊಲಗಿ, ಕ್ವಿಟ್ ಇಂಡಿಯಾ, ಚಲೇಜಾವ್ ಎಂಬ ಹೆಸರಿನಲ್ಲಿ ಚಳುವಳಿ ೧೯೪೨ ಅಗಸ್ಟ್ ಮಾಹೆಯಲ್ಲಿ ಪ್ರಾರಂಭಿಸಿದರು. ಗಾಂಧಿಯವರ ಇಂಥ ಚಳುವಳಿಯ ಕರೆಗೆ ಓಗೊಟ್ಟು ದೇಶದ ಜನತೆ ಚಳುವಳಿಯಲ್ಲಿ ಭಾಗವಹಿಸಿತು. ಅದರ ಪರಿಣಾಮವಾಗಿ ಭಾರತ ಸ್ವಾತಂತ್ರ್ಯಗೊಂಡಿತು. ಈಗ ಪುನಃ ದೇಶದ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಚಲೇಜಾವ್ ಚಳುವಳಿಯಂಥ ಚಳುವಳಿಯನ್ನು ಪ್ರಾರಂಭಿಸುವ ಕಾಲ ಸನ್ನಿಹಿತವಾಗಿದೆಯೆಂದು ಬಲವಾಗಿ ಅನಿಸುತ್ತಿದೆ. ನೀವೂ ಯೋಚನೆ ಮಾಡಿ. ■

ಪರಿಪೂರ್ಣತೆ ಕುರಿತು ಒಂದು ಚಿಂತನೆ

- ಡಾ.ಬೋರೇಗೌಡ ಚಿಕ್ಕಮರಳಿ

ಪರಿಪೂರ್ಣತೆ ಎಂಬುದು ವ್ಯಕ್ತಿತ್ವ ವಿಕಾಸದ ದೃಷ್ಟಿಯಿಂದ ಆಗುತ್ತಾ ಸಾಗುವ ಒಂದು ಪ್ರಕ್ರಿಯೆ. ಮಾಗಿದಷ್ಟು ಬೀಜ ಬಲಿಯುತ್ತದೆ, ಬೆಳಸು ಫಲಿಸುತ್ತದೆ ಎಂಬ ಧಾಟಿಯ ವಿಚಾರಗಳು ಈ ಲೇಖನದಲ್ಲಿವೆ.

ಜಗತ್ತು ಸದಾ ವಿಕಾಸಶೀಲವಾದುದು; ವಿಶ್ವದಲ್ಲಿ ಯಾವಾಗಲೂ ಗೋಚರಾಗೋಚರ ವಿದ್ಯಮಾನಗಳು ನಡೆಯುತ್ತಲೇ ಇವೆ ಎಂದು ವಿಜ್ಞಾನ ಹೇಳುತ್ತದೆ. ನಮ್ಮ ಬೃಹದಾಕಾರದ ಭೂಮಿ ಇಂತಹ ವಿಕಾಸ ಶೀಲ ವಿಶ್ವದ ಒಂದು ಸಣ್ಣ ಬಿಂದು. ಈ ಭೂಮಿಯ ಮೇಲ್ಮೈ ಹಾಗೂ ಒಳಮೈ ಲಕ್ಷಣಗಳಲ್ಲೂ ಕಾಲಕಾಲಕ್ಕೆ ಅನೇಕ ಬದಲಾವಣೆಗಳು ಆಗಿವೆ, ಆಗುತ್ತಿವೆ ಎಂಬುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಭೂಮಿಯ ಮೇಲ್ಮೈ ಲಕ್ಷಣದ ಒಂದು ಭಾಗ ಜೀವರಾಶಿ; ಆ ಜೀವರಾಶಿಯ ಒಂದಂಶ ಮನುಷ್ಯ. ಭೂಮಿಯ ಮೇಲಿನ ಜೀವರಾಶಿಗೂ, ಅಂತೆಯೇ ಮನುಷ್ಯನಿಗೂ ವಿಕಾಸಶೀಲತೆ ಉಂಟೇಉಂಟು. ತನ್ನಲ್ಲಿನ, ತನ್ನ ಸುತ್ತಲಿನ ಮತ್ತು ಅದರಾಚೆಗಿನ ಬದಲಾವಣೆಗಳನ್ನು ಅರ್ಥಾತ್ ಬೆಳವಣಿಗೆಗಳನ್ನು ನೋಡಿಯೇ ಮನುಷ್ಯ ಅನ್ವೇಷಣಮುಖಿಯೂ ಆದ ಎನಿಸುತ್ತದೆ. ಈ ವಿಕಾಸಶೀಲತೆ ಮತ್ತು ಅನ್ವೇಷಣಾಶೀಲತೆ ಪೈಪೋಟಿಗೆ ನಿಂತಿವೆಯೋ ಎಂಬಂತೆ ವಿಜ್ಞಾನ ಬೆಳೆಯುತ್ತಿದೆ. ನಾವು ಬದುಕುತ್ತಿರುವ ಈ ಜಗತ್ತಿನಲ್ಲಿ ಸಂಭವಿಸುವ ವಿದ್ಯಮಾನಗಳಿಗೂ, ಅದನ್ನು ತಿಳಿಯುವ ಹಂಬಲದಲ್ಲಿ ಮನುಷ್ಯ ರೂಢಿಸಿಕೊಂಡ ವಿದ್ಯೆಗೂ ಕೊನೆಯೆಂಬು ದೇನಾದರೂ ಇದೆಯೇ ಎಂದು ಪ್ರಶ್ನಿಸಿಕೊಂಡರೆ ಉತ್ತರಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ವಿಶ್ವ ಕೊನೆಗೊಂಡಾಗ ಮಾತ್ರ ಅದರ ವಿಕಾಸಶೀಲತೆಗೂ ಕೊನೆ; ಅರಿವಿನ ಹಂಬಲದ ಫಲಿತವಾದ ವಿದ್ಯೆಗೂ ಕೊನೆ. ಇದು ಸದ್ಯಕ್ಕೆ ಸಾಧ್ಯವಿಲ್ಲದ ಮಾತು. ಶೂನ್ಯದಿಂದ ಏನನ್ನೂ ಸೃಷ್ಟಿಸುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಈ ಜಗತ್ತಿನಲ್ಲಿರುವ ಯಾವುದನ್ನೂ ನಾಶಮಾಡುವುದು ಸಾಧ್ಯವಿಲ್ಲ. ನಮ್ಮ ಕಣ್ಣೆದುರಿನ ವಸ್ತುಗಳನ್ನು ನಾಶಪಡಿಸಿದೆವು ಎಂಬುದು ಬರಿಯ ಭ್ರಮೆ. ನಾವು ನಾಶಮಾಡಿದೆವು ಎಂದುಕೊಂಡದ್ದು ತನ್ನ ಸ್ವರೂಪದಲ್ಲಲ್ಲದಿದ್ದರೂ ಮೂಲಧಾತು ರೂಪದಲ್ಲಾದರೂ ಈ ವಿಶ್ವಗರ್ಭದಲ್ಲಿ ಇದ್ದೇ ಇರುತ್ತದೆ. ಆದುದರಿಂದ ವಿಶ್ವದ ವಿಕಾಸಶೀಲತೆಗೂ,

ಅದನ್ನರಿಯಬೇಕೆಂಬ ಅನ್ವೇಷಣ ಶೀಲತೆಗೂ ಕೊನೆಯೆಂಬುದಿದೆಯೇ ಎಂಬ ಪ್ರಶ್ನೆಗೆ ಅಂತಿಮವಾಗಿ ದೊರೆಯುವ ಉತ್ತರ ಇಲ್ಲ ಎಂಬುದೇ ಆಗಿದೆ. ಇದನ್ನು ತಿಳಿಸಲೆಂದೇ ತೋರುತ್ತದೆ, 'ವಿದ್ಯೆಗೆ ಕೊನೆಯಿಲ್ಲ' ಎಂಬ ಮಾತು ಪ್ರಚಲಿತವಿದೆ.

ಮಾನವೇತಿಹಾಸವನ್ನೂ ಸಮಕಾಲೀನ ಬದುಕನ್ನೂ ಕುರಿತು ಗಾಢವಾಗಿಯೂ ಆಪ್ತವಾಗಿಯೂ ಆಲೋಚಿಸುವಾಗ ಕೆಲವರನ್ನಾದರೂ 'ಪರಿಪೂರ್ಣ ಮಾನವ' ರೆಂದು ಕರೆಯಬೇಕು ಎನಿಸುವುದು ಸಹಜ. ಇದು ವ್ಯಕ್ತಿತ್ವ ವಿಕಾಸಕ್ಕೂ ಅಂಥವರು ಮಾಡಿದ ಕೆಲಸಗಳಿಗೂ ಸಂಬಂಧಪಟ್ಟ ಮಾತು. 'ಪರಿಪೂರ್ಣತೆ' ಎಂಬ ಮಾತಿಗೆ Fulness, Perfection, Satisfaction ಎಂಬ ಅರ್ಥಗಳಿವೆ. ಸಮಗ್ರತೆ, ನಿರ್ದುಷ್ಟತೆ, ಸಂತೃಪ್ತಿ ಎಂಬುದು ಯಾವ ಮನುಷ್ಯನಲ್ಲಾದರೂ ಯಾವ ದೃಷ್ಟಿಯಿಂದಲಾದರೂ ಪೂರ್ಣ ಪ್ರಮಾಣದಲ್ಲಿ ಪೂರೈಕೆಯಾಗುವುದು ಸಾಧ್ಯವೆ ಎಂಬ ಪ್ರಶ್ನೆ ತತ್ವಾರ್ಥಲೋಕದಲ್ಲಿ ಕೇಳಿಸದೇಯಿಲ್ಲ. ಈ ಪ್ರಶ್ನೆಯನ್ನು ಉತ್ತರಿಸುವುದೂ ಅಷ್ಟು ಸುಲಭವಲ್ಲ. ಮನುಷ್ಯನ ಭೌತಿಕ ಮತ್ತು ಬೌದ್ಧಿಕ ಚಹರೆಗಳಲ್ಲಿ ವಿಕಾಸಶೀಲತೆ ಕಾಣಿಸಿರುವಂತೆ ಅವನ ಬದುಕಿನಲ್ಲೂ ವಿಕಾಸಶೀಲ ಗುಣಗಳು ಕಾಣಿಸಿಕೊಂಡಿವೆ. ಈ ಹಿನ್ನೆಲೆಯಲ್ಲಿ ಮಾನವ ಬದುಕಿಗೆ ಸಂಬಂಧಿಸಿದಂತೆ ಕಾಲಿಕವೂ, ಕಾಲಾತೀತವೂ ಆದ ಜೀವನ ಮೌಲ್ಯಗಳು ಕಾಣಿಸಿಕೊಳ್ಳುತ್ತವೆ. ಕಾಲಿಕವೂ ಸಾರ್ವಕಾಲಿಕವೂ ಆದ ಜೀವನ ಮೌಲ್ಯಗಳನ್ನು ಪ್ರತಿಪಾದಿಸಿದ, ತಮ್ಮ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಂಡು ಬಾಳಿ ಸಾಕಾರಗೊಳಿಸಿದ ಮಹಾಮಾನವರು ಏನಿದ್ದಾರೆಯೋ ಅವರೇ 'ಪರಿಪೂರ್ಣ ಮಾನವ' ರೆಂದೋ 'ಪರಿಪೂರ್ಣ ಮಾನವ'ರ ಸಂಕೇತವೆಂದೋ ಕರೆಸಿಕೊಳ್ಳಬಹುದಾದವರು. ಅಂದರೆ ಇವರಲ್ಲಿ ಮಾನವ ಬಾಳಿನ 'ಪೂರ್ಣತ್ವ' ವನ್ನು ಕಾಣಬಹುದಾದ ಲಕ್ಷಣಗಳೇನೋ ಇರುತ್ತವೆ; ಅಂದಮಾತ್ರಕ್ಕೆ ಇವರ ಬದುಕಿನಾಚೆಗಿನ ಬದುಕನ್ನು ರೂಪಿಸುವಂತಹುದು ಏನೂ ಇಲ್ಲ ಎಂದುಕೊಳ್ಳುವಂತಿಲ್ಲ. ಹಾಗಂದುಕೊಂಡರೆ ವಿಕಾಸಶೀಲ ಬದುಕಿಗೆ ಸ್ಥಗಿತತೆಯನ್ನು ತಂದುಕೊಂಡಂತಾಗುತ್ತದೆ. ಆದುದರಿಂದ 'ಪರಿಪೂರ್ಣತೆ' ಎಂಬುದು ಒಂದು ಗ್ರಹಿಕೆ ಅಥವಾ ಒಂದು ಅಭಿಪ್ರಾಯ ಎಂದು ತಿಳಿಯುವುದು ಮೇಲು ಎನಿಸುತ್ತದೆ.

'ಪರಿಪೂರ್ಣತೆ' ಎಂಬುದನ್ನು ಒಂದು ಆದರ್ಶವಾಗಿ ಪರಿಗಣಿಸುವುದೂ ಸಾಧ್ಯ; ಇದೇ ಸರಿಯಾದ ನಿಲುವು. ಸತ್ಯ, ಅಹಿಂಸೆ, ಸಹಬಾಳ್ವೆಗೆ ಕಾರಣವಾಗುವ ದಯೆ, ಕರುಣೆ, ಮಾನವಪ್ರೀತಿ ಮೊದಲಾದ ಜೀವನ ಮೌಲ್ಯಗಳನ್ನು ಬದುಕುತ್ತಾ ಉಪದೇಶಿಸುತ್ತಾ ಮನುಕುಲದ ಕಲ್ಯಾಣಕ್ಕಾಗಿ ಸ್ವಂತ ಬದುಕಿನ ಹಿತಾಸಕ್ತಿಗಳನ್ನು, ಸುಖ-ಸಂತೋಷಗಳನ್ನು ತ್ಯಾಗಮಾಡಿದ, ಇತರರ ಕ್ಷೇಮವನ್ನೇ ಅನವರತವೂ

ಅಪೇಕ್ಷಿಸುವ ಮಹಾವ್ಯಕ್ತಿಗಳ ಬಗೆಗೆ ನಮ್ಮಲ್ಲಿ ಮೂಡುವ ಗೌರವಭಾವವನ್ನು ಅಭಿಪ್ರಾಯದ ಮಟ್ಟಕ್ಕೆ ಇಳಿಸುವುದು ಸರಿಯಲ್ಲವೆಂದೇ ತೋರುತ್ತದೆ. ಅಭಿಪ್ರಾಯ ಸದಭಿಪ್ರಾಯವಾಗಿದ್ದರೆ ಕೊರತೆಯಿಲ್ಲ. ಆದರೆ ಎಷ್ಟೋ ವೇಳೆ ಅಭಿಪ್ರಾಯಗಳು ಸ್ವಾರ್ಥಮೂಲದವೂ ಸ್ವಜನ ಅಥವಾ ಸ್ವಹಿತಾಸಕ್ತಿ ಪ್ರೇರಿತವೂ ಆಗಿರುತ್ತದೆ. ಈ ಅಪಾಯದಿಂದ ಪಾರಾಗುವುದಕ್ಕಾಗಿಯೇ ನಮ್ಮ ಸದಭಿಪ್ರಾಯಗಳನ್ನು ಆದರ್ಶೀಕರಿಸುವ ಪ್ರವೃತ್ತಿ ತಲೆದೋರಿದಂತೆ ಕಾಣುತ್ತದೆ. ಆದರ್ಶಗಳು ಉತ್ತಮ ಜೀವನದ ಪ್ರೇರಕಗಳಾಗಿ ಕೆಲಸ ಮಾಡುತ್ತವೆ; ಆದರೆ ಯಾವಾಗಲೋ ಒಮ್ಮೆ, ಯಾರೋ ಒಬ್ಬರಲ್ಲಿ ಅವು ಸಾಕಾರಗೊಂಡಂತೆ ಕಾಣಿಸಿಕೊಳ್ಳುತ್ತವೆ. ಅವರೇ ನಮ್ಮ ಗ್ರಹಿಕೆಯ ಪರಿಪೂರ್ಣ ಮಾನವರು ಅಥವಾ ಆದರ್ಶ ಪುರುಷರು; ಬದುಕಿನ ಪರ್ವಕಾಲದಲ್ಲಿ ಗೋಚರಿಸುವಂತಹವರು; ಬುದ್ಧ, ಏಸು, ಬಸವ, ಗಾಂಧಿಯಂತಹವರು. ಇಂತಹವರೂ ತಮ್ಮ ಸಮಕಾಲೀನ ಸಂದರ್ಭದಲ್ಲೂ, ಬದಲಾದ ಕಾಲಧರ್ಮದಲ್ಲೂ ಕೆಲವು ಪ್ರಶ್ನೆಗಳಿಗೆ ಗುರಿಯಾಗಿದ್ದಾರೆ. ಅಂದರೆ ಯಾರನ್ನೂ ನಾವು ಆದರ್ಶಪುರುಷರು, ಮಹಾತ್ಮರು ಎಂದು ಕರೆಯುತ್ತೇವೆ. ಅವರು ಸಹ ಪ್ರಶ್ನಾತೀತರಲ್ಲ ಎಂದಂತಾಯಿತು. ಇದರರ್ಥ ಮಹಾತ್ಮರ ಬದುಕಿನಾಚೆಗೂ ಬದುಕನ್ನು ಕಾಣುವುದು ಸಾಧ್ಯ. ಆದರ್ಶ ಎಂಬುದು ಅನಂತವೇ ಹೊರತು ಅಂತ್ಯ ಅಲ್ಲ ಎಂಬುದೇ ಆಗಿದೆ. ಆದುದರಿಂದ 'ಪರಿಪೂರ್ಣತೆ' ಎಂಬುದು ವ್ಯಕ್ತಿತ್ವ ವಿಕಾಸದ ದೃಷ್ಟಿಯಿಂದಲೂ ಆಗುತ್ತಾ ಸಾಗುವ, ಕೊನೆಗಾಣದ ಒಂದು ಪ್ರಕ್ರಿಯೆ. 'ಆಗು ಆಗು ಆಗು, ಅನಂತ ತಾನ್ ಅನಂತವಾಗು' ಎಂಬುದೇ ಅದರ ಮಾಗುವಿಕೆಯ ಮಂತ್ರ. ಇದು ಮಾಗಿದಷ್ಟೂ ಬೀಜ ಬಲಿಯುತ್ತದೆ, ಬೆಳಸು ಫಲಿಸುತ್ತದೆ.

■

ನುಡಿ ಮುತ್ತುಗಳು

ಮಿತ್ರರನ್ನೇನೂ ಹಣ ಖರೀದಿಸಲಾರದು, ಆದರೆ ಅದು ಉತ್ತಮ ದರ್ಜೆಯ ಶತ್ರುವನ್ನು ಪಡೆಯಬಲ್ಲದು – **ಸ್ಪೈಕ್ ಮಿಲ್ಲಿಗನ್**

ಕ್ರಿಯಾಶೀಲರಾದ ಅಲ್ಪಸಂಖ್ಯಾತರ ಮಾರ್ಗದರ್ಶನವಿಲ್ಲದೆ ಪ್ರಜಾಪ್ರಭುತ್ವ ಉಳಿಯಲಾರದು. – **ಹಾರ್ಲನ್ ಸ್ಟೋನ್**



ಶಿಕ್ಷಣದ ಹಳೆಯ ರಚನೆ ಅಶೋಭನೀಯ

– ವಿನೋಬಾ

ಕಳೆದ ಸೆಪ್ಟೆಂಬರ್ ಮಾಹೆಯಲ್ಲಷ್ಟೆ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಇಲ್ಲಿ ಶಿಕ್ಷಣದ ಬಗ್ಗೆ ಕುರಿತಾದ ವಿನೋಬಾರವರ ವಿಚಾರಗಳನ್ನು ಪ್ರಸ್ತುತಪಡಿಸಲಾಗಿದೆ. ವಿನೋಬಾ ತಮ್ಮ ಜೀವಿತಕಾಲವಿಡೀ ವಿವಿಧ ಬಗೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು. ಅವರ ಶೈಕ್ಷಣಿಕ ವಿಚಾರಗಳು ಸದಾ ಕಾಲಕ್ಕೆ ಪ್ರಸ್ತುತ – ಸಂ)

ಶಿಕ್ಷಕರಲ್ಲಿ ಕನಿಷ್ಟ ಮೂರು ಗುಣಗಳ ಅವಶ್ಯಕತೆ ಇರುತ್ತದೆ. ಒಂದು ಗುಣ, ವಿದ್ಯಾರ್ಥಿಗಳ ಮೇಲೆ ಅವರದು ಪ್ರೇಮವಿರಬೇಕು, ವಾತ್ಸಲ್ಯವಿರಬೇಕು, ಅನುರಾಗವಿರಬೇಕು. ಇದು ಶಿಕ್ಷಕರಲ್ಲಿರಬೇಕಾದ ಬಹು ದೊಡ್ಡಗುಣ. ಇದಿಲ್ಲದೆ ಶಿಕ್ಷಕರಾಗಲು ಸಾಧ್ಯವೇ ಇಲ್ಲ. ಶಿಕ್ಷಕರ ಎರಡನೆಯ ದೊಡ್ಡಗುಣ ಅವರು ನಿತ್ಯ, ನಿರಂತರ ಅಧ್ಯಯನ ಶೀಲರಾಗಿರಬೇಕು. ದಿನಾಲು ಹೊಸ – ಹೊಸ ಅಧ್ಯಯನ ಮಾಡುತ್ತಿರಬೇಕು ಮತ್ತು ಜ್ಞಾನದ ಶುದ್ಧಿ ಸತತವಾಗಿ ಆಗುತ್ತಾ ಹೋಗಬೇಕು. ಈ ಪ್ರಕಾರವಾಗಿ ಅವರು ಜ್ಞಾನದ ಸಮುದ್ರವಾಗಬೇಕು. ಅವರು ಜ್ಞಾನದ ಉಪಾಸನೆ ಮಾಡಬೇಕು.

ಈ ಎರಡು ಗುಣಗಳು ಶಿಕ್ಷಕರಲ್ಲಿ ಎಲ್ಲಕ್ಕಿಂತ ಮೊದಲು ಇರಬೇಕು. ಒಂದು ವೇಳೆ ನಿಮ್ಮಲ್ಲಿ ವಾತ್ಸಲ್ಯವಿದೆ ಮತ್ತು ಜ್ಞಾನವಿಲ್ಲವಾದರೆ ನೀವು ಉತ್ತಮ ಮಾತೆ ಆಗಬಹುದು. ಮಾತೆಯರಲ್ಲಿ ವಾತ್ಸಲ್ಯ ತುಂಬಿರುತ್ತದೆ, ಆದರೆ ಜ್ಞಾನವಿರುತ್ತದೆಂದು ಹೇಳಲು ಆಗುವುದಿಲ್ಲ. ಆದರೆ ಕೆಲವು ತಾಯಂದಿರು

ಜ್ಞಾನವನ್ನು ಹೊಂದಿದಂತವರಾಗಿರುತ್ತಾರೆ. ಕಪಿಲ ಮಹಾಮುನಿಯ ಮಾತೆ ಇದೇ ರೀತಿ ಇದ್ದರು. ಅವಳಿಗೆ ಕಪಿಲ ಮಹಾಮುನಿ ಉಪದೇಶಕೊಟ್ಟರು. ಇಂತಹ ತಾಯಂದಿರು ಇನ್ನೂ ಇರಬಹುದು. ಆದರೆ ಸಾಮಾನ್ಯವಾಗಿ ತಾಯಂದಿರಲ್ಲಿ ಜ್ಞಾನದ ಅಪೇಕ್ಷೆಯನ್ನು ನಾನು ಇಟ್ಟಿರುವುದಿಲ್ಲ. ಪ್ರೇಮ ಮತ್ತು ವಾತ್ಸಲ್ಯದ ಅಪೇಕ್ಷೆಯನ್ನು ಇರಿಸುತ್ತೇವೆ. ನಿಮ್ಮಲ್ಲಿ ಒಂದು ವೇಳೆ ವಾತ್ಸಲ್ಯ ಇದ್ದು ಜ್ಞಾನವಿಲ್ಲವಾದರೆ ನೀವು ಪ್ರವೃತ್ತಿ - ಪರಾಯಣ ಆಗಬಹುದು. ಮಾತೆಯ ಸ್ಥಾನದಿಂದ ಉತ್ತಮ ಪ್ರವೃತ್ತಿ ನೀವು ಮಾಡಬಹುದು. ನಿಮ್ಮಲ್ಲಿ ಪ್ರೇಮವಿಲ್ಲ, ವಾತ್ಸಲ್ಯವಿಲ್ಲ ತಟಸ್ಥತೆಯಿದ್ದು ಜ್ಞಾನದ ಉಪಾಸನೆ ಮಾಡಿದಲ್ಲಿ ನೀವು ತತ್ವಜ್ಞಾನಿಯಾಗಬಹುದು, ವಿಚಾಶೀಲರಾಗಬಹುದು, ನಿವೃತ್ತಿನಿಷ್ಟರಾಗಬಹುದು, ದೇಶಕ್ಕೆ ಬಹು ದೊಡ್ಡ ಲಾಭ ದೊರೆಯಬಹುದು, ಆದರೆ ನೀವು ಗುರು ಆಗಲಾರಿರಿ. ನಿರಂತರ ಚಿಂತನಶೀಲತೆ - ಜ್ಞಾನದ ವೃದ್ಧಿ ಪ್ರತಿದಿನ ಆಗುತ್ತಲಿರಬೇಕು ಹಾಗೂ ಶಿಷ್ಯರ ಬಗ್ಗೆ ಅತ್ಯಂತ ವಾತ್ಸಲ್ಯ ಮತ್ತು ಪ್ರೇಮ ಎಂಬ ಈ ಗುಣಗಳು ಇರಲೇಬೇಕು.

ಗುರುವಿನಲ್ಲಿ ಮೂರನೆಯ ಗುಣ ಕೂಡ ಇರಬೇಕು. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳ ತಲೆಯಲ್ಲಿ ರಾಜನೀತಿಯ ದೊಡ್ಡ ಆಕ್ರಮಣವಿದೆ. ಇವರು ಶಿಕ್ಷಕರ ಕೈಯಲ್ಲಿದ್ದಾರೆ. ಶಿಕ್ಷಕರೇನಾದರೂ ರಾಜನೀತಿಯ ಬಣ್ಣ ಬಳೆದುಕೊಂಡಿದ್ದರೆ ಮತ್ತು ರಾಜನೀತಿಯ ವರದ ಹಸ್ತ ಅವರ ತಲೆಯ ಮೇಲಿದ್ದರೆ ಸಮುದ್ರದ ಬಳಿಗೆ ಹೋದ ಗಂಗೆಯನ್ನು ಸಮುದ್ರ ತಿರಸ್ಕರಿಸಿದರೆ ಯಾವ ಸ್ಥಿತಿ ಗಂಗೆಯದಾಗುತ್ತದೋ ಅದೇ ಸ್ಥಿತಿ ವಿದ್ಯೆಯದಾಗುತ್ತದೆ. ವಿದ್ಯೆ ಪ್ರೋಫೆಸರುಗಳ, ಆಚಾರ್ಯರ ಮತ್ತು ಶಿಕ್ಷಕರ ಶರಣು ಹೋಗಿದ್ದಾಳೆ. ಆದರೆ ಅವರು ಅದನ್ನು ಸ್ವೀಕರಿಸಲಿಲ್ಲ. ರಾಜನೀತಿಯ ದೃಷ್ಟಿಯಿಂದಲೇ ಯೋಚನೆ ಮಾಡಿದರು. ಶಿಕ್ಷಕರಿಗೆ ಬಹಳ ದೊಡ್ಡ ಅಧಿಕಾರವಿದೆಯೆಂಬುದನ್ನು ನಾವು ತಿಳಿದುಕೊಳ್ಳಬೇಕು. ಆದ್ದರಿಂದ ಅವರೆಲ್ಲರೂ ರಾಜನೀತಿಯಿಂದ ಮುಕ್ತರಾಗಿರಲಿ. ಒಬ್ಬ ಅಸ್ಪತಾಲದ ಸೇವಕನಿದ್ದಾನೆಂದು ತಿಳಿಯಿರಿ ಅವನು ಯಾವುದೋ ರಾಜಕಾರಣಿಯ ಮಿತ್ರನಾಗಿದ್ದಾನೆ ಒಂದು ವೇಳೆ ಅವನು ಪಾರ್ಟಿ ಪಾಲಿಟಿಕ್ಸನ್ನು ಗಮನದಲ್ಲಿರಿಸಿಕೊಂಡು ರೋಗಿಗಳ ಪಕ್ಷಪಾತಪೂರ್ಣ ಸೇವೆ ಮಾಡುತ್ತಾ ಕೆಲವರಿಗೆ ಹೆಚ್ಚು, ಕೆಲವರಿಗೆ ಕಡಿಮೆ ಈ ರೀತಿ ಸೇವೆ ಮಾಡುತ್ತಿದ್ದರೆ ಅಸ್ಪತಾಲದ ಸೇವೆಗಾಗಿ ಅವನು ನಾಲಾಯಕನಾಗುತ್ತಾನೆ. ಅಸ್ಪತಾಲದ ಸೇವೆ ಮಾಡುವ ಮನುಷ್ಯ ಪಕ್ಷಮುಕ್ತನಾಗಿರಬೇಕು. ಒಂದು ವೇಳೆ ಅವನು ಪಕ್ಷಯುಕ್ತನಾದರೆ ಆ ಕೆಲಸಕ್ಕಾಗಿ ಲಾಯಕವಾಗುವುದಿಲ್ಲ. ಇದೇ ಪ್ರಕಾರ ಒರ್ವ ನ್ಯಾಯಾಧೀಶ. ನ್ಯಾಯಾಧೀಶ ಯಾವುದೇ ಒಂದು ಪಕ್ಷದವನಾಗಿರಲು ಸಾಧ್ಯವೇ? ನ್ಯಾಯ ಕೊಡುವಾಗ ಪಕ್ಷಪಾತಮಾಡಲು ಸಾಧ್ಯವೇ? ಮಾಡಲು ಸಾಧ್ಯವಿಲ್ಲ. ಒಂದು ವೇಳೆ ಹಾಗೇನಾದರೂ

ಮಾಡಿದಲ್ಲಿ ಅದು ತಪ್ಪೆಂದು ತಳಿಯಲಾಗುವುದು. ಇದೇಆ ಸ್ಥಾನ ಶಿಕ್ಷಕರದ್ದಾಗಿದೆ. ಶಿಕ್ಷಕ ರಾಜನೀತಿಯಲ್ಲಿ ಬಿದ್ದರೆ ಅವರು ಕರ್ತ ಅಲ್ಲ, ಕರ್ಮ. ಅವರ ಕರ್ತೃತ್ವ ಇಲ್ಲ. ಅವರು ಕರ್ಮಣೀ ಪ್ರಯೋಗ, ಕರ್ತರಿ ಪ್ರಯೋಗವಲ್ಲ. ಇಂತಹ ಸ್ಥಿತಿಯಲ್ಲಿ ಶಿಕ್ಷಕರ ವೃತ್ತಿ ಅರ್ಥವಿಹೀನವಾಗುತ್ತದೆ. ಅವರದು ಏನು ಸ್ಥಾನವಿದೆಯೋ ಅದು ಇರುವುದಿಲ್ಲ.

ಪ್ರಾಚೀನ ಕಾಲದಲ್ಲಿ ಶಿಕ್ಷಣದ್ದು ಈ ಸ್ಥಿತಿ ಇರಲಿಲ್ಲ. ಭಗವಾನ್ ಕೃಷ್ಣನ ಕಥೆಯಿದೆ. ಕೃಷ್ಣ ದೇಶವನ್ನು ಕಂಸನಿಂದ ಮುಕ್ತಿ ಮಾಡಿದ. ಇಷ್ಟು ದೊಡ್ಡ ಪರಾಕ್ರಮವನ್ನು ಅವನು ತನ್ನ ಬಾಲ್ಯದಲ್ಲಿಯೇ ಮಾಡಿದ. ನಂತರ ಅವನ ತಂದೆಗೆ ಮಗನಿಗೆ ಶಿಕ್ಷಣ ದೊರೆತಿಲ್ಲವೆಂಬ ವಿಷಯ ಜ್ಞಾಪಕಕ್ಕೆ ಬಂದಿತು. ಮಗನ ಬಳಿ ಯಾವುದೇ ಡಿಗ್ರಿ ಕೂಡ ಇಲ್ಲ. ಆದ್ದರಿಂದ ಇವನನ್ನು ಯಾವುದಾದರು ಗುರುವಿನ ಬಳಿ ಕಳುಹಿಸಬೇಕು. ಗುರುವಿನ ಕಡೆಗೆ ಶಿಕ್ಷಣಕ್ಕಾಗಿ ಕಳುಹಿಸಿಕೊಡಲಾಯಿತು. ಗುರು ಯೋಚನೆ ಮಾಡಿದ 'ಈತ ಮಹಾನ್ ಅವತಾರ. ಇವನ ಕೈಯಿಂದ ಕಂಸಮುಕ್ತಿಯಾಯಿತು. ಶಿಕ್ಷಣಕ್ಕಾಗಿ ನನ್ನ ಬಳಿಗೆ ಕಳುಹಿಸಿದ್ದಾರೆ. ಒಳ್ಳೆಯದು ಇವನಿಗೆ ಶಿಕ್ಷಣ ಕೊಡುವೆ'. ಹೀಗೆ ಆಲೋಚಿಸಿ ಅವನನ್ನು ಓರ್ವ ಬಡ ಬ್ರಾಹ್ಮಣ ವಿದ್ಯಾರ್ಥಿಯ ತರಗತಿಯಲ್ಲಿ ಇಟ್ಟ. ನೀವಿಬ್ಬರೂ ಕಾಡಿಗೆ ಹೋಗಿ ಸೌದೆ ತೆಗೆದುಕೊಂಡು ಬನ್ನಿ ಎಂದು ಗುರು ಹೇಳಿದ. ಈ ಬ್ರಾಹ್ಮಣ ಹುಡುಗ ಅತ್ಯಂತ ಬಡವನಾಗಿದ್ದ ಅವನ ಹೆಸರು ಇತ್ತು ಸುದಾಮ. ಕೃಷ್ಣ ಓರ್ವ ಮಹಾನ್ ರಾಜಪುತ್ರ. ಇಬ್ಬರನ್ನೂ ಒಂದೇ ತರಗತಿಯಲ್ಲಿ ಇಟ್ಟ. ಶ್ರೀಮಂತರಿಗೆ ಪಬ್ಲಿಕ್ ಸ್ಕೂಲ್ ಮತ್ತು ಬಡವರಿಗೆ ಎರಡನೆಯ ಬಗೆಯ ಸ್ಕೂಲ್ ಅಂತ ಇರಲಿಲ್ಲ. ಈ ದಿನಗಳಲ್ಲಿ ಕೆಲವರಿಗಾಗಿ ಪಬ್ಲಿಕ್ ಸ್ಕೂಲ್ ಇರುತ್ತದೆ. ಎಲ್ಲಿಗೆ ಪಬ್ಲಿಕ್ ಹೋಗಲು ಸಾಧ್ಯವಿಲ್ಲವೋ ಅದು ಪಬ್ಲಿಕ್ ಸ್ಕೂಲ್. ಇಂತಹ ಭೇದವನ್ನಂತೂ ಆ ಗುರು ಮಾಡಲಿಲ್ಲ. ಅವರಿಬ್ಬರಿಗೂ ಶರೀರ ಶ್ರಮ (Physical Labour) ಮಾಡುವ ಸರಿಸಮನಾದ ಕೆಲಸ ಕೊಟ್ಟ. ಇಬ್ಬರೂ ಶ್ರಮದ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದರು. ಅವರಿಬ್ಬರಿಗೂ ಗುರು ಆರು ತಿಂಗಳ ನಂತರ ಪ್ರಮಾಣ ಪತ್ರ ಕೊಟ್ಟ. ಕೃಷ್ಣ ಸುದಾಮನಿಗೆ ಅಂದ "ನಿನ್ನ ಕೆಲಸ ಬಹಳ ಚೆನ್ನಾಗಿತ್ತು. ನೀನು ಜ್ಞಾನಿಯಂತೂ ಇದ್ದೇ ಇದ್ದೀಯ. ಕೇವಲ ನನ್ನ ಗೌರವ ಹೆಚ್ಚಿಸಲು ನೀನು ಬಂದಿದ್ದೀಯೆ. ನೀನು ಸೇವೆಯ ಕೆಲಸ ಚೆನ್ನಾಗಿ ಮಾಡಿದೆ. ಯಾರು ಸೇವೆಯ ಕೆಲಸ ಮಾಡುತ್ತಾರೊ ಅವರಿಗೆ ಖಂಡಿತವಾಗಿಯೂ ಜ್ಞಾನ ದೊರೆಯುತ್ತದೆ. ಆದ್ದರಿಂದ ಎಲ್ಲ ಜ್ಞಾನ ನಿನಗೆ ತಲುಪಿದೆ. ಈಗ ನಾನು ನಿನ್ನಿಂದ ಬೀಳ್ಕೊಳ್ಳುತ್ತೇನೆ." ನಂತರ ಕೃಷ್ಣ ಭಗವಂತ ಗುರುವಿಗೆ ನಮಸ್ಕರಿಸಲು ಹೋದ. ನನ್ನಿಂದ ಏನಾದರೂ ಕೇಳಿಕೊ ಎಂದು ಗುರು ಅಂದ. ಏನು ಕೇಳಬೇಕೆಂದು ಕೃಷ್ಣ

ಆಲೋಚಿಸಿದ " ಮಾತೃ ಹಸ್ತೇನ ಭೋಜನಂ – ನನಗೆ ಸಾಯುವವರೆಗೆ ತಾಯಿಯ ಕೈಯಿಂದ ಊಟ ಸಿಗಲಿ".

ನಮ್ಮ ದೇಶದಲ್ಲಿ ಗುರುವಿನ ಮೇಲೆ ಸರ್ಕಾರದ ಅಧಿಕಾರವಿರಲಿಲ್ಲ. ಗುರು ಆ ಅಧಿಕಾರದ ಆಚೆಗೆ ಇದ್ದರು ಎಂಬುದನ್ನು ತಿಳಿಸಲು ಈ ಕಥೆ ಹೇಳಿದೆ. ಯಾವ ರೀತಿ ನ್ಯಾಯಾಲಯ ಆಳ್ವಿಕೆಯ ಮೇಲ್ಮಟ್ಟದ್ದಾಗಿದೆಯೋ ಮತ್ತು ಸೂಕ್ತವೆನಿಸಿದಾಗಲೆಲ್ಲ ಆಳ್ವಿಕೆಯ ವಿರುದ್ಧ ತೀರ್ಮಾನ ಕೈಗೊಳ್ಳಲಾಗುತ್ತದೋ ಅದೇ ರೀತಿ ಶಿಕ್ಷಣ ವಿಭಾಗವೂ ಕೂಡ ಆಳ್ವಿಕೆಯ ಕಕ್ಷೆಯ ಹೊರಗಿರಬೇಕು. ನ್ಯಾಯ ವಿಭಾಗಕ್ಕೆ ಸರ್ಕಾರವು ವೇತನ ಕೊಡುತ್ತದೆ. ಆದರೂ ಕೂಡ ನ್ಯಾಯು ವಿಭಾಗದ ಮೇಲೆ ಸರ್ಕಾರದ ಅಂಕುಶವಿರುವುದಿಲ್ಲ. ನ್ಯಾಯ ವಿಭಾಗಕ್ಕೆ ಅನ್ವಯಿಸುವ ಈ ಮಾತು ಶಿಕ್ಷಣ ಕ್ಷೇತ್ರಕ್ಕೂ ಅನ್ವಯಿಸಬೇಕು. ಹಾಗಾದಾಗ ಮಾತ್ರ ಶಿಕ್ಷಣ ಬೆಳೆಯುವುದು. ಈಗ ನಾವು ರಾಜಕಾರಣಿಗಳ ಹಿಡಿತದಲ್ಲಿದ್ದೇವೆ. ಆ ಹಿಡಿತದಿಂದ ಬಿಡುಗಡೆಯಾಗದ ಹೊರತು ಶಿಕ್ಷಣ ಕ್ಷೇತ್ರದ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲ.

ಹಳೆಯ ಸಂಗತಿ, ೧೯೪೭ರ ಹದಿನೈದು ಅಗಸ್ತಿನ ಸ್ವಾತಂತ್ರ್ಯದ ದಿವಸ. ನಾನು ಆ ದಿನಗಳಲ್ಲಿ ವರ್ಧಾದ ಹತ್ತಿರ ಪವನಾರನಲ್ಲಿ ಇದ್ದೆ. ಜನರು ನನ್ನನ್ನು ಭಾಷಣಕ್ಕಾಗಿ ವರ್ಧಾಕ್ಕೆ ಕರೆದರು. ನಾನು ಅವರನ್ನು ಕೇಳಿದೆ, "ನೋಡಿ ಅಣ್ಣಂದಿರ, ಸ್ವರಾಜ್ಯ ದೊರೆಯಿತು ಹಾಗಾದರೆ ಹಳೆಯ ಬಾವುಟವನ್ನು ಒಂದು ದಿನದ ಮಟ್ಟಿಗಾದರೂ ಹಾರಿಸಬಹುದೇ? ಅವರು ಉತ್ತರಿಸಿದರು : ಹಾರಿಸಲು ಸಾಧ್ಯವಿಲ್ಲ." ಒಂದು ವೇಳೆ ಹಳೆಯ ಬಾವುಟ ಹಾರಿಸಿದರೆ ಹಳೆಯ ಆಡಳಿತವೆ ನಡೆಯುತ್ತಿದೆ ಎಂದರ್ಥವಾಗುತ್ತದೆ. ಯಾವ ರೀತಿ ಹೊಸ ಆಡಳಿತದಲ್ಲಿ ಹೊಸ ಬಾವುಟವಿರುತ್ತದೊ ಅದೇ ರೀತಿ ಹೊಸ ಆಡಳಿತದಲ್ಲಿ ಹೊಸ ಶಿಕ್ಷಣ ಬೇಕು. ಹಳೆಯ ಶಿಕ್ಷಣವೇ ಜಾರಿಯಲ್ಲಿದ್ದರೆ ಇನ್ನೂ ಕೂಡ ಹಳೆಯ ರಾಜ್ಯವೇ ನಡೆಯುತ್ತಿದೆ, ಹೊಸ ಆಡಳಿತ ಬಂದಿಲ್ಲ ಎಂದು ಅರ್ಥವಾಗುತ್ತದೆ. ಗಾಂಧೀಜಿಯವರು ದೂರದೃಷ್ಟಿಯಿಂದ ಹೊಸ ಶಿಕ್ಷಣ ನಯೀ ತಾಲೀಮ್ ಎಂಬ ಹೆಸರಿನ ಒಂದು ಪದ್ಧತಿಯನ್ನು, ಸುಚಿಸಿದರು. ಗಾಂಧೀಜಿ ಸೂಚಿಸಿದರೆಂಬ ಕಾರಣಕ್ಕಾಗಿ ಮಾನ್ಯ ಮಾಡಬೇಕೆಂದೆನೂ ಇಲ್ಲ. ಗಾಂಧೀಜಿ ಸ್ವಯಂ ಆ ರೀತಿ ಹೇಳಿದ್ದರು. ಆದರೆ ಈಗ ಹೊಸ ಶಿಕ್ಷಣದ ಮಾತೇ ಇಲ್ಲ. ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾಗಿವೆ. ಆದರೆ ಶಿಕ್ಷಣದ ಹಳೆಯ ರಚನೆ ಹೇಗಿತ್ತೊ ಹಾಗೆಯೇ ಇದೆ. ಯಾವ ಬದಲಾವಣೆ ಇಲ್ಲ. ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ದೊಡ್ಡ ಪ್ರಶ್ನೆಗಳಿವೆಯೆಂದು ಸರ್ಕಾರ ಹೇಳುತ್ತಿದೆ. Education – ಶಿಕ್ಷಣದ 'ಎಕ್ಸ್‌ಪ್ಲೋಜ಼ನ್' ಆಗಿದೆ. ದೇಶದಲ್ಲಿ ಶಿಕ್ಷಣ ಬಹಳ ವಿಸ್ತಾರವಾಗಿದೆ ಆದ್ದರಿಂದ ಹೊಸ ಹೊಸ ಸಮಸ್ಯೆ ನಮ್ಮೆದುರಿಗೆ ಬಂದು ನಿಂತಿವೆ. " ಒಳ್ಳೆಯ ವಸ್ತುವಿನಿಂದ

'ಎಕ್ಸ್‌ಪ್ಲೋಜನ್' ಆಗುತ್ತದೆಯೇ ಎಂದು ನಾನು ಕೇಳುತ್ತೇನೆ. ಒಂದು ವೇಳೆ ಶಿಕ್ಷಣದ 'ಎಕ್ಸ್‌ಪ್ಲೋಜನ್' ಆಗಿದ್ದರೆ ಶಿಕ್ಷಣ ಯಾವುದೋ ಒಂದು ಕೆಟ್ಟ ವಿಷಯವೆಂದು ಅರ್ಥವಾಗುತ್ತದೆ. ಇದು ನಿಜವಾಗಿಯೂ ಹಾಗೆಯೇ ಹಾಗಿದೆ. ಒಂದು ವೇಳೆ ನೀವು ಶಿಕ್ಷಣವನ್ನು ವಿಸ್ತರಿಸದೇ ಹೋದರೆ ಜನರು ದಡ್ಡರಾಗಿರುತ್ತಾರೆ. ಮತ್ತು ಒಂದು ವೇಳೆ ವಿಸ್ತರಿಸಿದರೆ ನಿರುಪಯೋಗಿಯಾಗುವರು. ಎಂಬಂಥ ಸ್ಥಿತಿ ದೇಶದ್ದಾಗಿದೆ. ಆದ್ದರಿಂದ ದಡ್ಡರಾಗಿರಿ ಇಲ್ಲವೇ ನಿರುಪಯೋಗಿಯಾಗಿ ಎರಡರಲ್ಲಿ ಒಂದಾಗಬೇಕು. ಇವೆರಡರಲ್ಲಿ ಯಾವ ಮಾತನ್ನು ನೀವು ಒಪ್ಪುವಿರಿ ನೀವು ಯೋಚಿಸಿ" ಈ ಮಾತನ್ನು ನಾನು ಜಾಕೀರ್ ಸಾಹಬ್ ಮುಂದೆ ಇಟ್ಟೆ. ಆಗ ಅವರೆಂದರು " ವಿನೋಬಾಜಿ ನೀವು ಯಾರಿಗೆ ಈ ಶಿಕ್ಷಣ ದೊರೆಯುತ್ತದೊ ಅವರು ನಿರುಪಯೋಗಿ ಆಗುತ್ತಾರೆ ಎಂದು ಹೇಳುತ್ತೀರಿ ಆದರೆ ಯಾರಿಗೆ ಈ ಶಿಕ್ಷಣ ದೊರೆಯುತ್ತದೊ ಅವರು ಕೇವಲ ನಿರುಪಯೋಗಿ ಆಗುವುದಷ್ಟೇ ಅಲ್ಲ ದಡ್ಡರು ಕೂಡ ಆಗುತ್ತಾರೆ." ಎಂದು ಅಂದರು. ಅವರು ನಾನು ಹೇಳಿದ ಮಾತಿನಲ್ಲಿ ಇಷ್ಟೊಂದು ಸುಧಾರಣೆ ಮಾಡಿದರು. ಅವರ ಪ್ರಕಾರ ಅಶಿಕ್ಷಿತ ಜನರು ದಡ್ಡರಿದ್ದಾರೆ ಶಿಕ್ಷಿತ ಜನರು ದಡ್ಡರೂ ಇದ್ದಾರೆ ಮತ್ತು ನಿರುಪಯೋಗಿಯೂ ಇದ್ದಾರೆ. ಈ ಕಾರಣಕ್ಕಾಗಿ ಶಿಕ್ಷಣದ ರಚನೆಯನ್ನು ತಕ್ಷಣ ಬದಲಾಯಿಸಬೇಕು. ಆಗಿದ್ದು ಆಯಿತು ಇನ್ನಾದರೂ ಬದಲಾಯಿಸಬೇಕು.
ಹಿಂದಿಯಿಂದ ಅನು : ಸುಕೌ ■

ಘಟನೆಗಳಲ್ಲಿ ಗಾಂಧಿ :

ಎರಡು ದೃಷ್ಟಾಂತ ಕಥೆಗಳು–ಲೆಕ್ಕ ಇಡದ ಕಾರ್ಯಕರ್ತ ಮತ್ತು ಹಟಮಾರಿ ಕುರುಡಿ

– ಶ್ರೀ.ಜಿ.ಎಸ್.ಜಯದೇವ

ಗಾಂಧೀಜಿಯವರ ವ್ಯಕ್ತಿತ್ವವನ್ನು ದೂರದಿಂದ ಅರಿತವರಿಗೆ ಅವರೊಬ್ಬ ಅತಿ ವಿನಯದ, ಸೌಮ್ಯ ಸ್ವಭಾವದ, ಕಠಿಣತೆಯೇ ಇಲ್ಲದ ಸಾಧುವಿನ ಹಾಗೆ ಕಾಣುತ್ತಾರೆ. ಆದರೆ ಗಾಂಧೀಜಿಯನ್ನು ಹತ್ತಿರದಿಂದ ಬಲ್ಲವರಿಗೆ ಅವರ ಕಠಿಣ ನಿಲುವುಗಳ ಬಿಸಿ ತಟ್ಟದೆ ಇರುವುದಿಲ್ಲ. ಸಂಸ್ಕೃತ ಶ್ಲೋಕವೊಂದರ ಮಾತಿನಂತೆ "ವಜ್ರಾದಪಿ ಕಠೋರಾಣಿ ಮೃದುನಿ ಕುಸುಮಾದಪಿ" ಎಂಬಂತೆ ವಜ್ರಕ್ಕಿಂತಲೂ ಕಠೋರವಾಗಿ, ಹೂವಿಗಿಂತಲೂ ಮೃದುವಾಗಿ ನಡೆದುಕೊಳ್ಳುತ್ತಿದ್ದುದುಂಟು.

ಗಾಂಧೀಜಿಯವರ ನಿಕಟವರ್ತಿ ದೀನಬಂಧು ಅ.ಈ. ಆಂಡ್ರೂಸ್‌ರವರು ಬಹಳ ಮೃದು ಸ್ವಭಾವದವರು. ಇವರಿಗೆ ಗಾಂಧೀಜಿಯವರಂತೆ ಪರಿಸ್ಥಿತಿಗೆ ಅನುಗುಣವಾಗಿ ನಿಷ್ಠುರವಾಗಿ ಇರಲು ಬರುತ್ತಲೇ ಇರಲಿಲ್ಲ. ಅದು ೧೯೨೦ರ ಕಾಲ. ಆಂಡ್ರೂಸ್ ಅವರು ಗಾಂಧೀಜಿಯವರೊಡನೆ ಸಬರಮತಿ ಆಶ್ರಮದಲ್ಲಿ ಇದ್ದರು. ಈ ಸಂದರ್ಭದಲ್ಲಿ ಒಬ್ಬ ಯುವಕ ಗಾಂಧೀಜಿಯವರ ಅನುಕಂಪವನ್ನು ಅರಸಿ ಬಂದ. ಈತ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದ. ತನ್ನ ಹೈಸ್ಕೂಲ್ ಶಾಲಾ ಶಿಕ್ಷಕನ ಕೆಲಸಕ್ಕೆ ರಾಜೀನಾಮೆ ನೀಡಿ, ತ್ಯಾಗ ಮನೋಭಾವದಿಂದ ದೇಶಕ್ಕಾಗಿ ಈ ಕೈಂಕರ್ಯ ಕೈಗೊಂಡಿದ್ದ. ಆದರೆ ಇವನಿಗೆ ಒಂದು ಸಮಸ್ಯೆ ಎದುರಾಗಿತ್ತು. ಈತ ಸಾಕಷ್ಟು ಹಣವನ್ನು ಸಾರ್ವಜನಿಕರಿಂದ ಸಂಗ್ರಹಿಸಿದ್ದು ಅದನ್ನು ಕಾಂಗ್ರೆಸ್ ಕಾರ್ಯಚಟುವಟಿಕೆಗಳಿಗಾಗಿ ವೆಚ್ಚ ಮಾಡಿದ್ದ. ಕಾರ್ಯಕ್ರಮಗಳೆಲ್ಲಾ ಮುಗಿದ ಮೇಲೆ ಸಮಿತಿಯ ಇತರ ಸದಸ್ಯರೆಲ್ಲರೂ ಲೆಕ್ಕ ಒಪ್ಪಿಸುವಂತೆ ಕೇಳಿಕೊಂಡರು. ನಿಸ್ಪೃಹನಾಗಿ ಕೆಲಸ ಮಾಡಿದ ಈತ ಸುಳ್ಳು ಲೆಕ್ಕ, ಸುಳ್ಳು ರಶೀತಿಗಳನ್ನು ಬರೆಯುವವನಲ್ಲ. ಆದರೆ ಕೆಲಸದ ಗಡಿಬಿಡಿಯಲ್ಲಿ ಖರ್ಚು ಮಾಡಿದ ಎಲ್ಲ ವಿವರಗಳನ್ನೂ ಬರೆದುಕೊಳ್ಳದೆ ಇದ್ದುದರಿಂದ ಸುಮಾರು ಒಂದು ಸಾವಿರ ರೂ.ಗಳಿಗೆ ಲೆಕ್ಕ ಸಿಗಲಿಲ್ಲ. ಸಮಿತಿಯ ಸದಸ್ಯರು ಲೆಕ್ಕ ಒಪ್ಪಿಸುವಂತೆ ಪಟ್ಟು ಹಿಡಿದರು. ಪ್ರಾಮಾಣಿಕವಾಗಿ ಒಂದು ನಯಾಪೈಸೆ ಗೌರವಧನವನ್ನೂ ಪಡೆಯದೆ

ನಿಸ್ವಾರ್ಥದಿಂದ ಕೆಲಸ ಮಾಡಿದ್ದ ಇವನಿಗೆ ಸಮಿತಿಯ ಸದಸ್ಯರ ಕಠಿಣ ನಿಲುವು ಹಿಡಿಸಲಿಲ್ಲ. ತನ್ನ ನಿಸ್ವಾರ್ಥ ಸೇವೆಯನ್ನು ಗುರುತಿಸುವ ಕೃತಜ್ಞತೆಯೇ ಇಲ್ಲವಲ್ಲ ಎಂದುಕೊಂಡನು. ಕೊನೆಗೆ ಈ ಪ್ರಸಂಗವನ್ನು ನೇರವಾಗಿ ಗಾಂಧೀಜಿಯವರಿಗೆ ತಿಳಿಸಿ ಅವರ ಶಿಫಾರಸ್ಸಿನಿಂದ ಈ 'ಕೃತಘ್ನ' ಕಾಂಗ್ರೆಸ್ ಸಮಿತಿಯ ಸದಸ್ಯರ ಬಾಯಿ ಮುಚ್ಚಿಸಬೇಕೆಂದು ಭಾವಿಸಿ ನೇರವಾಗಿ ಸಬರಮತಿ ಆಶ್ರಮಕ್ಕೆ ಬಂದು ಗಾಂಧೀಜಿಯವರನ್ನು ಭೇಟಿಯಾದ.

ಈ ಸಮಯದಲ್ಲಿ ಗಾಂಧೀಜಿ ಮತ್ತು ದೀನಬಂಧು ಆಂಡ್ರೂಸ್‌ರವರು ಒಟ್ಟಿಗೆ ಇದ್ದರು. ಗಾಂಧೀಜಿ ಯುವಕನ ಅಹವಾಲನ್ನು ಆಮೂಲಾಗ್ರವಾಗಿ ಆಲಿಸಿದರು. ಈ ಯುವಕ ಹಣ ದುರುಪಯೋಗ ಮಾಡದಿರುವುದು ಅವರಿಗೆ ಸ್ಪಷ್ಟವಾಗಿ ಕಂಡಿತು. ಆಗ ಗಾಂಧೀಜಿ 'ನನ್ನಿಂದ ಏನಾಗಬೇಕು?' ಎಂದು ಯುವಕನನ್ನು ಕೇಳಿದರು. ಯುವಕ ಹೇಳಿದ– 'ಗಾಂಧೀಜಿ, ನೀವು ಆ ಕಾಂಗ್ರೆಸ್ ಸಮಿತಿಯ ಸದಸ್ಯರಿಗೆ, ನಾನು ನಿರಪರಾಧಿ ಎಂದು ತಿಳಿಯ ಹೇಳಿ ಒಂದು ಪತ್ರ ಬರೆದು ಕೊಡಿ'. ಈ ಸಂವಾದವನ್ನು ಆಲಿಸುತ್ತಿದ್ದ ದೀನಬಂಧು ಆಂಡ್ರೂಸ್ ಅವರಿಗೆ ಯುವಕನ ಮೇಲೆ ಅಪಾರ ಅನುಕಂಪ ಮೂಡಿತು. ಅವರು ಯುವಕನ ಪರವಾಗಿ ತಲೆದೂಗುತ್ತಾ, ಗಾಂಧೀಜಿಯವರು ಯುವಕನ ಪರವಾಗಿ ಏನಾದರೂ ಸಹಾಯ ಮಾಡುತ್ತಾರೆಂದು ನಿರೀಕ್ಷಿಸುತ್ತಿದ್ದರು. ಇದುವರೆಗೆ ಮೃದುವಾಗಿದ್ದ ಗಾಂಧೀಜಿ, ಅಷ್ಟೇ ಮೃದುವಾಗಿ, ಆದರೆ ದೃಢವಾಗಿ ಹೇಳಿದರು. 'ನಾನು ಇಂತಹ ಯಾವ ಪತ್ರವನ್ನೂ ಬರೆಯುವುದಿಲ್ಲ. ನೀನು ಹಣ ದುರುಪಯೋಗ ಮಾಡಿರುವೆ ಎಂದು ನಾನು ಹೇಳುವುದಿಲ್ಲ. ನಿನ್ನ ಮಾತನ್ನು ಆಲಿಸಿದ ಮೇಲೆ ನೀನು ಪ್ರಾಮಾಣಿಕವ್ಯಕ್ತಿಯೆಂದು ನನಗೆ ತಿಳಿಯಿತು. ಆದರೆ ಸಾರ್ವಜನಿಕರ ಪ್ರತಿಯೊಂದು ನಯಾಪೈಸೆಯೂ ಪವಿತ್ರ. ನನ್ನ ಮಟ್ಟಿಗೆ ಹೇಳುವುದಾದರೆ ಲೆಕ್ಕ ಇಡದ ಪ್ರತಿಯೊಂದು ನಯಾಪೈಸೆಯೂ ದುರುಪಯೋಗವಾದಂತೆಯೇ. ಸಾರ್ವಜನಿಕರ ಹಣವನ್ನು ಉಪಯೋಗಿಸುವಾಗ ಸರಿಯಾಗಿ ಲೆಕ್ಕ ಪತ್ರ ಇಡುವುದು ಕೇವಲ ಹಣಕ್ಕಾಗಿ ಅಲ್ಲ. ಅದು ನಮ್ಮ ನಡೆತೆಗೆ ಹಿಡಿದ ಕನ್ನಡಿ. ಹಣಕ್ಕಿಂತ ನಡತೆ ಮುಖ್ಯ. ಸರಿಯಾಗಿ ಲೆಕ್ಕ ಇಡದೆ, ರಶೀತಿಗಳನ್ನೂ ಇಡದೆ ಇದ್ದುದು ಗುರುತರವಾದ ಅಪರಾಧ. ನಿನ್ನನ್ನು ಲೆಕ್ಕ ಕೊಡುವಂತೆ ಒತ್ತಾಯಿಸುವ ಅಧಿಕಾರ ನಿನ್ನ ಸದಸ್ಯರಿಗೆ ಖಂಡಿತಾ ಇದೆ. ಈಗ ನಿನ್ನ ಹತ್ತಿರ ಹಣ ಇಲ್ಲದೆ ಇದ್ದರೂ ನಿನ್ನ ಯಾವುದಾದರೂ ಆಸ್ತಿಯನ್ನೊ, ವಸ್ತುವನ್ನೊ ಮಾರಿ, ಕೊರತೆ ಬಂದಿರುವ ಒಂದು ಸಾವಿರ ರೂಗಳನ್ನು ತುಂಬಿಕೊಡು. ಈಗ ನಿನಗಿರುವ ದಾರಿ ಇದೊಂದೇ'.

ಯುವಕ ಗಾಧೀಜಿಯವರಿಂದ ಅನುಕಂಪದ ಸಾಂತ್ವನವನ್ನರಸಿ ಬಂದಿದ್ದ. ತಾನು ಪ್ರಾಮಾಣಿಕನಾಗಿರುವುದು ರುಜುವಾತಾದರೆ ತಾನು ಗೆದ್ದಂತೆ ಎಂದು ಭಾವಿಸಿದ್ದ. ಆದರೆ ಗಾಂಧೀಜಿಯವರ ಈ ಕಠಿಣವಾದ ಮಾತುಗಳು ಅವನಿಗೆ ಸಹಿಸಲಾಗಲಿಲ್ಲ. ಮಗುವಿನ ಹಾಗೆ ಗೋಳೋ ಎಂದು ಅತ್ತುಬಿಟ್ಟ. ಆಂಡ್ರೂಸ್ ಅವರಿಗೆ ಯುವಕನ ಶೋಚನೀಯ ಪರಿಸ್ಥಿತಿಯಿಂದ ಎದೆ ಕರಗಿತು. ಅವರು ಈಗಾಗಲೇ ನೊಂದು ಬೆಂದು ಪಶ್ಚಾತಾಪ ಪಟ್ಟಿರುವ ಈ ಯುವಕನ ವಿಷಯದಲ್ಲಿ ನೀವು ನಡೆದುಕೊಳ್ಳುತ್ತಿರುವುದು ಸರಿಯಲ್ಲ ಎಂದು ಗಾಂಧೀಜಿಯ ಬಳಿ ವಾದಿಸಿದರು. ಆದರೆ ಗಾಂಧೀಜಿ ಬಡಪೆಟ್ಟಿಗೆ ಬಗ್ಗುವವರಲ್ಲ. ಅವರು ಹೇಳಿದರು– 'ಅವನು ಪಶ್ಚಾತಾಪ ಪಡಲಿ ಎಂಬುದೇ ನನ್ನ ಉದ್ದೇಶ. ಅವನ ಪಶ್ಚಾತ್ತಾಪ ಕೃತಿಯಲ್ಲಿ ಮೂಡಿ ಬರಲಿ. ಕೇವಲ ಮಾನಸಿಕ ಪಶ್ಚಾತ್ತಾಪ ಪಶ್ಚಾತಾಪವೇ ಅಲ್ಲ. ತಾನು ಮಾಡಿದ ತಪ್ಪನ್ನು ಸರಿದೂಗಿಸುವುದರ ಮುಖಾಂತರವಷ್ಟೇ ನಿಜವಾದ ಪಶ್ಚಾತ್ತಾಪ ಸಾಧ್ಯ. ಈ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಸಮಿತಿಯ ಸದಸ್ಯರು ಲೆಕ್ಕ ಕೊಡಬೇಕೆಂದು ಕೇಳುತ್ತಿರುವುದರಲ್ಲಿ ಯಾವ ತಪ್ಪೂ ಇಲ್ಲ. ಮೇಲಾಗಿ ಇವನು ವಿದ್ಯಾವಂತ ಯುವಕ. ಸಂಬಳ ತೆಗೆದುಕೊಳ್ಳದೆ ಸ್ವಯಂ ಸೇವೆ ಮಾಡುತ್ತಿದ್ದಾನೆ ಎನ್ನುವುದಾದರೆ ಇವನು ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ಹೊರಬೇಕು ಎಂದರ್ಥ. ಏಕೆಂದರೆ ಇಂತಹ ಸ್ವಯಂ ಸೇವಕರು ಇತರ ಕಾಂಗ್ರೆಸ್ ಸದಸ್ಯರಿಗೆ ಆದರ್ಶಪ್ರಾಯವಾಗಿರಬೇಕು. ಇವನು ಸಂಪೂರ್ಣ ಹಣ ತುಂಬಿದ ನಂತರವಷ್ಟೇ ನಾನು ಇವನಿಗೆ ಏನಾದರೂ ಸಹಾಯ ಮಾಡಬಲ್ಲೆ'.

ಇದಾದ ನಂತರ ಯುವಕನಿಗೆ ಮತ್ತೊಂದು ಸಮಸ್ಯೆ ಕಾಡಿತು. ಯುವಕ ಹೇಳಿದ– 'ಗಾಂಧೀಜಿ; ನಾನು ಊರಿಗೆ ಹಿಂದಿರುಗಬೇಕಾಗಿದೆ; ಆದರೆ ರೈಲು ಟಿಕೆಟ್ ಕೊಳ್ಳಲೂ ಹಣವಿಲ್ಲ. ಕನಿಷ್ಠ ೩೫ರೂ. ಗಳಾದರೂ ಬೇಕು'. ಇದನ್ನು ಕೇಳಿದ ಆಂಡ್ರೂಸ್ ಅವರಿಗೆ ಹೃದಯ ಕರಗಿತು. ಅವರು ಹೇಳಿದರು 'ಬಾಪೂ, ಕೊನೆಯ ಪಕ್ಷ ನಾವು ಈ ೩೫ರೂ. ಗಳನ್ನಾದರೂ ಕೊಟ್ಟು ಕಳುಹಿಸೋಣ'. ಗಾಂಧೀಜಿ ದೃಢವಾಗಿ ಹೇಳಿದರು. 'ಸಾಧ್ಯವೇ ಇಲ್ಲ, ನಾನು ೩೫ ರೂ. ಗಳನ್ನು ಎಲ್ಲಿಂದ ತರಲಿ? ಸಾರ್ವಜನಿಕ ಹಣದಿಂದ ತಾನೆ ನಾವೆಲ್ಲ ಬದುಕುತ್ತಿರುವುದು. ಆ ಹಣವನ್ನು ತೆಗೆದು ಇವನಿಗೆ ಕೊಡುವುದು ಹಣದ ದುರುಪಯೋಗವಾಗುವುದಿಲ್ಲವೆ? ಅವನ ಬಳಿ ಹಣ ಇಲ್ಲದಿದ್ದ ಪಕ್ಷದಲ್ಲಿ ಅವನು ಕಾಲ್ನಡಿಗೆಯಲ್ಲೇ ಹಿಂದಿರುಗಲಿ. ಈಗಾಗಲೇ ಇವನಿಗೆ ಒಂದು ಸಾವಿರ ರೂ. ಗಳ ಸಾಲವೂ ಇದೆ. ಅದಕ್ಕೆ ಈ ೩೫ ರೂ. ಕೂಡಾ ಸೇರುವುದೇಕೆ? ಇತರರಿಂದ ಹಣ ಯಾಚಿಸದೇ ಇರುವುದು ಅವನ

ಪಶ್ಚಾತಾಪದ ಮೊದಲನೇ ಹೆಜ್ಜೆಯಾಗಲಿ'. ಪುನಃ ಆಂಡ್ರೂಸ್ ಅವರು, ಯುವಕ ಬಹಳ ದೂರದಿಂದ ಬಂದಿದ್ದಾನೆಂದೂ, ಅಷ್ಟು ದೂರ ನಡೆಯುವುದಾದರೂ ಹೇಗೆ? ಎಂದು ವಾದಿಸಿದರು. ಗಾಂಧೀಜಿ ಹೇಳಿದರು 'ದಿನಕ್ಕೆ ಇಂತಿಷ್ಟು ಮೈಲುಗಳು ಎಂದು ನಿರ್ಧರಿಸಿ ನಡೆದು ಹೋಗಬಹುದಲ್ಲ'. ಆಂಡ್ರೂಸ್ ಅವರಿಗೆ ಇದು ಸರಿಕಾಣಲಿಲ್ಲ. ಯುವಕನ ಮೇಲೆ ಇಷ್ಟೊಂದು ನಿರ್ದಯವಾಗಿ ವರ್ತಿಸುವುದು ಸರಿಯಲ್ಲ ಎಂದು ವಾದಿಸಿದರು. ಆದರೆ ಗಾಂಧೀಜಿ ಇದನ್ನು ಒಪ್ಪಲಿಲ್ಲ. ಆ ಯುವಕ ಊಟ ಮುಗಿಸಿ ಖಿನ್ನನಾಗಿ ಹೊರಟ. ಗಾಂಧೀಜಿ ಅವನಿಗೆ ಹೇಳಿದರು'ಮನೆಗೆ ಹೋಗು, ಇನ್ನು ಮುಂದೆ ಸರಿಯಾಗಿ ನಡೆದುಕೊ ಮತ್ತು ಕಾಗದ ಬರೆ. ದೇವರು ನಿನಗೆ ಒಳ್ಳೆಯದು ಮಾಡಲಿ. ಆದರೆ ನೀನು ತಕ್ಷಣ ಕಾಗದ ಬರೆಯುತ್ತೀಯ ಎಂದು ನಾನು ನಿರೀಕ್ಷಿಸುತ್ತೇನೆ'. ಈಗ ಆಂಡ್ರೂಸ್‌ರವರು ಯುವಕನೊಂದಿಗೆ ಸ್ವಲ್ಪ ದೂರ ಹೋಗಿ ಬೀಳ್ಕೊಟ್ಟು ಬರುವುದಾಗಿ ಹೇಳಿ ಹೊರಟರು. ನಂತರ ಯುವಕನೊಡನೆ ರೈಲ್ವೆ ಸ್ಟೇಷನ್‌ವರೆಗೆ ನಡೆದು, ಈಗಾಗಲೇ ವ್ಯವಸ್ಥೆ ಮಾಡಿಕೊಂಡಂತೆ ೩೫ ರೂ. ಗಳನ್ನು ಯುವಕನಿಗೆ ಕೊಟ್ಟು ರೈಲು ಹತ್ತಿ ಮನೆಗೆ ಹೋಗುವಂತೆ ಹೇಳಿ ಬೀಳ್ಕೊಟ್ಟರು. ಆಶ್ರಮಕ್ಕೆ ಹಿಂದಿರುಗಿದ ನಂತರ ಆಂಡ್ರೂಸ್‌ರವರು ಗಾಂಧೀಜಿಯವರ ಬಳಿ ಹೋಗಿ ಹೇಳಿದರು 'ಬಾಪೂ, ನಾನು ಒಂದು ತಪ್ಪು ಒಪ್ಪಿಕೊಳ್ಳಬೇಕಾಗಿದೆ'. ತಕ್ಷಣ ಗಾಂಧೀಜಿ ಹೇಳಿದರು 'ನನಗೆ ಗೊತ್ತಿಲ್ಲವೆ? ನೀವು ಆ ಹುಡುಗನಿಗೆ ರೈಲಿನ ಖರ್ಚು ಕೊಟ್ಟು ಬಂದಿದ್ದೀರಿ. ನೀವು ಯಾವಾಗಲೂ ಹೀಗೆ. ನಿಮ್ಮನ್ನು ಯಾರು ತಾನೆ ತಿದ್ದಲು ಸಾಧ್ಯ?' ಗಾಂಧೀಜಿ ಮತ್ತು ಆಂಡ್ರೂಸ್ ಇಬ್ಬರೂ ಒಟ್ಟಾಗಿ ನಕ್ಕರು.

ಹಟಮಾರಿ ಕುರುಡಿ

ಗಾಂಧೀಜಿಯವರ ಆಶ್ರಮಕ್ಕೆ ಬಗೆಬಗೆಯ ಜನ ಬರುತ್ತಿದ್ದರು. ಬಹುಪಾಲು ಜನ ಸಾತ್ವಿಕರು. ಗಾಂಧೀಜಿಯ ಮೇಲಿನ ಅನನ್ಯ ಪ್ರೇಮದಿಂದ ಬರುತ್ತಿದ್ದವರು ಕೆಲವರು. ಗಾಂಧೀಜಿಗೂ ತಲೆನೋವು ತಂದಿಟ್ಟು 'ನಿನ್ನನ್ನು ಯಾರಯ್ಯ ಮಹಾತ್ಮ ಎಂದವರು?' ಎಂದು ಪ್ರಶ್ನಿಸುವ ಘಾಟಿ ಜನರೂ ಬರುತ್ತಿದ್ದರು.

ಒಮ್ಮೆ ಸಬರಮತಿ ಆಶ್ರಮಕ್ಕೆ ಉಟ್ಟ ಸೀರೆಯಲ್ಲಿ ಕುರುಡಿಯೊಬ್ಬಳು ಬಂದಳು. ಯಾರು ಈಕೆ? ಇಲ್ಲಿಗೇಕೆ ಬಂದಳು? ಮುಂತಾಗಿ ಚರ್ಚೆ ನಡೆದು, ಭಿಕ್ಷುಕರಿಗೆ ಇಲ್ಲಿ ಸ್ಥಳವಿಲ್ಲ, ನೀನು ಹೋಗು ಎಂದು ಆಶ್ರಮವಾಸಿಗಳು ಹೇಳಿದರು. ಕುರುಡಿ ಬಡಪೆಟ್ಟಿಗೆ ಬಗ್ಗುವವಳಲ್ಲ. ಮಾತೃಭಾಷೆ ತಮಿಳಾದರೂ ಹರಕು-ಮುರುಕು ಹಿಂದಿಯಲ್ಲಿ ತಾನು ಹೋಗುವುದಿಲ್ಲ ಎಂದಳು. ಸರಿ, ಆಶ್ರಮದ ಮೇಲ್ವಿಚಾರಕರಾದ ಮದನ್‌ಲಾಲ್ ಗಾಂಧಿಯವರಿಗೆ ದೂರು ಹೋಯಿತು. ಕಟ್ಟುನಿಟ್ಟಿನ ಮನುಷ್ಯ

ನಿಯಮ ಎಂದರೆ ನಿಯಮ, ಹಾಗಾಗಿ ಮದನ್‌ಲಾಲ್ ಸರಿಯಾದ ಪರಿಹಾರ ಕಂಡುಹಿಡಿಯುತ್ತಾರೆ ಎಂದು ಎಲ್ಲರ ವಿಶ್ವಾಸ. ಮದನ್‌ಲಾಲ್ ಗಾಂಧಿ ಈ ಬಡ ಕುರುಡಿಗೆ ಮರುಗಿದರಾದರೂ, ಆಶ್ರಮದ ನಿಯಮದಂತೆ ಆಕೆಗೆ ಸ್ಥಾನವಿಲ್ಲವೆಂದೂ, ದುಡಿಯದೆ ಇಲ್ಲಿ ತಿನ್ನುವಂತೆ ಇಲ್ಲ ಎಂದು ತಿಳಿಸಿದರು. ಕುರುಡಿಗೆ ಸಿಟ್ಟು ಬಂತು. "ಯಾರಯ್ಯಾ ನೀನು? ನಾನೊಬ್ಬಳು ಕುರುಡಿ, ನಿಸ್ಸಹಾಯಕಳು. ಕಾಣುತ್ತಿಲ್ಲವೆ ನಿನಗೆ? ಇದೇನು ಪೋಲಿಸ್ ಸ್ಟೇಷನ್ನಾ? ಗಾಂಧಿ ಆಶ್ರಮನಾ? ಒಬ್ಬ ಕುರುಡು ಹೆಣ್ಣು ಮಗಳೊಡನೆ ಇಷ್ಟು ಕಠಿಣವಾಗಿ ವರ್ತಿಸುತ್ತಿದ್ದೀರಲ್ಲ? ಎಲ್ಲಿ ಆ ನಿಮ್ಮ ಗಾಂಧಿ?" ಎಂದು ಗುಡುಗಿದಳು. ಅವಾಕ್ಕಾದ ಮದನ್‌ಲಾಲ್ ಏನು ಮಾಡಬೇಕೆಂದು ತೋಚದೆ ಗಾಂಧೀಜಿಯ ಬಳಿ ಹೋಗಿ ವಿಚಾರ ತಿಳಿಸಿದರು. ಎಲ್ಲವನ್ನೂ ಆಲಿಸಿದ ಗಾಂಧೀಜಿ, ಆಕೆಗೆ ಊಟ ಕೊಡಿ, ಮಲಗಲು ಸ್ಥಳ ಕೊಡಿ, ನಾಳೆ ಬೆಳಗ್ಗೆ ನಾನೇ ಮಾತನಾಡುತ್ತೇನೆ ಎಂದರು.

ಮರುದಿನ ಗಾಂಧೀಜಿ ಕುರುಡಿಯ ಬಳಿ ಬಂದು ಹೇಳಿದರು. "ನೋಡಮ್ಮಾ, ಇದು ಆಶ್ರಮ, ಇಲ್ಲಿ ಕೆಲವು ನಿಯಮಗಳಿವೆ. ಅವುಗಳನ್ನು ಎಲ್ಲರೂ ಪಾಲಿಸಲೇಬೇಕು. ನಾನೂ ಕೂಡಾ ಆಶ್ರಮದಲ್ಲಿ ಸುಮ್ಮನೆ ಕುಳಿತು ಊಟ ಮಾಡುವಂತಿಲ್ಲ. ಕುರುಡರೂ ಕೂಡಾ ಚರಕ ಹಿಡಿದು ನೂಲು ತೆಗೆಯಬಹುದು. ನಾನು ನಿನಗೆ ಚರಕ ಉಪಯೋಗಿಸುವುದನ್ನು ಹೇಳಿಕೊಡುತ್ತೇನೆ. ನೀನೂ ನೂಲು ತೆಗೆದರೆ ಆಶ್ರಮದಲ್ಲಿ ವಾಸ ಮಾಡಬಹುದು". ಗಾಂಧೀಜಿಯ ಮಾತುಗಳಿಂದ ಆಕೆಗೆ ಸಂತೋಷನೇನೂ ಆಗಲಿಲ್ಲ. ವಿಧಿ ಇಲ್ಲದೆ ಒಪ್ಪಿದಳು. ಸ್ವಲ್ಪ ಸಮಯದಲ್ಲೇ ನೂಲು ತೆಗೆಯುವುದನ್ನು ಕಲಿತುಕೊಂಡಳು. ಹೀಗೆ ನೂಲು ತೆಗೆಯುತ್ತಾ ಎರಡು ಮೂರು ದಿನ ಕಳೆದಳು. ಆದರೆ ಸ್ವಚ್ಛಂದ ಜೀವನ ನಡೆಸಿದ ಈ ಕುರುಡಿಗೆ ಚರಕ ಹಿಡಿದು ನೂಲು ತೆಗೆಯುವ ಕೆಲಸ ಒಂದು ಬಂಧನವೆನಿಸಿತು. ನೂಲು ತೆಗೆಯುವುದನ್ನು ಬಿಟ್ಟು ಬಿಟ್ಟಳು. ಅಷ್ಟೇ ಅಲ್ಲ ಆಶ್ರಮವಾಸಿಗಳ ಮೇಲೆ ವಿನಾಕಾರಣ ಜಗಳ ತೆಗೆದಳು. ಹುಚ್ಚಾಪಟ್ಟೆ ಮಾತನಾಡುತ್ತಿದ್ದಳು. ಹತ್ತು ದಿನಗಳ ವೇಳೆಗೆ ಪರಿಸ್ಥಿತಿ ಹದ್ದು ಮೀರಿತು. ಈ ಕುರುಡಿಯನ್ನು ಬೇರೆಲ್ಲಿಗಾದರೂ ಕಳುಹಿಸಬೇಕೆಂದು ಗಾಂಧೀಜಿ ಆಲೋಚಿಸಿದರು. ಸನಿಹದಲ್ಲೇ ಕುರುಡರ ಆಶ್ರಮವೊಂದಿತ್ತು. ಗಾಂಧೀಜಿ ಸ್ವತಃ ಕುರುಡಿಯನ್ನು ಕರೆದು ಈ ಬಗ್ಗೆ ಮಾತನಾಡಿದರು. ಆದರೆ ಕುರುಡಿ ತಾನು ಅಂಧರ ಆಶ್ರಮಕ್ಕೆ ಹೋಗುವುದಿಲ್ಲವೆಂದೂ ಇಲ್ಲೇ ಇರುವೆನೆಂದು ಹಠ ಹಿಡಿದಳು. ಅಷ್ಟೇ ಅಲ್ಲ, "ನಿಮ್ಮನ್ನು ಯಾರು ತಾನೆ ಮಹಾತ್ಮ ಎನ್ನುತ್ತಾರೆ? ಬಡ ಕುರುಡು ಹೆಂಗಸನ್ನು ಓಡಿಸುತ್ತಿದ್ದೀರಲ್ಲ" ಎಂದು ಜೋರು ಮಾಡಿದಳು. ಆದರೆ ಗಾಂಧೀಜಿ ತಮ್ಮ

ನಿರ್ಧಾರವನ್ನು ಬದಲಿಸಲಿಲ್ಲ. ಅವರು ಅಂಧಾಶ್ರಮದ ಮುಖ್ಯಸ್ಥರಿಗೆ ಒಂದು ಕಾಗದ ಬರೆದು ಈ ಪತ್ರದೊಡನೆ ಕುರುಡಿಯನ್ನು ಅಲ್ಲಿಗೆ ಬಿಟ್ಟು ಬರಬೇಕೆಂದು ತಮ್ಮ ಕರಣಿಕನಿಗೆ ಹೇಳಿದರು. ಆತ ಒಬ್ಬ ತಮಿಳು ಮನುಷ್ಯ. ಈ ಕುರುಡಿ ತನ್ನ ನಾಡಿನವವನೆ ಆದ ಕರಣಿಕನ ಮೇಲೆ ಸಿಡಿದುಬಿದ್ದಳು. ಅವನೊಡನೆ ಹೋಗಲು ನಿರಾಕರಿಸಿದಳು. ಆಶ್ರಮದ ಘಟಾನುಗಟಿಗಳೆಲ್ಲ ಈ ಘಾಟಿ ಕುರುಡಿಯ ಎದುರು ನಿಸ್ಸಹಾಯಕರಾಗಿ ನಿಂತರು. ಈಗ ಗಾಂಧೀಜಿಯೆ ಮಧ್ಯ ಪ್ರವೇಶಿಸಬೇಕಾಯಿತು. ಅವರು ಹೇಳಿದರು "ನಾನೇ ಈಕೆಯ ಕೈ ಹಿಡಿದು ಅಂಧಾಶ್ರಮಕ್ಕೆ ಸೇರಿಸಿ ಬರುತ್ತೇನೆ. ಗಾಂಧೀಜಿ ಹೇಳಿದ ಮಾತುಗಳು ಕುರುಡಿಗೆ ಕೇಳಿಸಿತು. ಅನಂತರ ಅವರೇ ಕುರುಡಿಯ ಕೈ ಹಿಡಿದು ಆಶ್ರಮದಿಂದ ಹೊರಗೆ ನಡೆದರು. ಮಹಾತ್ಮರ ಸ್ಪರ್ಶದಿಂದಲೊ ಎನೊ, ಸಿಡಿದು ಬೀಳುತ್ತಿದ್ದ ಕುರುಡಿ ತಣ್ಣಗಾದಳು. ಆಶ್ರಮದ ಗೇಟಿನ ತನಕ ನಡೆದ ಗಾಂಧೀಜಿ ತಮ್ಮ ಕರಣಿಕನಿಗೆ ಕರೆದುಕೊಂಡು ಹೋಗು ಎಂದು ಹೇಳಿದರು– ಮುಖ್ಯಸ್ಥನಿಗೆ ಬರೆದ ಪತ್ರವನ್ನೂ ಸಹ ಕೊಟ್ಟರು.

ಸ್ವಲ್ಪ ಸಮಯದಲ್ಲಿ ಗಾಂಧೀಜಿಯ ಕರಣಿಕ ಹಿಂದಿರುಗಿ ಬಂದು ನಡೆದ ವಿಷಯವನ್ನು ಹೀಗೆ ತಿಳಿಸಿದ – 'ಸ್ವಲ್ಪ ದೂರ ಹೋಗುತ್ತಿದ್ದಂತೆ ಆ ಕುರುಡಿ ತಾನು ಅಂಧಾಶ್ರಮಕ್ಕೆ ಬರುವುದಿಲ್ಲವೆಂದೂ, ಬೇಕಾದರೆ ಗಾಂಧೀಜಿಯ ಆ ಶಿಫಾರಸ್ಸು ಪತ್ರವನ್ನು ನೀನೇ ಇಟ್ಟುಕೊ ಎಂದು ಹೇಳಿ ಹೊರಟು ಹೋದಳು. ಆಕೆ ಸಂಪೂರ್ಣ ಕುರುಡಿಯಂತೆ ನಟಿಸುತ್ತಿದ್ದರೂ ಆಕೆಗೆ ಅಲ್ಪ ಸ್ವಲ್ಪ ದೃಷ್ಟಿ ಇತ್ತು, ಆಕೆ ಅರೆ ಕುರುಡಿ ಯಾಗಿದ್ದಳು. ■

ಚಿಕ್ಕ ಹಿಡುವಳಿ ರೈತರು ಅಪಾಯದ ನೆರಳಲ್ಲಿ

– ಕೊಲಿನ್ ಟಾಡ್‌ಹಂಟರ್

(ಬಹು ವೇಗವಾಗಿ ಜಗತ್ತು ಸಣ್ಣ ಹಿಡುವಳಿಗಳನ್ನು ಮತ್ತು ರೈತರನ್ನು ಕಳೆದುಕೊಳ್ಳುತ್ತಿದೆ. ಇದಕ್ಕೆ ಕಾರಣ ಶ್ರೀಮಂತ ಮತ್ತು ಬಲಾಢ್ಯರ ಕೈಯಲ್ಲಿ ಭೂಮಿ ಕೇಂದ್ರೀಕೃತ ವಾಗುತ್ತಿರುವುದು – ಸಂ)

ಅಕ್ಟೋಬರ್ ೧೬ ವಿಶ್ವ ಆಹಾರ ದಿನ. ಈ ವರ್ಷದ ಸಂದೇಶ – ಕೌಟುಂಬಿಕ ಬೇಸಾಯ : ಜಗತ್ತಿಗೆ ಅನ್ನ ಒದಗಿಸುವುದು ಮತ್ತು ಭೂಮಿಯ ಬಗ್ಗೆ ಕಾಳಜಿ ವಹಿಸುವುದು. ಈ ಘೋಷಣೆಯ ಉದ್ದೇಶ ಕುಟುಂಬಾದಾರಿತ ಬೇಸಾಯದ ಗೌರವವನ್ನು ಹೆಚ್ಚಿಸುವುದು ತನ್ಮೂಲಕ ಸಣ್ಣ ಹಿಡುವಳಿದಾರರ ರೈತರ ಮಹತ್ವವನ್ನು ಹೆಚ್ಚಿಸುವುದೇ ಆಗಿದೆ. ಅಲ್ಲದೆ ಕೌಟುಂಬಿಕ ಬೇಸಾಯದ ಮಹತ್ವವನ್ನು ಮತ್ತು ಅದು ಹೇಗೆ ಜಾಗತಿಕ ಹಸಿವು ಮತ್ತು ಬಡತನವನ್ನು ನಿವಾರಿಸುವಲ್ಲಿ ಅದರ ಪಾತ್ರವನ್ನು ಜಗತ್ತಿನ ಗಮನಕ್ಕೆ ತರುವುದೇ ಆಗಿದೆ. ಕೌಟುಂಬಿಕ ಬೇಸಾಯ ಹೇಗೆ ಒಂದು ಕುಟುಂಬಕ್ಕೆ ಅಗತ್ಯವಾದ ಆಹಾರ ಭದ್ರತೆ ಒದಗಿಸುತ್ತದೆ ಹಾಗೂ ಪೌಷ್ಠಿಕತೆಯನ್ನು ಒದಗಿಸುವುದರ ಮೂಲಕ ಜೀವನ ಮಟ್ಟದಲ್ಲಿ ಹೇಗೆ ಸುಧಾರಣೆಯಾಗುತ್ತದೆ, ಪ್ರಾಕೃತಿಕ ಸಂಪನ್ಮೂಲಗಳ ಮತ್ತು ಹವಾಮಾನದ ರಕ್ಷಣೆ ಆಗುವುದರೊಂದಿಗೆ ಸುಸ್ಥಿರ ಅಭಿವೃದ್ಧಿ ಹೇಗೆ ಸಾಧ್ಯ ಎಂಬುದನ್ನು ತೋರಿಸುತ್ತದೆ.

ಕೌಟುಂಬಿಕ ಬೇಸಾಯವನ್ನು ನಾವು ಸಂಭ್ರಮದಿಂದ ಆಚರಿಸಲೇಬೇಕು. ಏಕೆಂದರೆ ಅದು ವಾಸ್ತವವಾಗಿ ಇಡೀ ಜಗತ್ತಿಗೆ ಅನ್ನ ಒದಗಿಸುತ್ತಿದೆ. ಈ ಸಂಗತಿಯ ಸಮರ್ಥನೆ ೨೦೧೪ರ 'ಗ್ರೇನ್' ಸಂಸ್ಥೆ ಕೊಟ್ಟ ವರದಿಯಲ್ಲಿದೆ. ಅದರ ಪ್ರಕಾರ ಜಗತ್ತಿಗೆ ಬೇಕಾದ ಆಹಾರದ ಬಹುದೊಡ್ಡ ಪ್ರಮಾಣದ ಅನ್ನವನ್ನು ಕೌಟುಂಬಿಕ ಬೇಸಾಯವೇ ಒದಗಿಸುತ್ತದೆ. ರಷ್ಯಾದ ಆಹಾರೋತ್ಪಾದನೆಯ ೫೬%ರಷ್ಟು ಉತ್ಪಾದನೆ ಕೌಟುಂಬಿಕ ಹಿಡುವಳಿಗಳಿಂದಲೇ ಬರುತ್ತದೆ. ಕೌಟುಂಬಿಕ ಹಿಡುವಳಿಗೆ ಒಳಪಟ್ಟ ಭೂಮಿ ದೇಶದ ಕೃಷಿಯೋಗ್ಯ ಭೂಮಿಯ ೯%ಕ್ಕಿಂತಲೂ ಕಡಿಮೆ. ಈ ಹಿಡುವಳಿಗಳಿಂದ ದೇಶದ ಪೊಟ್ಯಾಟೊ ಉತ್ಪಾದನೆಯಲ್ಲಿ ೯೦%ರಷ್ಟು ಇದೆ. ತರಕಾರಿಯ ಉತ್ಪಾದನೆಯಲ್ಲಿ ೮೩%ರಷ್ಟು, ಹಾಲಿನ ಉತ್ಪಾದನೆಯಲ್ಲಿ ೫೫%ರಷ್ಟು, ಮಾಂಸದ ಉತ್ಪಾದನೆಯಲ್ಲಿ ೩೯% ಮತ್ತು ಬೇಳೆಕಾಳುಗಳಲ್ಲಿ ೨೨%ರಷ್ಟಿದೆ.

ಬ್ರೆಜಿಲ್‌ನಲ್ಲಿ ೮೪%ರಷ್ಟು ಹಿಡುವಳಿಗಳು ಚಿಕ್ಕದಾಗಿವೆ. ಅವುಗಳ ಕಕ್ಷೆಯಲ್ಲಿ ದೇಶದ

೨೪%ರಷ್ಟು ಮಾತ್ರ ಭೂಮಿ ಇದೆ. ಆದಾಗ್ಯೂ ಅವು ಕಸವ ಎಂಬ ಬೆಳೆಯ ಉತ್ಪಾದನೆಯಲ್ಲಿ ೮೭%ರಷ್ಟು ಉತ್ಪಾದಿಸುತ್ತವೆ. ಬೀನ್ಸ್ ಬೆಳೆಯಲ್ಲಿ ೬೯%ರಷ್ಟು, ಮೇಕೆಹಾಲಿನಲ್ಲಿ ೬೭%ರಷ್ಟು, ೫೯%ರಷ್ಟು ಹಂದಿಮಾಂಸ, ೫೮%ರಷ್ಟು ಹಸುವಿನ ಹಾಲು, ೫೦%ರಷ್ಟು ಕೋಳಿಮಾಂಸ, ೪೬%ರಷ್ಟು ಮುಸುಕಿನ ಜೋಳ, ೩೬%ರಷ್ಟು ಕಾಫೀ, ೩೩.೮%ರಷ್ಟು ಅಕ್ಕಿ ಮತ್ತು ೩೦%ರಷ್ಟು ದನದ ಮಾಂಸ ಒದಗಿಸುತ್ತದೆ. ಕ್ಯೂಬಾದಲ್ಲಿ ೨೭%ರಷ್ಟು ಭೂಮಿ ಚಿಕ್ಕ ಹಿಡುವಳಿದಾರರ ಅಧೀನದಲ್ಲಿದ್ದರೂ ಕೂಡ ಅವು ೯೮%ರಷ್ಟು ಹಣ್ಣನ್ನು, ೯೫%ರಷ್ಟು ಬೀನ್ಸನ್ನು, ೮೦%ರಷ್ಟು ಜೋಳವನ್ನು, ೭೫%ರಷ್ಟು ಹಂದಿಮಾಂಸವನ್ನು, ೬೫%ರಷ್ಟು ತರಕಾರಿಯನ್ನು, ೫೫%ರಷ್ಟು ಹಸುವಿನ ಹಾಲನ್ನು ೩೫%ರಷ್ಟು ಅಕ್ಕಿಯನ್ನು ಉತ್ಪಾದಿಸುತ್ತದೆ. ಉಕ್ರೇನಿನಲ್ಲಿ ೧೬%ರಷ್ಟು ಮಾತ್ರ ವ್ಯವಸಾಯ ಯೋಗ್ಯ ಭೂಮಿಯಲ್ಲಿ ರೈತರು ಉಳುಮೆ ಮಾಡುತ್ತಾರೆ. ಆದರೆ ಒಟ್ಟು ಉತ್ಪಾದನೆಯಲ್ಲಿ ೫೫%ರಷ್ಟು ಬೆಳೆಯುತ್ತಾರೆ. ಅದರಲ್ಲಿ ೯೭%ರಷ್ಟು ಆಲೂಗಡ್ಡೆ, ೯೭%ರಷ್ಟು ಜೇನುತುಪ್ಪ, ೮೮%ರಷ್ಟು ತರಕಾರಿ, ೮೩%ರಷ್ಟು ಹಣ್ಣು ಮತ್ತು ಬೆರ್ರಿ, ೮೦%ರಷ್ಟು ಹಾಲು ಇದೆ. ಇಂಥದೆ ಪರಿಣಾಮಕಾರಿ ಅಂಕೆ ಸಂಖ್ಯೆಗಳು ಚಿಲಿ, ಹಂಗರಿ, ಬೆಲರಸ್, ರೊಮಾನಿಯ, ಕೆನ್ಯಾ, ಎಲ್‌ಸಲ್ವಡೋರ್ ಮತ್ತು ಇನ್ನೂ ಅನೇಕ ದೇಶಗಳಲ್ಲಿ ಇಂಥದೆ ಪರಿಣಾಮಕಾರಿ ಅಂಕೆ ಸಂಖ್ಯೆಗಳು ದೊರೆಯುತ್ತವೆ. ಈ ಸಂಖ್ಯೆಗಳಿಂದ ಸಣ್ಣ ರೈತ ಮತ್ತು ಕೌಟುಂಬಿಕ ಹಿಡುವಳಿಗಳು ಜಾಗತಿಕ ಆಹಾರೋತ್ಪಾದನೆಯ ಮೂಲ ಶಕ್ತಿಯೆಂದು ಗೊತ್ತಾಗುತ್ತದೆ. ಆದರೆ ದುಃಖದ ಸಂಗತಿ ಏನೆಂದರೆ ಸಣ್ಣ ಹಿಡುವಳಿದಾರರು ಜಗತ್ತಿನ ವ್ಯವಸಾಯ ಭೂಮಿಯ ಕಾಲು ಭಾಗಕ್ಕಿಂತಲೂ ಕಡಿಮೆ ಭೂ ವಿಸ್ತೀರ್ಣಕ್ಕೆ ತುರುಕಲ್ಪಡುತ್ತಿದ್ದಾರೆ. ಜಗತ್ತು ವೇಗವಾಗಿ ಕೃಷಿ ಭೂಮಿಯನ್ನು ಮತ್ತು ರೈತರನ್ನು ಕಳೆದುಕೊಳ್ಳುತ್ತಿದೆ ಇದಕ್ಕೆ ಕಾರಣ ಶ್ರೀಮಂತರ ಮತ್ತು ಬಲಾಢ್ಯರ ಕೈಯಲ್ಲಿ ಭೂಮಿ ಕೇಂದ್ರಿಗೊಳ್ಳುತ್ತಿರುವುದು.

'ಗ್ರೇನ್' ವರದಿ ಚಿಕ್ಕ ರೈತರು ಬೃಹತ್ ಕಾರ್ಪೋರೇಟ್‌ಗಳ ವ್ಯವಸಾಯಕ್ಕಿಂತಲೂ ಹೆಚ್ಚು ಉತ್ಪಾದನಾಶೀಲರಾಗಿದ್ದಾರೆಂದು ಬಹಿರಂಗಪಡಿಸುತ್ತದೆ. ಕಾರ್ಪೋರೇಟ್ ಕೃಷಿಗೆ ಬಹಳ ದುಬಾರಿಯಾದ ತಂತ್ರಜ್ಞಾನದ ನೆರವು ಸಿಕ್ಕಿದ್ದರೂ ಕೂಡ ಚಿಕ್ಕ ರೈತರು ತಮ್ಮ ಸಾಧನೆಯನ್ನು ಮೆರೆದಿದ್ದಾರೆ. ಉದಾಹರಣೆಗೆ ಕೆನ್ಯಾದ ವ್ಯವಸಾಯೋತ್ಪನ್ನವನ್ನು ಚಿಕ್ಕ ಹಿಡುವಳಿಗಳ ಆಹಾರೋತ್ಪಾದನೆಯ ಜೊತೆಗೆ ಹೊಂದಿಸಿದರೆ ಆ ದೇಶದ ವ್ಯವಸಾಯೋತ್ಪನ್ನವು ದ್ವಿಗುಣಗೊಳ್ಳುವುದು. ರಷ್ಯಾದಲ್ಲಿ ಅದು ೬ಪಟ್ಟು ಹೆಚ್ಚಾಗುವುದು.

ಸತ್ಯ ಸಂಗತಿ ಹಿಗಿದ್ದಾಗಲೂ ಅನೇಕ ಸ್ಥಳಗಳಲ್ಲಿ ಚಿಕ್ಕ ರೈತರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಾಗುತ್ತಿದೆ. ಅವರನ್ನು ಕೋರ್ಟಿಗೂ ಎಳೆಯಲಾಗುತ್ತಿದೆಯಲ್ಲದೆ ಅವರು ಕಣ್ಮರೆಯಾಗುವಂತೆಯೂ ಮಾಡುಲಾಗುತ್ತಿದೆ. ವಿದೇಶೀ ಕಾರ್ಪೋರೇಷನ್ಸ್‌ಗಳಿಂದ ಅವರು ವ್ಯವಸ್ಥಿತವಾಗಿ ಅವರ ಭೂಮಿಯಿಂದ ಉಚ್ಚಾಟಿಸಲ್ಪಡುತ್ತಿದ್ದಾರೆ.

ಒಂದು ವೇಳೆ ಸಣ್ಣ ರೈತರಿಗೆ ಹೆಚ್ಚು ಭೂಮಿ ದೊರೆತರೆ ಮತ್ತು ಅವರಿಗೆ

ಯುಕ್ತವಾದ ಬೆಂಬಲ ದೊರೆತರೆ ಎಂಥ ಅದ್ಭುತವಾದ ಸಾಧನೆ ಮಾಡುವರೆಂಬುದನ್ನು ಊಹಿಸಿಕೊಳ್ಳಬಹುದು. ಉದಾಹರಣೆಗೆ ಜಿಂಬಾಬ್ವೆಯಲ್ಲಿ ಬಹು ದೊಡ್ಡ ಪ್ರಮಾಣದ ವ್ಯವಸಾಯ ಭೂಮಿ ಚಿಕ್ಕ ಹಿಡುವಳಿದಾರರಿಗೆ ಸೇರಿದೆ. ಇತ್ತೀಚೆಗೆ ಫಾಸ್ಟ್ ಟ್ರ್ಯಾಕ್ ಲ್ಯಾಂಡ್ ರೀಫಾರ್ಮ್ ಪ್ರೋಗ್ರಾಮ್ (ತ್ವರಿತ ಭೂ ಸುಧಾರಣಾ ಕಾರ್ಯಕ್ರಮದಿಂದಾಗಿ) ಸರಾಸರಿ ಹಿಡುವಳಿಯ ವಿಸ್ತೀರ್ಣ ಹೆಚ್ಚಾಗಿದೆ. ತತ್ಪರಿಣಾಮವಾಗಿ ಸಣ್ಣ ರೈತರು ೯೦% ರಷ್ಟು ವಿವಿಧ ಪ್ರಕಾರದ ಆಹಾರೋತ್ಪಾದನೆ ಮಾಡುತ್ತಿದ್ದಾರೆ. ಭೂ ಸುಧಾರಣೆಯ ಮೊದಲು ಆ ಉತ್ಪಾದನೆ ೬೦% ರಿಂದ ೭೦% ಮಾತ್ರ ಇತ್ತು.

ರೈತರು ಈಗ ಖಚಿತವಾಗಿ ಸ್ಥಾನೀಯ ಮತ್ತು ರಾಷ್ಟ್ರೀಯ ಹಾಗೂ ಕೌಟುಂಬಿಕ ಅಗತ್ಯಗಳ ಅನುಸಾರವಾಗಿ ಆದ್ಯತೆಯ ಮೇರೆಗೆ ಆಹಾರ ಬೆಳೆಯುತ್ತಿದ್ದಾರೆ. ಓಕ್ ಲ್ಯಾಂಡ್ ಇನ್ಸ್‌ಟಿಟ್ಯೂಟ್ ಪ್ರಕಾರ ಭೂದಾಹದ ೨೧ನೇ ಶತಮಾನದ ಪ್ರಾರಂಭಿಕ ವರ್ಷಗಳು ಜಾಗತಿಕ ಈ ಹಿಂದೆಂದೂ ಉದಾಹರಣೆ ಇಲ್ಲದಂತಿರುವ ರೀತಿಯಲ್ಲಿಯ ವರ್ಷಗಳೆಂದು ಜ್ಞಾಪಕದಲ್ಲಿ ಉಳಿಯುತ್ತವೆ. ಅಂದಾಜು ೫೦೦ ದಶಲಕ್ಷ ಎಕರೆ ಭೂಮಿ ಖರೀದಿಸಲ್ಪಟ್ಟಿದೆ ಅಥವಾ ಲೀಸಿಗೆ ಒಳಪಡಿಸಲಾಗಿದೆ. ಈ ಭೂ ವಿಸ್ತೀರ್ಣ ಇಂಗ್ಲೆಂಡಿನ ೮ರಷ್ಟು ಪಟ್ಟು ವಿಸ್ತಾರವಾಗಿದೆ. ಈ ಭೂ ದಾಹ ೨೦೦೦ದಿಂದ ೨೦೧೧ರ ಅವಧಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶದಲ್ಲಿ ಆಗಿದೆ. ಈ ಭೂದಾಹವು ಆಹಾರ ಸುರಕ್ಷತೆಯನ್ನಾಗಲಿ ಭೂಮೇಲಿನ ರೈತರ ಅಧಿಕಾರವನ್ನಾಗಲಿ ಗಮನಿಸಿಲ್ಲ. ಹೊಸ ಸಾಂಸ್ಥಿಕ ತಲೆಮಾರೊಂದು ಜಾಗತಿಕ ಮಟ್ಟದಲ್ಲಿ ವ್ಯವಸಾಯ ಭೂಮಿಯನ್ನು ದೊಡ್ಡ ಬಂಡವಾಳವನ್ನಾಗಿ ಮಾಡಿಕೊಳ್ಳಲು ಉತ್ಸುಕವಾಗಿದೆ. ಆಹಾರ ಸಂರಕ್ಷಣೆಗಿಂತಲೂ ಹಣಕಾಸಿನ ಲಾಭದ ಇಚ್ಛೆ ಇಲ್ಲಿ ಕೆಲಸಮಾಡುತ್ತಿದೆ. ಏರುತ್ತಿರುವ ಭೂಮಿಯ ಬೆಲೆಯಿಂದಾಗಿ ಬಹುದೊಡ್ಡ ಪ್ರಮಾಣದ ಪೆನ್‌ಷನ್ ನಿಧಿಯಿಂದ ಕೋಟ್ಯಾಂತರ ರೂಪಾಯಿ ಹಣವನ್ನು ಭೂ ಖರೀದಿ ವ್ಯವಹಾರದಲ್ಲಿ ತೊಡಗಿಸಲಾಗುತ್ತಿದೆ.

ಭಾರತದಿಂದ ಉಕ್ರೇನ್‌ವರೆಗೆ ಅಮೇರಿಕಾದ ತಾಂತ್ರಿಕತೆ ಆಧಾರಿತ ವ್ಯವಸಾಯದಲ್ಲಿ ತೊಡಗಿರುವ ಬೃಹತ್ ಕಂಪನಿಗಳು ವ್ಯವಸಾಯದ ಕ್ಷೇತ್ರದ ಮೇಲೆ ತಮ್ಮ ಆದಿಪತ್ಯವನ್ನು ಸಾಧಿಸುತ್ತಾ ಚಿಕ್ಕ ಹಿಡುವಳಿದಾರ ರೈತರು ಇಲ್ಲದಂತೆ ಮಾಡುತ್ತಿವೆ. ಈ ಉದ್ದೇಶಕ್ಕಾಗಿ ಆ ಕಂಪನಿಗಳು ಅನೇಕ ಪ್ರಕಾರದ ಮಾರ್ಗಗಳನ್ನು ಅನುಸರಿಸುತ್ತವೆ. ಅನೇಕ ಬಗೆಯ ವಾಣಿಜ್ಯ ಒಪ್ಪಂದಗಳ ಮೂಲಕವಲ್ಲದೆ ಸೈನ್ಯ ಶಕ್ತಿ ಮತ್ತು ಪೋಲೀಸ್ ಶಕ್ತಿಯ ಮೂಲಕವು ಭೂಮಿಯನ್ನು ಒಶಪಡಿಸಿಕೊಳ್ಳಲಾಗುತ್ತಿದೆ. ಈ ವ್ಯವಹಾರದಲ್ಲಿ ರಾಜಕೀಯ ನಾಯಕರನ್ನು ಒಳಪಡಿಸಿಕೊಳ್ಳಲಾಗುತ್ತದೆ. ನೀತಿ ನಿರ್ಧಾರಕ ಸಮಿತಿಗಳನ್ನು ತಮ್ಮ ಪ್ರಭಾವ ವಲಯಕ್ಕೆ ಒಳಪಡಿಸಿಕೊಳ್ಳಲಾಗುತ್ತದೆ. ಇದರ ಪರಿಣಾಮವಾಗಿ ಆಹಾರ ಭದ್ರತೆ ಮತ್ತು ಪ್ರಾದೇಶಿಕ ಆಹಾರೋತ್ಪಾದನೆಯ ಸ್ವಾತಂತ್ರ್ಯ ಗಂಡಾಂತರದ ನೆರಳಿನಲ್ಲಿವೆ.

ಅನು : ಸುರೇಂದ್ರ ಕೌಲಗಿ ಸಾಬಾರ : ಡೆಕ್ಕನ್ ಹೆರಾಲ್ಡ್ ■

ಸಂತ ಇಟಗಿ ಭೀಮಾಂಬಿಕೆ ನೂಲುತ್ತ ಕುಳಿತ ದೇವತೆ

– ಪ್ರಸನ್ನ



ದೇವರ ಮೂರ್ತಿಗಳನ್ನು ಗಮನಿಸಿರಬಹುದು ನೀವು. ದೇವರ ಕೈಗಳಲ್ಲಿ ಸಾಮಾನ್ಯವಾಗಿ ಉಪಕರಣ ವೊಂದನ್ನು ಹಿಡಿಸಿ ನಿಲ್ಲಿಸಲಾಗಿರುತ್ತದೆ. ಉಪಕರಣವು ಹೆಚ್ಚಾಗಿ ಆಯುಧವಾಗಿರುತ್ತದೆ. ತ್ರಿಶೂಲ, ಗದೆ, ಬಿಲ್ಲು, ಚಕ್ರ ಇತ್ಯಾದಿ. ಕೆಲವು ದೇವರುಗಳು ಆಯುಧವಲ್ಲದ ಉಪಕರಣಗಳನ್ನೂ ಹಿಡಿದಿರುತ್ತವೆ. ಮಥುರಾ ಶೈಲಿಯ ಕುಬೇರನ ಮೂರ್ತಿಯು ತಕ್ಕಡಿ ಹಿಡಿದು ತೂಗುತ್ತ ಕುಳಿತಿದೆ. ಸರಸ್ವತಿ ಮೂರ್ತಿಯು ಕೈಯಲ್ಲಿ ವೀಣೆ ಹಿಡಿದಿರುತ್ತದೆ. ಲಕ್ಷ್ಮಿಯ ಕೈಯಲ್ಲಿ ದುಡ್ಡು ಉದುರುತ್ತಿರುತ್ತದೆ. ಕೆಲವು ದೇವತೆಗಳಿಗೆ ಒಂದಕ್ಕಿಂತ ಹೆಚ್ಚಿನ ಕೈಗಳನ್ನು ನೀಡಿ, ಒಂದಕ್ಕಿಂತ ಹೆಚ್ಚಿನ ಉಪಕರಣಗಳನ್ನು ನೀಡಲಾಗಿರುತ್ತದೆ. ಕೈಚೆಲ್ಲಿ ನಿಂತಿರುವ ಮೂರ್ತಿಗಳು ಇಲ್ಲವೇ ಇಲ್ಲ ಎಂದರೂ ನಡೆದೀತು.

ದೇವರುಗಳು ಹಿಡಿದಿರುವ ಉಪಕರಣಗಳಿಗೂ ಅವರ ದೈವೀಶಕ್ತಿಗೂ ನೇರವಾದ ಸಂಬಂಧವಿದೆ. ತಕ್ಕಡಿ ಹಿಡಿದ ಕುಬೇರ ಸಂಪತ್ತನ್ನು ಸಂಕೇತಿಸಿದರೆ, ಸಿಡಿಲು ಹಿಡಿದ ವರುಣ ನೀರನ್ನು ಸಂಕೇತಿಸುತ್ತಾನೆ, ಬಿಲ್ಲು ಹಿಡಿದ ದೇವರು ಬೇಟೆಯನ್ನು ಸಂಕೇತಿಸುತ್ತಾರೆ, ಇತ್ಯಾದಿ. ನಮ್ಮದೇ ಹಿತ್ತಲಿನ ಉತ್ತರಕರ್ನಾಟಕದಲ್ಲಿ ದೇವತೆಯೊಬ್ಬಳಿದ್ದಾಳೆ. ಅಪ್ಪಟ ಅಹಿಂಸಾತ್ಮಕವಾದ ಉಪಕರಣವೊಂದನ್ನು ಹಿಡಿದಿರುವ ದೇವತೆಯಿವಳು. ಈಕೆಯ ಹೆಸರು ಇಟಗಿ ಭೀಮವ್ವ, ಅಥವಾ ಭೀಮಾಂಬಿಕೆ ಅಥವಾ ಭೀಮಮ್ಮ. ಆನಪ್ರಿಯವಾದ ಹೆಣ್ಣು ದೇವತೆಯೀಕೆ. ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಇಟಗಿ ಗ್ರಾಮದಲ್ಲಿ ಈಕೆಯ ಮೂಲ ಗದ್ದಿಗೆ ಹಾಗೂ ಮಠಗಳಿವೆ. ಸುತ್ತಲ ಮೂರುನಾಲ್ಕು ಜಿಲ್ಲೆಗಳಲ್ಲಿ ಹಲವೆಡೆ ಈಕೆಯ ಮಂದಿರಗಳಿವೆ.

ತ್ರೇತಾಯುಗ ಅಥವಾ ದ್ವಾಪರಯುಗದಲ್ಲಿ ಜನಿಸಿದ ಹಳೆಯ ದೇವತೆಯಲ್ಲ

ಭೀಮವ್ವ. ಇತ್ತೀಚೆಗೆ, ಪ್ರಾಯಶಃ ೧೮೧೮ರಲ್ಲಿ, ಬಡ ಹಾಲುಮತಸ್ಥ ಕುಟುಂಬವೊಂದರಲ್ಲಿ ಹುಟ್ಟಿದ ಮಹಿಳೆ ಇವಳು. ಗಾಂಧೀಜಿಯವರಿಗಿಂತ ಅರ್ಧ ಶತಮಾನ ಮೊದಲೇ ಹುಟ್ಟಿರಬಹುದಾದ ಈಕೆ, ಗಾಂಧೀಜಿಯವರಿಗಿಂತ ಮೊದಲೇ ಚರಕ ಹಿಡಿದು, ಮಹಿಳೆಯರಿಗೆ ನೂಲು ತೆಗೆಯುವ ಕಾಯಕವನ್ನು ಕಲಿಸಿ ದೇವತೆಯಾದವಳು.

ಭೀಮವ್ವನಿಗೆ ನಡೆದುಕೊಳ್ಳುವವರು ಹೆಂಗಸರೇ ಹೆಚ್ಚು. ಪೂಜಾರಿಗಳೂ ಸಹ ಹೆಣ್ಣುಮಕ್ಕಳೇ. ಭೀಮವ್ವನಿಗೆ ಒಪ್ಪಿಸುವ ಮುಡಿಪು ಹತ್ತಿಯ ಸೀರೆಗಳು ಅಥವಾ ನಾಲ್ಕು ಸೇರು ಜೋಳ. ಭಕ್ತರು ಪ್ರಸಾದ ರೂಪದಲ್ಲಿ ಪಡೆಯುವುದು ಸಹ ನೂಲಿನ ತುಣುಕುಗಳನ್ನೇ ಸರಿ. ಈಕೆಗೆ ನಡೆದುಕೊಳ್ಳುವವರು ಮಕ್ಕಳಾಗದವರು, ಕಷ್ಟಕ್ಕೆ ಸಿಲುಕಿದವರು, ಕಾಯಿಲೆಯಿಂದ ನರಳುತ್ತಿರುವವರು ಇತ್ಯಾದಿ.

ಈಕೆಯ ಪವಾಡಗಳೂ ಅಷ್ಟೆ: ಬಡತನದ ರಗಳೆಗಳು ಪಡೆದ ಸರಳ ಉತ್ತರಗಳು. ಒಮ್ಮೆ ಒಂದು ಕುಟುಂಬ ಭೀಮವ್ವನ ಬಳಿಗೆ ಬಂದು ತಮ್ಮ ಕಷ್ಟ ಹೇಳಿಕೊಂಡಿತಂತೆ. ಭೀಮವ್ವ ನೂಲುತ್ತ ಕುಳಿತಿದ್ದಳಂತೆ. ಕೈಯಲ್ಲಿರುವ ಕದಿರನ್ನೇ ಬೇಡುವ ಬೊಗಸೆಗೆ ಹಾಕಿ ಹಸಾದವೆಂದಳಂತೆ. ಬಂದವರು ಬಾಗಿ ನಮಿಸಿ ಮನೆಗೆ ಹಿಂದಿರುಗಿ, ಕದಿರಿನ ಕಾಯಕವನ್ನು ಅರ್ಥಾತ್ ನೇಯ್ಗೆಯ ವೃತ್ತಿಯನ್ನು ಕೈಗೊಂಡರಂತೆ. ಅಪಾರ ಯಶಸ್ಸು ಸಾಧಿಸಿದರಂತೆ. ಗಜೇಂದ್ರಗಡದಲ್ಲಿ ಈ ಕುಟುಂಬವು ಈಗಲೂ ನೇಕಾರಿಕೆಯ ಕಾಯಕ ಮಾಡಿಕೊಂಡು ಬರುತ್ತಿದೆ. ಇಟಗಿ ಭೀಮವ್ವನ ಜೀವನಚರಿತ್ರೆ ರಚಿಸಿರುವ ಕೆ.ಬಿ.ಕಂಬಳಿಯವರು ಈಕೆಯ ಬಗ್ಗೆ ಈ ರೀತಿ ಬರೆದಿದ್ದಾರೆ : "ಕೊಪ್ಪದಲ್ಲಿ (ಕೊಪ್ಪ ಭೀಮವ್ವನ ಗಂಡನ ಊರು) ಹೆಚ್ಚಾಗಿ ರೈತಾಪಿ ಜನರೇ ಇದ್ದರು. ಅವರಿಗೆಲ್ಲ ಮನೆಗೆಲಸ – ಹೊಲಗೆಲಸಗಳಲ್ಲಿ ಬಿಡುವೇ ಇರುತ್ತಿರಲಿಲ್ಲ. ಆದರೆ ಕೆಲವು ಸ್ತ್ರೀಯರು ಹೊಲಕ್ಕೆ ಹೋಗುತ್ತಿರಲಿಲ್ಲ. ಅವರಿಗೆ ಉಪದಂಧೆಗಳಿರಲಿಲ್ಲ, ಗೃಹಕೈಗಾರಿಕೆಗಳು ಅಲ್ಲಿರಲಿಲ್ಲ. ಅದಕ್ಕಾಗಿ ಭೀಮಾಂಬೆಯು ರಾಟೆಯಿಂದ ನೂಲ ಉತ್ಪಾದಿಸುವ ಉದ್ಯೋಗ ಕೈಕೊಂಡಳು. ಆ ಉದ್ಯೋಗ ಉತ್ಪನ್ನದಾಯಕವಾದುದರಿಂದ ಎಲ್ಲರೂ ನೂಲಹತ್ತಿದರು. ಆ ಕಾಲಕ್ಕೆ ಹತ್ತಿ ಗಿರಣಿಗಳಿರಲಿಲ್ಲ, ಬಟ್ಟೆ ಕಾರ್ಖಾನೆಗಳಿರಲಿಲ್ಲ, ಕೈನೂಲಿನ ಖಾದಿ ಬಟ್ಟೆಯನ್ನೇ ಎಲ್ಲರೂ ತೊಡುತ್ತಿದ್ದರು. ಉಣ್ಣೆನೂಲಿಗೆ ಬೇಡಿಕೆಯೂ ಇತ್ತು. ರಾಟಿ–ಮೇಟಿಗಳೆರಡು ಪೂರಕ ಉದ್ಯೋಗಗಳಾಗಿದ್ದವು. ಕೆಲಸವಿಲ್ಲದಾಗ ಸುಮ್ಮನೆ ಕಾಲವನ್ನು ಕಳೆಯುವುದಕ್ಕಿಂತ ನೂಲುವುದು ಬಹಳ ಜನಕ್ಕೆ ಇಷ್ಟವಾಯಿತು. ಭೀಮಾಂಬೆ ತೋರಿಸಿದ ಈ ನೂಲ ಕಾಯಕಕ್ಕೆ ಕೊಪ್ಪದ ಅನೇಕ ಮನೆತನಗಳು ತಮ್ಮನ್ನು ತಾವು ಅರ್ಪಿಸಿಕೊಂಡವು. ನೂಲುವಾಗಲೂ ಸಹ ಮನಸ್ಸಿನ ಬೇಜಾರುಗಳೆಯಲು ದೇವರ ನಾಮಸ್ಮರಣೆ ಮಾಡುತ್ತಿರಬೇಕು, ತತ್ವಬೋಧಕ

ನೀತಿದಾಯಕವಾದ ಭಕ್ತಿಪದಗಳನ್ನು ಹಾಡುತ್ತಿರಬೇಕೆಂದು ಭೀಮಾಂಬೆ ಸಲಹೆ ಕೊಡುತ್ತಿದ್ದಳು".

ಭೀಮವ್ವ ಶ್ರಮಜೀವಿ ದೇವತೆ, ಸರಳದೇವತೆ. ಈಕೆಯ ವೇಶಭೂಷಣಗಳಲ್ಲಿ ಬೆಳ್ಳಿ ಬಂಗಾರವಿಲ್ಲ, ಮೈಮೇಲೆ ಕಿರೀಟ ಭುಜಕೀರ್ತಿಗಳಿಲ್ಲ. ಈಕೆಯ ಮೂರ್ತಿಯು ಹಳ್ಳಿಹೆಂಗಸರಂತೆ, ಒಂದು ಕಾಲನ್ನು ಮೇಲಕ್ಕೆ ಮಡಚಿ ಮತ್ತೊಂದು ಕಾಲನ್ನು ಅಡ್ಡಲಾಗಿ ಮಡಿಚಿ, ಖಾಲಿನೆಲದ ಮೇಲೆ ಕುಳಿತಿರುತ್ತದೆ. ಮೂರ್ತಿಗೆ ಕೆಂಪಂಚು ಹಾಗೂ ಹಸಿರು ಒಡಲಿನ ಹತ್ತಿಯ ಸೀರೆಯನ್ನುಡಿಸಿರುತ್ತಾರೆ. ತಲೆಗೆ ಸೆರಗು ಹೊದ್ದಿರುತ್ತಾಳೆ. ಬೋಳು ಕುತ್ತಿಗೆಯಲ್ಲೊಂದು ಕರಿಮಣಿ ಸರ ನೇತಾಡುತ್ತಿರುತ್ತದೆ. ಈಕೆ ಕೂರಲಿಕ್ಕೆ ಕಮಲದ ಹೂವೂ ಇಲ್ಲ, ಮೋಡವೂ ಇಲ್ಲ, ಹಂಸ, ಗರುಡ, ಸಿಂಹಾಸನ ಯಾವುದೂ ಇಲ್ಲ. ನಿಜಕ್ಕೂ ತಳಮಟ್ಟದ ದೇವರೀಕೆ.

ಹದಿನೆಂಟು ಹತ್ತೊಂಬತ್ತನೆಯ ಶತಮಾನವು ಕರ್ನಾಟಕದ ಇತಿಹಾಸದಲ್ಲಿ (ಪ್ರಾಯಶಃ ಭಾರತದ ಇತಿಹಾಸದಲ್ಲಿಯೇ ಸರಿ) ಸಂಕ್ರಮಣಕಾಲ. ಹಳತೆಂಬುದು ಮತ್ತಷ್ಟು ಹಳತಾಗತೊಡಗಿತ್ತು. ಇತ್ತ ಹೊಸತು ಹುಟ್ಟಿನ ಬೇನೆ ಅನುಭವಿಸುತ್ತಿತ್ತು. ಬೆಳಕಾಗುವ ಮೊದಲಿನ ಭ್ರಮಾತ್ಮಕ ಕತ್ತಲು ಕರ್ನಾಟಕವನ್ನು ಆವರಿಸಿತ್ತು. ಪರಾಧೀನತೆ, ಬಡತನ, ರೋಗರುಜಿನಗಳು ಜನರನ್ನು ಕಾಡುತ್ತಿದ್ದವು. ಪ್ರತಿಭಟನೆಯೆಂಬುದು ಬೀಜರೂಪದಲ್ಲಿತ್ತು, ಅರೆ–ಆಧ್ಯಾತ್ಮಿಕ ರೂಪು ಪಡೆದಿತ್ತದು. ಹುಬ್ಬಳ್ಳಿಯ ಶ್ರೀ.ಸಿದ್ಧಾರೂಢ ಸ್ವಾಮಿಗಳು ಈ ಬಗ್ಗೆ ಹೀಗೆ ಹೇಳುತ್ತಾರೆ: "೧೮ನೆಯ ಶತಮಾನದ ಅಂತ್ಯಭಾಗದಲ್ಲಿ ೧೯ನೆಯ ಶತಮಾನದ ಪೂರ್ವಾರ್ಧದಲ್ಲಿ ಉತ್ತರಕರ್ನಾಟಕದಲ್ಲಿ ಯುದ್ಧ, ದಾಳಿ, ಭೀಕರ ಬರಗಾಲ, ಅನ್ಯರ ಆಕ್ರಮಣಗಳಿಂದ ಧಾರ್ಮಿಕ ಜೀವನ ತತ್ತರಿಸಿತು. ಆಗ ಕವಿದ ಕತ್ತಲೆಯನ್ನು ಓಡಿಸುವುದಕ್ಕೆ ಶಿವನೇ ತನ್ನ ಗಣಾಧೀಶ್ವರರೊಡನೆ ಭೂಮಿಯಲ್ಲಿ ಅವತರಿಸಿದನು. ಈ ಭೂಮಿಯಲ್ಲಿ ಶಿವನೇ ಸಿದ್ಧಾರೂಢರ ರೂಪ ತಳೆದನು. ಈಶ್ವರನೇ ಬಿಜಾಪುರದ ಷಣ್ಮುಖಸ್ವಾಮಿ ಎನಿಸಿದನು. ಮಹಾವಿಷ್ಣುವು ಗೋದಾವಲಿಕರ ಮಹಾರಾಜನೆನಿಸಿದನು. ಶಿವನ ಅರ್ಧಾಂಗಿಯೆ ನವಲಗುಂದದ ಅಜಾತ ನಾಗಲಿಂಗ ಯೋಗಿಯಾದ. ವೀರಭದ್ರನೇ ಶಿಶುನಾಳ ಶರೀಫರರೂಪ ತಳೆದನು. ಇದರಂತೆ ಇನ್ನುಳಿದ ಗಣಾಧೀಶ್ವರರು ಒಂದೊಂದು ರೂಪ ಧಾರಣೆ ಮಾಡಿದರು".

ಸಿದ್ಧಾರೂಢರ ಪಟ್ಟಿಯಲ್ಲಿ ಬರುವ 'ಇನ್ನುಳಿದ ಗಣಾಧೀಶ್ವರ'ರಲ್ಲಿ ಭೀಮಾಂಬಿಕೆಯೂ ಒಬ್ಬಳು. ಸಿದ್ಧಾರೂಢರು ಹೆಸರಿಸಿರುವ ನಾಗಲಿಂಗ ಯತಿಗಳು ಹಾಗೂ ಶಿಶುನಾಳ ಶರೀಫರು ತತ್ವಪದಕಾರರೆಂದು ಖ್ಯಾತನಾಮರಾಗಿದ್ದಾರೆ. ಭೀಮವ್ವ ತತ್ವಪದಗಳನ್ನು ರಚಿಸಲಿಲ್ಲ, ಸಾಮಾಜಿಕ ಕಾರ್ಯ ನಡೆಸಿದಳು. ಹಳೆಯ ಪರಿಭಾಷೆಯಲ್ಲಿ ಹೇಳುವುದಾದರೆ ಪವಾಡಗಳನ್ನು ಮಾಡಿದಳು. ಭೀಮವ್ವಳದು

'ಧರ್ಮರ ಮನೆತನ'. ಧರ್ಮರ ಮನೆಯವರ ಬಾಯಲ್ಲಿ ಧರ್ಮವು ನುಡಿಯುತ್ತದೆ ಎಂದು ಜನರು ನಂಬಿದ್ದರು. ಭೀಮವ್ವ ಧರ್ಮದ ಅಣತಿಯನ್ನು ಪಾಲಿಸಿದಳು ಮತ್ತು ಪಾಲಿಸುವಂತೆ ಇತರರನ್ನು ಪ್ರಭಾವಿಸಿದಳು.

ಧರ್ಮವು ಕೆಲವೇ ಕೆಲವರ ಬಾಯಲ್ಲಿ ನುಡಿಯುವುದು, ದೇವರು ಮೈಮೇಲೆ ಬರುವುದು, ಇತ್ಯಾದಿ ಕ್ರಿಯೆಗಳು ಮೂಢನಂಬಿಕೆಯಲ್ಲವೇ ಎಂದು ಆಧುನಿಕರು ಪ್ರಶ್ನಿಸಿಯಾರು. ಧರ್ಮವನ್ನು ವ್ಯಕ್ತಿರೂಪದಲ್ಲಿ ಸಾಕಾರಗೊಳಿಸುವುದು, ಸಮಾಜಕಾರ್ಯವನ್ನು ಪವಾಡವೆಂದು ಪರಿಗಣಿಸುವುದು, ಸಮಸ್ಯಾತ್ಮಕವಾಗಬಲ್ಲದು ನಿಜ. ಆದರೆ, ಅದಕ್ಕೆ ತದ್ವಿರುದ್ಧವಾಗಿ ನೈತಿಕನೆಲೆಯನ್ನೇ ಅಲ್ಲಗಳೆಯುತ್ತ ಲೌಕಿಕ ಲಾಭವೊಂದನ್ನೇ ಪರಿಗಣಿಸುವ, ಆಧುನಿಕ ಕೊಳ್ಳುಬಾಕತೆಯೂ ಸಮಸ್ಯಾತ್ಮಕವಾದದ್ದೇ ತಾನೆ?

ಅದೇನೇ ಇರಲಿ, ಇಷ್ಟಂತೂ ನಿಜ. ಶ್ರಮದ ಬದುಕನ್ನು ಸಂಕೇತಿಸುವ ದೈವಗಳು ಹಾಗೂ ಅವುಗಳ ಪವಾಡಗಳು ಬದುಕಿಗೆ ಹತ್ತಿರವಾದವು. ಮುಗ್ಧತೆ, ಸರಳತೆ ಹಾಗೂ ಸಜ್ಜನಿಕೆಗಳು ಅಲ್ಲಿ ಮನೆಮಾಡಿರುತ್ತವೆ. ಶ್ರೀಮಂತರ ಹಿಂದೆ ಅಂಡಲೆಯುವ, ಸ್ವಾಮೀಜಿಗಳು, ಬೃಹನ್ಮಠಗಳು, ಅವುಗಳ ಭವ್ಯತೆ, ಅವರ ಆಧ್ಯಾತ್ಮಿಕ ಅತಿ ಸಂಕೀರ್ಣತೆ, ಇಂದ್ರಸಭೆಯನ್ನು ನಾಚಿಸುವ ಅವರ ಮಂದಿರಗಳು, ಹೆಲಿಕಾಪ್ಟರಿನ ಅವರ ಓಡಾಟ, ಮಂತ್ರಿಮಾನ್ಯರು ಹಾಗೂ ಉದ್ದಿಮೆಪತಿಗಳ ಒಡನಾಟ, ಇವಾವುದೂ ಶ್ರಮದ ದೇವತೆಗಳಿಗಿಲ್ಲ.

ಭೀಮವ್ವ ಪ್ರಚೋದಿಸುತ್ತಿರುವ ಕಾಯಕ ಪ್ರಣೀತ ಬದುಕನ್ನು ಅರ್ಥಾತ್ ಬದುಕುವ ಬದುಕನ್ನು, ಸಾವಿನ ನಂತರ ಸಿಗಬಹುದಾದ ಭ್ರಮಾತ್ಮಕ ಸ್ವರ್ಗವನ್ನಲ್ಲ. ಸ್ವಾತಂತ್ರ್ಯ ಹೋರಾಟಗಾರ ಅಂದಾನಪ್ಪ ದೊಡ್ಡಮೇಟಿಯವರು ಹೇಳುತ್ತಿದ್ದರಂತೆ, "ಭೀಮವ್ವ ಕೆಳಜಾತಿಯಿಂದ ಬಂದಳು. ಹಾಗಾಗಿ ಹೆಚ್ಚು ಪ್ರಸಿದ್ಧಿ ಪಡೆಯಲಿಲ್ಲ. ಮೇಲ್ಜಾತಿಯಿಂದ ಬಂದಿದ್ದರೆ ಪರಿಸ್ಥಿತಿ ಬೇರೆಯದೇ ಇರುತ್ತಿತ್ತು" ಎಂದು.

ಕೆಳಜಾತಿಯೆಂಬುದು ಭೀಮವ್ವನ ಪುಣ್ಯ ಎಂದೇ ನಾನು ತಿಳಿಯುತ್ತೇನೆ. ಚರಕ ಹಿಡಿದು ನೂಲುತ್ತ ಕುಳಿತ ದೈವವು, ಪ್ರಾಯಶಃ ವಿಶ್ವದಲ್ಲಿಯೇ ಮತ್ತೊಂದಿಲ್ಲ. ಅರ್ಧ ಶತಮಾನಗಳ ನಂತರ ಹುಟ್ಟಿ ಚರಕವನ್ನು ವಿಶ್ವಮಾನ್ಯವಾಗಿಸಿದ ಗುಜರಾತಿನ ಗಾಂಧೀಜಿಗೆ, ಕರ್ನಾಟಕದ ಬೀಮವ್ವ ಹಿರಿಯಕ್ಕನಿದ್ದಂತೆ. ಇದು ಹೆಮ್ಮೆಯ ಸಂಗತಿಯಲ್ಲವೇ?

ಸಾಬಾರ : ಪ್ರಜಾವಾಣಿ

ನಮ್ಮ ಪ್ರಗತಿಪರ ಚಿಂತನೆ ಎಡವಿದ್ದೆಲ್ಲಿ?

– ಡಾ. ಟಿ.ಎನ್. ವಾಸುದೇವಮೂರ್ತಿ

ಸಂಸತ್ ಚುನಾವಣೆಗೂ ಮುನ್ನ ಎಲ್ಲ ಪ್ರಸಿದ್ಧ ಬುದ್ಧಿಜೀವಿಗಳೂ ಒಂದು ಕೋಮುವಾದೀ ಪಕ್ಷ ಅಧಿಕಾರಕ್ಕೆ ಬಂದರೆ ಅನಾಹುತವೇ ಆಗಿಬಿಡುವುದೆಂದು ನಾಡಿನಾದ್ಯಂತ ಒಂದು ಬಗೆಯ ತಲ್ಲಣವನ್ನು ಸೃಷ್ಟಿಸಿದ್ದರು. ಅದರಲ್ಲೂ ನರೇಂದ್ರ ಮೋದಿ ಪ್ರಧಾನಿಯಾಗಿಬಿಟ್ಟರೆ ಪ್ರಜಾಪ್ರಭುತ್ವವೇ ಸರ್ವನಾಶವಾಗಿ ದೇಶದಾದ್ಯಂತ ಸರ್ವಾಧಿಕಾರವೇ ರಾರಾಜಿಸುತ್ತದೆ ಎಂಬ ತರಹದ ದಿಗಿಲಿನ ವಾತಾವರಣ ನಿರ್ಮಿಸಿದ್ದರು. ಅಂದು ಬಲಪಂಥೀಯರ ಕಟಕಿ, ನಿಂದನೆ, ಆಕ್ಷೇಪಣೆಗಳನ್ನು ಲೆಕ್ಕಿಸದೆ ನಮ್ಮ ಪ್ರಗತಿಪರ ಚಿಂತಕರು ತಮ್ಮ ಸಿದ್ಧಾಂತ ಮತ್ತು ತಾವು ನಂಬಿದ್ದ ಮೌಲ್ಯಗಳನ್ನೇ ಎತ್ತಿ ಹಿಡಿಯಲು ಪ್ರಯತ್ನಿಸಿದರು. ಅವರ ಬದ್ಧತೆ ಮತ್ತು ಪ್ರಾಮಾಣಿಕತೆಗಳು ನಿಜಕ್ಕೂ ಅಭಿನಂದನೀಯ.

ಈಗ ಹೊಸ ಸರ್ಕಾರ ಬಂದಿದೆ. ಈ ಮೂರು-ನಾಲ್ಕು ತಿಂಗಳ ಮಟ್ಟಿಗಂತೂ, ಆ ಬುದ್ಧಿಜೀವಿಗಳು ಪ್ರಚಾರ ಮಾಡಿದ್ದ ಆತಂಕ ಹುಸಿಯೆಂದು ಸಾಬೀತಾಗಿದೆ. ಇದು ಯಾರಿಗೇ ಆದರೂ ಸಮಾಧಾನ ನೀಡುವ ವಿಷಯವಾಗಿದೆ. ನಿಜ, ಬೆಲೆಯೇರಿಕೆಯಾಗಿಬಹುದು, ಸಂಪುಟದ ಸಚಿವರು ೩೭೦ರ ಕಾಯಿದೆಯೆಂಬ ಹುಣ್ಣಿನ ಮೇಲೆ ಕೈಯಾಡಿಸಲು ಪ್ರಯತ್ನಿಸಿರಬಹುದು, ವಿಶ್ವವಿದ್ಯಾಲಯದಿಂದ ಒಂದು ಪದವಿಯನ್ನೂ ಪಡೆಯದ ಒಬ್ಬ ಮಹಿಳಾ ಸಂಸದೆ ಶಿಕ್ಷಿತ ಸಮುದಾಯವನ್ನು ನಿರ್ವಹಿಸುವ ಜವಾಬ್ದಾರಿಯುತ ಸ್ಥಾನ ಪಡೆದಿರುವರು, ಕೇಂದ್ರದಿಂದ ಹಿಂದಿ ಹೇರಿಕೆಯ ಪ್ರಯತ್ನ ನಡೆಯಿತು, ಅತ್ಯಾಚಾರ ಮತ್ತು ಕೋಮುಗಲಭೆಗಳು ಹಿಂದಿನಂತೆಯೇ ಎಗ್ಗಿಲ್ಲದೆ ಮುಂದುವರೆಯುತ್ತಿವೆ. ಸುದೈವವಶಾತ್ ಬುದ್ಧಿಜೀವಿಗಳು ಭಾವಿಸಿದ್ದ, ಪ್ರಜಾಪ್ರಭುತ್ವಕ್ಕೇ ಮಾರಕವಾಗಬಹುದಾದ ಜನವಿರೋಧೀ ಆಡಳಿತ ವ್ಯವಸ್ಥೆಯೇನೂ ಈತನಕ ಕಾಣಿಸಿಕೊಂಡಂತಿಲ್ಲ.

ಬುದ್ಧಿಜೀವಿಗಳು ಸಮಾಜದ ಹಿತಕ್ಕಾಗಿ ಎಲ್ಲ ಕಾಲಕ್ಕೂ ತಮ್ಮನ್ನು ತಾವು ವಿರೋಧಪಕ್ಷದ ಸ್ಥಾನದಲ್ಲೇ ಗುರುತಿಸಿಕೊಳ್ಳುವರು. ಇದು ನಿಜಕ್ಕೂ ಶ್ಲಾಘನೀಯವಾದ

ಉದಾತ್ತ ನಿಲುವಾಗಿದೆ. ಏಕೆಂದರೆ ವಿರೋಧ ಪಕ್ಷದ ನೆಲೆಯಲ್ಲಿ ನಿಂತ ಯಾವುದೇ ಪ್ರಗತಿಪರ ಚಿಂತನೆ ಆ ಚಿಂತನೆಯನ್ನು ಪ್ರತಿಪಾದಿಸುವ ಕೆಲವರ ಸಣ್ಣತನ, ಹುನ್ನಾರ, ಹಿತಾಸಕ್ತಿಗಳನ್ನು ಬದಿಗೆ ಸರಿಸಿ ನೋಡಿದರೆ ತನ್ನ ಸ್ವಭಾವದಲ್ಲಿ ಮಾನವ ಪರವಾದ ಕಾಳಜಿಗಳನ್ನು ಕಾಪಾಡಿಕೊಂಡಿರುತ್ತದೆ ಎಂಬುದನ್ನು ಮರೆಯಬಾರದು. ಆದರೆ "ಬಚ್ಚಲ ನೀರಿನೊಂದಿಗೆ ಮಗುವನ್ನೂ ಹೊರಗೆಸೆವುದು" ಎಂಬ ಇಂಗ್ಲೀಷ್ ಗಾದೆ ಮಾತಿನಂತೆ ಪ್ರಗತಿಪರ ಚಿಂತಕರ ಸಣ್ಣತನ, ಪ್ರಲೋಭನೆಗಳನ್ನು ಟೀಕಿಸುವ ನೆವದಲ್ಲಿ ಒಟ್ಟು ಪ್ರಗತಿಪರ ಚಿಂತನೆಯನ್ನೇ ಸಾರಾಸಗಟಾಗಿ ತಿರಸ್ಕರಿಸುವುದು ನಿಜಕ್ಕೂ ದುಡುಕಾಗುತ್ತದೆ.

ಈ ಮಾತು ಪ್ರಗತಿಪರರೆನಿಸಿಕೊಂಡವರಿಗೂ ಅನ್ವಯಿಸಬೇಕು. ಒಬ್ಬ ಪ್ರಗತಿಪರನು ವೈದಿಕರನ್ನು ನಿಂದಿಸುವ ಉತ್ಸಾಹದಲ್ಲಿ ವೇದೋಪನಿಷತ್ತುಗಳ ಉದಾತ್ತ ಜ್ಞಾನಕ್ಕೂ ಕುರುಡಾಗುವುದು ದುರ್ದೈವದ ಸಂಗತಿಯಾಗಿದೆ. ವೇದೋಪನಿಷತ್ತುಗಳಲ್ಲಿ, ವಿಜ್ಞಾನ ತಂತ್ರಜ್ಞಾನಗಳಲ್ಲಿ, ಇಂಗ್ಲೀಷ್ ಶಿಕ್ಷಣದಲ್ಲಿ, ಶಾಸ್ತ್ರೀಯ ಸಂಗೀತದಲ್ಲಿ, ಸಂಸ್ಕೃತ ಭಾಷೆಯಲ್ಲಿ ವಿಶಿಷ್ಟ ಪರಿಶ್ರಮವಿರುವ ಒಂದು ನಿರ್ದಿಷ್ಟ ವರ್ಗವನ್ನು ಅನುಮಾನದ ಕಣ್ಣಿನಿಂದ ನೋಡುವ ಪ್ರಗತಿಪರರು ತಮ್ಮ ಮಕ್ಕಳು ಆ ನಿರ್ದಿಷ್ಟ ವರ್ಗಕ್ಕೆ ಸಮಸಮನಾಗಿ ಆಯಾ ಕ್ಷೇತ್ರಗಳಲ್ಲಿ ಹೆಜ್ಜೆಯಿಡುತ್ತಾ ಬೆಳೆವುದನ್ನು ಕಂಡು ಒಳಗೊಳಗೇ ಹಿಗ್ಗುವುದನ್ನು ಗಮನಿಸಿದರೆ ನಿಜಕ್ಕೂ ಸೋಜಿಗವೆನಿಸುತ್ತದೆ. ಇರಲಿ, ಇಲ್ಲಿ ಚರ್ಚೆಯ ವಿಷಯ ಅದಲ್ಲ.

ಇಂದು ಪ್ರಗತಿಪರ ಎನಿಸಿಕೊಂಡ ನಿಲುವನ್ನು ಪ್ರತಿನಿಧಿಸುವ ನಮ್ಮ ಸಮಕಾಲೀನ ಚಿಂತಕರೆಲ್ಲರೂ ಆಳದಲ್ಲಿ ಗಾಂಧಿ ಮತ್ತು ಅಂಬೇಡ್ಕರ್‌ರಿಂದ ಪ್ರಭಾವಿತರಾಗಿರುವರು ಎಂಬುದನ್ನು ನಾವು ಗಮನಿಸಬೇಕು. ಈ ನೆಲೆಯಿಂದಲೇ ನಮ್ಮ ಪ್ರಗತಿಪರ ಚಿಂತನೆಯೊಳಗೆ ಸೇರಿರಬಹುದಾದ ತೊಡಕುಗಳನ್ನು ಶೋಧಿಸಬೇಕಾಗುತ್ತದೆ.

ಗಾಂಧಿ ಯಾವ ಅರ್ಥದಲ್ಲೂ ಒಬ್ಬ ಪ್ರಗತಿಪರ ವ್ಯಕ್ತಿಯಾಗಿರಲಿಲ್ಲ ಎಂಬ ಅಂಶವನ್ನು ಗಾಂಧಿಯನ್ನು ಗೌರವಿಸುವ ಎಲ್ಲ ಪ್ರಗತಿಪರರೂ ಜಾಣ್ಮೆಯಿಂದಲೋ ಅಥವಾ ಅಜ್ಞಾನದಿಂದಲೋ ಮರೆಮಾಚುವರು. ತಮ್ಮ ಬದುಕಿನುದ್ದಕ್ಕೂ ಸತ್ಯಶೋಧಕರೂ, ಪ್ರಯೋಗಶೀಲರೂ ಆಗಿದ್ದ ಗಾಂಧಿಯ ಬಗ್ಗೆ ಅಪಾರವಾದ ಗೌರವವಿದ್ದೂ ಡಾ. ಅಂಬೇಡ್ಕರ್ "he was tory by birth as well as by faith" (ಆತ ಜಾತಿಯಿಂದ ಮತ್ತು ಗುಣದಿಂದ ಶುದ್ಧ ಕಂದಾಚಾರಿಯಾಗಿದ್ದರು) ಎಂದು ಬಹಳ ಸ್ಪಷ್ಟವಾಗಿ ನುಡಿದಿದ್ದಾರೆ (ಸೋಷಿಯಲ್ ಅಂಡ್ ಪೊಲಿಟಿಕಲ್ ಥಾಟ್ಸ್ ಆಫ್ ಮಹಾತ್ಮಾ ಗಾಂಧಿ, ಬಿದ್ಯುತ್ ಚಕ್ರವರ್ತಿ, ಪುಟ ೧೧೧).

ಒಂದು ತಲೆಮಾರು ತನ್ನ ಕಾಲದಲ್ಲಿ ಹುಟ್ಟಿದ ಒಬ್ಬ ಸತ್ಯಾನ್ವೇಷಕನನ್ನು

ಯಥಾರ್ಥವಾಗಿ ಮನಗಾಣಲು ಸೋತಲ್ಲಿ ಅಥವಾ ಇಲ್ಲದ ಆದರ್ಶಗಳನ್ನೆಲ್ಲ ಅವನ ಮೇಲೆ ಹೇರಲಾರಂಭಿಸಿದಲ್ಲಿ, ಆ ತಲೆಮಾರು ಆತನ ಚಿಂತನೆ ಮತ್ತು ಕೊಡುಗೆಗಳಿಂದಲೇ ವಂಚಿತವಾಗಿಬಿಡುತ್ತದೆ. ಗಾಂಧಿಯನ್ನು ಒಬ್ಬ ಪ್ರತಿಗಾಮಿ ಎಂದೊಡನೆ ಅದನ್ನು ನಿಂದನೆಯ ಮಾತುಗಳೆಂದು ಭಾವಿಸಕೂಡದು. ವ್ಯಕ್ತಿಗತ ನೆಲೆಯಲ್ಲಿ ಅವರು ಬಂಡಾಯಗಾರರಾಗಿದ್ದರೂ ಸಾಮಾಜಿಕ ನೆಲೆಯಲ್ಲಿ ಕಡೆತನಕ ಒಬ್ಬ ಪ್ರತಿಗಾಮಿಯೇ ಆಲೋಚಿಸುತ್ತಿದ್ದರು.

ಗಾಂಧಿ ಅಂತರ್ಯದಲ್ಲಿ ಒಬ್ಬ ಆಧ್ಯಾತ್ಮಿಕ ಸಾಧಕರಾಗಿದ್ದರೇ ವಿನಃ ಖಂಡಿತವಾಗಿ ಅವರು ಒಬ್ಬ ಉತ್ತಮ ರಾಜಕೀಯ, ಆರ್ಥಿಕ ಅಥವಾ ಸಾಮಾಜಿಕ ಚಿಂತಕರಾಗಿರಲಿಲ್ಲ. ಒಬ್ಬ ಆಧ್ಯಾತ್ಮಿಕ ಸಾಧಕ ಪಾಲಿಸುವ ಜೀವನ ಮೌಲ್ಯವನ್ನು ಒಟ್ಟಾರೆ ಸಮುದಾಯಕ್ಕೆ ಅನ್ವಯಿಸಲು ಹೊರಟರೆ ಆಭಾಸವಾಗುತ್ತದೆ. ಈ ದೋಷಪೂರ್ಣವಾದ ಅನ್ವಯವೇ ನಮ್ಮ ಬುದ್ಧಿಜೀವಿಗಳ ಎಲ್ಲ ತಪ್ಪು ಲೆಕ್ಕಾಚಾರಗಳಿಗೆ ಕಾರಣವಾಗಿದೆ. ಕೆಲವು ಸಲ ಸಂಕೀರ್ಣಮಯವಾದ ಬೌದ್ಧಿಕ ಚಿಂತನೆಗಳಿಗೆ ಹೊಳೆಯದಿರುವುದು ಸಾಮಾನ್ಯಜ್ಞಾನಕ್ಕೆ ಹೊಳೆದುಬಿಡುವುದು. ಕೆಲ ತಿಂಗಳ ಹಿಂದೆ ವಿಧಾನ ಸಭೆಯ ಸ್ಪೀಕರ್ ಕಾಗೋಡು ತಿಮ್ಮಪ್ಪನವರು ವಿಧಾನಸಭೆಯಲ್ಲಿ ಶ್ರೀ ವೈ.ಎಸ್.ವಿ. ದತ್ತ ಅವರಿಗೆ ಪ್ರತಿಕ್ರಿಯಿಸುತ್ತ "ಅವರೆಲ್ಲ (ಪ್ರಗತಿಪರರು) ಗಾಂಧಿವಾದದ ಬಗ್ಗೆ ಮಾತನಾಡುವರೇ ವಿನಃ ಬದುಕಿನಲ್ಲಿ ಅದನ್ನೆಲ್ಲ ಅಳವಡಿಸಿಕೊಂಡಿಲ್ಲ" ಎಂದಿದ್ದರು. ಪ್ರಾಯಶಃ ಗಾಂಧಿಯನ್ನು ಅನುಸರಿಸುವುದು ಅಪಾಯಕರವೆಂದು ಆಳದಲ್ಲಿ ಪ್ರಗತಿಪರರಿಗೂ ಮನವರಿಕೆಯಾಗಿರಬೇಕು.

ಉದಾಹರಣೆಗೆ, ಗಾಂಧಿ ತನ್ನನ್ನು ತಾನು ಹಿಂದೂತ್ವದೊಂದಿಗೆ ಗುರುತಿಸಿಕೊಂಡಿದ್ದರು. ಈ ಧೈರ್ಯವನ್ನು ಅಥವಾ ಹುಂಬತನವನ್ನು ಗಾಂಧಿಯನ್ನು ಪೂಜಿಸುವ ಯಾವ ಬುದ್ಧಿಜೀವಿಯೂ ಈತನಕ ಪ್ರದರ್ಶಿಸಿದಂತಿಲ್ಲ. ಜಾತೀಯತೆ ಭಾರತೀಯ ಸಮಾಜದ ಒಂದು ವಾಸ್ತವವಾಗಿದೆ ಎಂದು ಲೋಹಿಯಾ ಪ್ರತಿಪಾದಿಸಿದ್ದ ಕಾರಣ ಅವರನ್ನು ಅನುಸರಿಸುವ ನಮ್ಮ ಪ್ರಗತಿಪರರ ಪೈಕಿ ಕೆಲವರು ಜಾತಿಯೊಂದಿಗೆ ತಮ್ಮನ್ನು ತಾವು ಗುರುತಿಸಿಕೊಳ್ಳುವರಾದರೂ ಧರ್ಮದೊಂದಿಗೆ ಅಪ್ಪಿತಪ್ಪಿಯೂ ಗುರುತಿಸಿಕೊಳ್ಳಲು ಹೋಗುವುದಿಲ್ಲ. ಬದಲಿಗೆ, ಧರ್ಮದ ಹೆಸರಿನಲ್ಲಿ ದೇಶಗಳು ಒಂದಾಗಕೂಡದು ಎಂದು ಪ್ರಚಾರ ಮಾಡುವರು. ಇದೇ ತರಹದ ನಿಲುವನ್ನು ಬಹು ಹಿಂದೆಯೇ ಎರಡನೇ ಮಹಾಯುದ್ಧದ ನಂತರ ಬರ್ಟ್ರಂಟ್ ರಸೆಲ್ ಸಹ ತೆಗೆದುಕೊಂಡಿದ್ದ.

ಆದರೆ ಜಗತ್ತಿನ ಹಿರಿಯಣ್ಣನೆನಿಸಿದ ಅಮೆರಿಕಾವನ್ನೂ ಒಳಗೊಂಡಂತೆ ಜಗತ್ತಿನ ಎಲ್ಲ ಶಕ್ತಿಶಾಲೀ ದೇಶಗಳೂ ಧರ್ಮವನ್ನು ಮುಂದಿಟ್ಟುಕೊಂಡು ರಾಜಕಾರಣ ಮಾಡುತ್ತಿರುವುದು ಇಂದಿನ ಜಾಗತಿಕ ವಾಸ್ತವವಾಗಿದೆ. "ಜಾತೀಯತೆ ಎಂಬ ಪಿಡುಗು

ಸಾಮಾಜಿಕ ವಾಸ್ತವವಾಗಿದೆ" ಎಂದು ಪ್ರತಿಪಾದಿಸುವ ಲೋಹಿಯಾವಾದಿಗಳು "ಧರ್ಮ ಮತ್ತು ರಾಷ್ಟ್ರೀಯತೆ ಎಂಬ ಪಿಡುಗುಗಳು ಜಾಗತಿಕ ರಾಜಕಾರಣದ ವಾಸ್ತವವಾಗಿದೆ" ಎಂಬುದನ್ನು ಒಪ್ಪದಿರುವುದು ವಿರೋಧಾಭಾಸವಲ್ಲವೇ? ಒಂದು ಜಾತಿಕೇಂದ್ರಿತ ರಾಜಕೀಯ ವ್ಯವಸ್ಥೆಯಲ್ಲಿ ದುರ್ಬಲ ಜಾತಿಗಳು ಸಂಘಟಿತರಾದರೆ ಸರಿ ಎನ್ನುವುದಾದಲ್ಲಿ ಜಾಗತಿಕ ನೆಲೆಯಲ್ಲಿ ಧಾರ್ಮಿಕವಾಗಿ ದುರ್ಬಲರಾದವರ ಸಂಘಟನೆಯನ್ನೂ ಉತ್ತೇಜಿಸಬೇಕಾಗುತ್ತದೆ ಅಥವಾ ಸರಿಯೆನ್ನಬೇಕಾಗುತ್ತದೆ. ಜಗತ್ತಿನ ಎಲ್ಲ ದೇಶಗಳೂ ತನ್ನ ಪ್ರಜೆಗಳಲ್ಲಿ ರಾಷ್ಟ್ರೀಯ ಭಾವನೆಯನ್ನು ಬೆಳೆಸುತ್ತ ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಯುತ್ತಿರುವಾಗ "ಭಾರತದಲ್ಲಿ ರಾಷ್ಟ್ರೀಯತೆಯ ಕಲ್ಪನೆಯೇ ಇರಲಿಲ್ಲ, ರಾಷ್ಟ್ರಭಕ್ತಿ ಎಂಬುದು ನಮ್ಮ ಸಂಸ್ಕೃತಿಯಲ್ಲಿ ಒಂದು ಪ್ರಮುಖ ಲಕ್ಷಣವೇ ಅಲ್ಲ" ಎಂಬ ಪ್ರಗತಿಪರರ ಸಿದ್ಧಾಂತಗಳು ಕಡೆಗೆ ಅನ್ಯದೇಶಗಳು ನಮ್ಮನ್ನು ಆಕ್ರಮಿಸಿ ಹೊಸಕುವ ಪರಿಸ್ಥಿತಿಗೆ ಕೊಂಡೊಯ್ಯಬಹುದು. ಏಕೆಂದರೆ ಪ್ರಗತಿಪರ ಚಿಂತನೆಯ ಫಲವಾಗಿ ಪಡೆಮೂಡುವ ಒಂದು ಸಿದ್ಧಾಂತ ತರುವಾಯ ತಾನೂ ಒಂದು ಜಡ ಸಂಪ್ರದಾಯವಾಗಿ ಮಾರ್ಪಡುತ್ತದೆ.

ಈ ವಾದವು ನಮ್ಮ ಪ್ರಗತಿಪರರ ಚಿಂತನಾಕ್ರಮದ ಎಡಬಿಡಂಗಿತನವನ್ನು ಎತ್ತಿ ತೋರಿಸುವ ಉದ್ದೇಶದ್ದೇ ವಿನಃ ಇಲ್ಲಿ ಹಿಂದೂತ್ವ ಅಥವಾ ರಾಷ್ಟ್ರೀಯವಾದದ ಪ್ರತಿಪಾದನೆಯ ಯಾವುದೇ ಹುನ್ನಾರ ಖಂಡಿತ ಇಲ್ಲ. ಒಟ್ಟಿನಲ್ಲಿ ಜಾತಿ, ಜನಾಂಗ, ಧರ್ಮ, ಭಾಷೆ ಇತ್ಯಾದಿ ಅಹಮಿಕೆಗಳ ಹಂಗಿಲ್ಲದಂತೆ ಬದುಕಬೇಕೆಂಬ ಕನಸು ಸದ್ಯಕ್ಕಂತೂ ನಮ್ಮ ನಡುವೆ ವಾಸ್ತವಗೊಂಡಿಲ್ಲ.

ತಾನೊಬ್ಬ ಹಿಂದೂ ಎಂಬ ಕಾರಣಕ್ಕೇ ಗಾಂಧಿ ಹಿಂದೂಗಳನ್ನು ಸದಾ ವಿಮರ್ಶಕ ದೃಷ್ಟಿಯಿಂದ ನೋಡುತ್ತಿದ್ದರು ಮತ್ತು ಹಿಂದೂ ಅಲ್ಲದವರ ವಿಷಯದಲ್ಲಿ ಉದಾರತನ ಪ್ರದರ್ಶಿಸುತ್ತಿದ್ದರು. ಈ ನಿಲುವು ಯೋಗ್ಯನಾದ ಒಬ್ಬ ಹಿಂದೂವಿಗೆ, ಅಥವಾ ಯಾವುದೇ ಧರ್ಮೀಯನಿಗೆ ಉಚಿತವೇ ಸರಿ. ಗಾಂಧಿಯ ಈ ವರ್ತನೆಯಲ್ಲಿ ಕಂಡವರ ಮಕ್ಕಳನ್ನು ಟೀಕಿಸುವ ಮೊದಲು ನಮ್ಮ ಮನೆಮಕ್ಕಳನ್ನು ನಾವು ಹದ್ದುಬಸ್ತಿನಲ್ಲಿ ಇಡಬೇಕು ಎಂಬ ಸದ್ಗೃಹಸ್ಥನ ನೈತಿಕತೆ ಕಾಣಿಸುತ್ತದೆ. ಇದು ವೈಯಕ್ತಿಕ ನೆಲೆಯಲ್ಲಿ ಸರಿ. ಆದರೆ ಈ ಗೃಹಸ್ಥಧರ್ಮವನ್ನು ಇಡೀ ದೇಶಕ್ಕೆ ಅನ್ವಯಿಸಿದರೆ ಅನಾಹುತಗಳಾಗುತ್ತವೆ. ಹಾಗೆ ಅನ್ವಯಿಸಿದ್ದರ ಪರಿಣಾಮವಾಗಿ ಸ್ವಾತಂತ್ರ್ಯ ಬಂದ ಮೇಲೆ ವೋಟ್ ಬ್ಯಾಂಕ್ ರಾಜಕಾರಣ ಪ್ರಾರಂಭವಾಗಿ ದೇಶದ ಐಕ್ಯತೆಯಲ್ಲಿ ಬಿರುಕು ಕಾಣಿಸಿಕೊಂಡಿತು. ತನ್ನ ಆಧ್ಯಾತ್ಮಿಕ ಸಾಧನೆಗಾಗಿ ತಾನು ಪಾಲಿಸುತ್ತಿದ್ದ ಒಂದು ಮೌಲ್ಯವು ದೇಶದ ಐಕಮತ್ಯಕ್ಕೆ ಭಂಗ ತರಲಿದೆ ಎಂದು ತಿಳಿದರೆ ಗಾಂಧಿಯ ಆತ್ಮ ನಿಜಕ್ಕೂ ನೊಂದುಕೊಳ್ಳುತ್ತದೆ.

ಗಾಂಧೀವಾದ ಎಲ್ಲ ಸೆಕ್ಯುಲರ್‌ವಾದಗಳಿಗೂ ಮಾರಕವಾಗುತ್ತದೆ ಮತ್ತು

ಅಪಥ್ಯವಾಗುತ್ತದೆ ಎಂಬುದು ನಮ್ಮ ಬುದ್ಧಿಜೀವಿಗಳಿಗೆ ಇಂದಿಗೂ ಅರ್ಥವಾದಂತಿಲ್ಲ. ಹಳ್ಳಿಯಲ್ಲಿ ಹುಟ್ಟಿ, ಬೆಳೆಯದ ಮತ್ತು ಜೀವನೋಪಾಯಕ್ಕಾಗಿ ಎಂದೂ ಹಳ್ಳಿಯ ಆಶ್ರಯದಲ್ಲಿದ್ದು ಅಲ್ಲಿನ ಕಷ್ಟಕೋಟಲೆಗಳನ್ನು ಅನುಭವಿಸದ ಗಾಂಧಿಯಂಥವರು ಗ್ರಾಮಸ್ವರಾಜ್ಯದ ಬಗ್ಗೆ ಮಾತನಾಡುವುದೇ ಹಾಸ್ಯಾಸ್ಪದ. ಹಳ್ಳಿಗಳಲ್ಲಿ ಭವಿಷ್ಯವಿಲ್ಲ ಎಂಬುದು ಪ್ರತಿಯೊಬ್ಬ ಹಳ್ಳಿಗನಿಗೂ ಗೊತ್ತಿರುತ್ತದೆ. ಆದರೆ ಹಳ್ಳಿಗಳಲ್ಲಿ ಬದುಕನ್ನು ನಡೆಸಲೊಲ್ಲದ ಬುದ್ಧಿಜೀವಿಗಳು ಅದೇಕೆ ಗಾಂಧಿಯ ಗ್ರಾಮಸ್ವರಾಜ್ಯ ಕಲ್ಪನೆಯನ್ನು ಕೊಂಡಾಡುವರು ಮತ್ತು ಕೊನೆಯಿರದಂತೆ ಕಾಯಕ, ಶ್ರಮ, ದುಡಿಮೆ ಇತ್ಯಾದಿಗಳನ್ನು ಪ್ರಚಾರ ಮಾಡುವರೋ ಅರ್ಥವಾಗುವುದಿಲ್ಲ.

ಆಧುನಿಕ ಯುಗದಲ್ಲೂ ಪ್ರಸನ್ನರಂತಹ ಕೆಲವು ಕ್ರಿಯಾಶೀಲರಾದ ಗಾಂಧೀವಾದಿಗಳು ಯಶಸ್ವಿಯಾಗಿ ಗುಡಿಕೈಗಾರಿಕೆಗಳನ್ನು, ಗ್ರಾಮೀಣ ಉದ್ಯೋಗಗಳನ್ನು ಪೋಷಿಸಿ ಬೆಳೆಸುತ್ತಿರುವರು. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಇಂಥ ಒಳ್ಳೆಯ ಪ್ರಯತ್ನಗಳನ್ನು ಅಪವಾದಗಳಂತೆ ಕಾಣಬಹುದೇ ವಿನಃ ಇವನ್ನೇ ನಿಯಮವನ್ನಾಗಿ ಪರಿಗಣಿಸಿ ಒಟ್ಟು ಸಮಾಜಕ್ಕೆ ಅನ್ವಯಿಸಲಾಗದು. ಯಂತ್ರಗಳಿಂದಾಗುವ ಕೆಲಸವನ್ನು ಮನುಷ್ಯರ ಕೈಲಿ ಮಾಡಿಸುವುದೇ ಅಮಾನವೀಯತೆಯಾಗಿದೆ. ಮಾನವ ಶ್ರಮ ಮತ್ತು ದುಡಿಮೆಗಳು ಇರುವಷ್ಟೂ ಕಾಲ ಸಾಮಾಜಿಕ ನ್ಯಾಯದ ಕನಸು ಕನಸಾಗೇ ಉಳಿದುಬಿಡುತ್ತದೆ. ಅಲ್ಲದೆ ಇಂದು ಸಾಮಾಜಿಕ ನ್ಯಾಯವನ್ನು (ಅನ್ನ ವಸತಿ ಇತ್ಯಾದಿ ಮೂಲಭೂತ ಅಗತ್ಯಗಳ ಪೂರೈಕೆ ಎಂಬರ್ಥದಲ್ಲಿ) ವಾಸ್ತವಗೊಳಿಸಿರುವ ದೇಶಗಳಲ್ಲಿ ಯಂತ್ರಗಳು ಶ್ರಮಸಾಧ್ಯವಾದ ಕೆಲಸಗಳಿಂದ ಮನುಷ್ಯನನ್ನು ವಿಮೋಚನೆಗೊಳಿಸಿವೆ ಎಂಬುದನ್ನು ನಾವು ಮರೆಯಬಾರದು.

ದುಡಿಯುವ ಪ್ರಜ್ಞೆಗೂ ದುಡಿಮೆಯಿಂದ ಬಿಡುಗಡೆ ಹೊಂದಿದ ಪ್ರಜ್ಞೆಗೂ ನಡುವೆ ಅಪಾರವಾದ ವ್ಯತ್ಯಾಸ ಏರ್ಪಡುತ್ತದೆ. ಮನುಷ್ಯನ ಈವರೆಗಿನ ಎಲ್ಲ ಮಹತ್ವದ ಸಾಧನೆಗಳೂ ದುಡಿಮೆಯಿಂದ ಬಿಡುಗಡೆ ಹೊಂದಿದ ಸನ್ನಿವೇಶದಲ್ಲಿ ಸಂಭವಿಸಿವೆ. ಅಥೆನ್ಸ್‌ನಲ್ಲಿ ವಿಜ್ಞಾನ, ತತ್ವಜ್ಞಾನ, ನೀತಿಶಾಸ್ತ್ರ, ಸಾಹಿತ್ಯಗಳು ತಮ್ಮ ಉತ್ತುಂಗಕ್ಕೆ ತಲುಪಲು ಕಾರಣಗಳಿವೆ. ಅಲ್ಲಿನ ಸಮಾಜವು ದುಡಿಯುವ ಗುಲಾಮ ವರ್ಗ ಹಾಗು ದುಡಿಯದ ಅಭಿಜಾತ ವರ್ಗಗಳೆಂದು ಸ್ಪಷ್ಟವಾಗಿ ವಿಭಜನೆಯಾಗಿತ್ತು. ಆ ಅಭಿಜಾತ ವರ್ಗವನ್ನು ಮಾರ್ಕ್ಸಿಸ್ಟರು ಬೂರ್ಷ್ವಾಗಳೆಂದು ಕರೆಯುತ್ತಿದ್ದರು. ಈ ಬೂರ್ಷ್ವಾ ವರ್ಗವೇ ಸಾಕ್ರಟೀಸ್, ಅರಿಸ್ಟಾಟಲ್, ಪ್ಲೇಟೋರಂತಹ ತತ್ವಜ್ಞಾನಿಗಳಿಗ ಜನ್ಮ ನೀಡಿದ್ದು. ಭಾರತದಲ್ಲಿಯೂ ಶ್ರಮದಿಂದ ಸಂಪೂರ್ಣ ಬಿಡುಗಡೆ ಹೊಂದಿದ್ದ ಬ್ರಾಹ್ಮಣರದ್ದು ಇದೇ ಕತೆ. ಶ್ರಮದಿಂದ ಬಿಡುಗಡೆ ಹೊಂದಿದ ಬ್ರಾಹ್ಮಣನ ಚಿತ್ತ ಸುಲಭವಾಗಿ ಮುಂದಿನ ಹಂತವನ್ನು ಪ್ರವೇಶಿಸಿತು. ಇಡೀ ಮನುಷ್ಯಜಾತಿಯೇ

ಹೀಗೆ ಶ್ರಮಸಾಧ್ಯ ದುಡಿಮೆಯಿಂದ ಮುಕ್ತವಾಗುವ ದಿನವೇ ನಿಜವಾದ ಕ್ರಾಂತಿ ಹಾಗು ಸರ್ವೋದಯ ಸಂಭವಿಸುವುದು. ಮನುಷ್ಯನನ್ನು ಶ್ರಮಸಾಧ್ಯ ದುಡಿಮೆಯಿಂದ ಬಿಡುಗಡೆಗೊಳಿಸದೇ ವ್ಯಕ್ತಿಗೌರವ, ಸಾಮಾಜಿಕ ನ್ಯಾಯಗಳ ಬಗ್ಗೆ ಮಾತನಾಡುವುದು ಅರ್ಥಹೀನ.

ಗಾಂಧೀ ಅಥವಾ ಪ್ರಸನ್ನರ ಚಿಂತನೆಗಳಾದರೂ ದೇಶದ ಪ್ರತಿಯೊಬ್ಬ ಪ್ರಜೆಯನ್ನೂ ಶಾಶ್ವತವಾಗಿ ಶ್ರಮಜೀವಿಯನ್ನಾಗಿ ಮಾಡಿಬಿಡುತ್ತದೆ. ನಮ್ಮ ಪರಿಸರ ದಿನೇ ದಿನೇ ನಾಶವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಗಾಂಧಿ ಸೂಚಿಸುವ ಗ್ರಾಮ ಸ್ವರಾಜ್ಯ, ಸರ್ವೋದಯ, ನಯೀತಾಲೀಂ ಇತ್ಯಾದಿಗಳು ಮೇಲ್ನೋಟಕ್ಕೆ ರಮ್ಯ ಮತ್ತು ಅನುಕರಣೀಯ ಎಂಬಂತೆ ತೋರಬಹುದು. ಆದರೆ ಯಾವುದೇ ಹೊಸ ಆವಿಷ್ಕಾರ ತನ್ನೊಂದಿಗೆ ಹೊಸ ಸಮಸ್ಯೆ, ಸವಾಲುಗಳನ್ನೂ ಹೊತ್ತು ತರುತ್ತದೆ. ವಿಜ್ಞಾನ ತಂತ್ರಜ್ಞಾನಗಳು ತಂದೊಡ್ಡುವ ಮಾರಕ ಪರಿಣಾಮಗಳನ್ನು ಎಚ್ಚರದಿಂದ ನಿವಾರಿಸಿಕೊಳ್ಳಬೇಕಾದುದು ಇಂದು ನಮ್ಮೆದುರಿಗಿರುವ ಸವಾಲಾಗಿದೆಯೇ ವಿನಃ ಯಂತ್ರಗಳನ್ನು ಕಳಚಿಟ್ಟು ಗಾಂಧೀ ಸೂಚಿಸುವ ಭೂತಕಾಲಕ್ಕೆ ಅಂದರೆ ರಾಮರಾಜ್ಯಕ್ಕೆ ಅಥವಾ ಬುಡಕಟ್ಟು ಜೀವನ ಪದ್ಧತಿಗೆ ಏಕಾಏಕಿ ಹಿಂದಿರುಗುವುದು ಪರಿಹಾರವಲ್ಲ. ಭವಿಷ್ಯದ ಸವಾಲುಗಳನ್ನು ಎದುರಿಸಲಾಗದೇ ಭೂತಕಾಲಕ್ಕೆ ಸರಿದುಬಿಡುವ ಈ ಹೃದಯ ದೌರ್ಬಲ್ಯವನ್ನು ಮನೋವಿಜ್ಞಾನಿಗಳು 'ರಿಗ್ರೆಷನ್' ಎಂದು ಕರೆಯುತ್ತಾರೆ. ಬೃಹತ್ ಯಂತ್ರಗಳು ಮತ್ತು ತಂತ್ರಜ್ಞಾನದ ನೆರವಿನಿಂದ ಹಲವು ಹಳ್ಳಿಗಳ ಸಮಸ್ತ ಕೃಷಿಭೂಮಿಯನ್ನು ಒಗ್ಗೂಡಿಸಿ ಸಮರೋಪಾದಿಯಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸುವುದು ಇಂದಿನ ಕಾಲದಲ್ಲಂತೂ ಕಷ್ಟವೇನಲ್ಲ. ಮೊದಲ ಮಹಾಯುದ್ಧದಲ್ಲಿ ಸೋತು ಸುಣ್ಣವಾಗಿದ್ದ ರಷ್ಯಾಗೆ ಆಗ ತಿನ್ನಲೂ ಗತಿಯಿರಲಿಲ್ಲ. ಇಂತಹ ದೇಶವು ಸ್ಟಾಲಿನ್ ಕಾಲದಲ್ಲಿ ಯಂತ್ರಗಳ ನೆರವಿನಿಂದ ಒಂದು ದಶಕದ ಒಳಗಾಗಿ ಹಸಿರು ಕ್ರಾಂತಿ ಮಾಡಿದ ಉದಾಹರಣೆ ನಮ್ಮ ಕಣ್ಮುಂದೆ ಇನ್ನೂ ಹಸುರಾಗಿದೆ. ನಮ್ಮ ದೇಶದ ಕೋಟ್ಯಂತರ ತುತ್ತಿನ ಚೀಲಗಳನ್ನು ಒಂದೇ ಸಲಕ್ಕೆ ತುಂಬಿಸಬೇಕಾದ ತುರ್ತು ಇಂದು ನಮ್ಮೆದುರು ನಿರ್ಮಾಣವಾಗಿದೆ. ಇಂತಹ ದೊಡ್ಡ ಹೊಣೆಗಾರಿಕೆಯನ್ನು ಬೆಳೆ ಸಾಲ ತೀರಿಸಲೂ ಹೆಣಗುತ್ತಿರುವ, ಪ್ರತಿವರ್ಷ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಬಡಪಾಯಿ ರೈತರ ಹೆಗಲಿಗೆ ಹೊರಿಸುವುದೇ?

ಗಾಂಧಿ ಎಷ್ಟು ಅವೈಜ್ಞಾನಿಕವಾಗಿ ಆಲೋಚಿಸುತ್ತಿದ್ದರು ಎಂಬುದು ಡಾ. ಅಂಬೇಡ್ಕರ್‌ಗೆ ಸರಿಯಾಗಿ ತಿಳಿದಿತ್ತು. ಡಾ. ಅಂಬೇಡ್ಕರ್ ಗಾಂಧಿಯನ್ನು ಪ್ರತಿ ಹಂತದಲ್ಲೂ ಟೀಕಿಸುತ್ತಿದ್ದರು. ಗಾಂಧಿ ಮತ್ತು ಜಿನ್ನಾ ಇಬ್ಬರೂ ದೇಶವನ್ನು ತಪ್ಪು ದಿಕ್ಕುಗಳಲ್ಲಿ, ವಿನಾಶದತ್ತ, ನಡೆಸುತ್ತಿರುವರು ಎಂದು ಅಂಬೇಡ್ಕರ್ ೧೯೪೩ರಲ್ಲಿ ಪುಣೆಯ ಒಂದು ಭಾಷಣದಲ್ಲಿ ಆತಂಕದಿಂದ ನುಡಿದಿದ್ದರು. ಅವರ ಭವಿಷ್ಯವಾಣಿ

ಸುಳ್ಳಾಗಲಿಲ್ಲ. ಹೀಗೆಂದ ಕೆಲವೇ ವರ್ಷಗಳಲ್ಲಿ ಎರಡೂ ದೇಶಗಳಲ್ಲಿ ಅಮಾಯಕರಾದ ಅದೆಷ್ಟೋ ಹಿಂದೂಗಳು ಮತ್ತು ಮುಸ್ಲಿಮರು ಬರ್ಬರವಾಗಿ ಹತ್ಯೆಯಾದರು. ಎರಡೂ ದೇಶಗಳ ಲಕ್ಷಾಂತರ ಮಂದಿ ಪ್ರಜೆಗಳು ನಿರಾಶ್ರಿತರಾದರು. ಆದರೆ ಅಂಬೇಡ್ಕರ್‌ರ ಆತಂಕ ಅರ್ಥ ಮಾಡಿಕೊಳ್ಳದ ಸ್ವಾತಂತ್ರ್ಯಪೂರ್ವದ ಬುದ್ಧಿಜೀವಿಗಳು ಅಂಬೇಡ್ಕರ್‌ರನ್ನು ಗಾಂಧಿಯ ವೈರಿಯಂತೆ ಬಿಂಬಿಸಿದರು ಮತ್ತು ಸ್ವಾತಂತ್ರ್ಯೋತ್ತರದ ಬುದ್ಧಿಜೀವಿಗಳು ಇತಿಹಾಸ ಕಲಿಸಿದ ಯಾವ ಪಾಠವನ್ನೂ ನೆನಪಿನಲ್ಲಿಟ್ಟುಕೊಳ್ಳದೆ ಗಾಂಧಿ-ಅಂಬೇಡ್ಕರ್ ನಡುವೆ ಇಲ್ಲದ ಸಮನ್ವಯ ತರಲು ಪ್ರಯತ್ನಿಸಿದರು.

ಈ ಸಮನ್ವಯದ ಮೊದಲ ಹರಿಕಾರರಾದ ಲೋಹಿಯಾರನ್ನು ತಲೆಯ ಮೇಲೆ ಹೊತ್ತು ಮೆರೆಸುವ ಕರ್ನಾಟಕದ ಬುದ್ಧಿಜೀವಿಗಳಂತೂ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಅವರಿಬ್ಬರನ್ನು ಶೇಕ್ಸ್‌ಪಿಯರ್ ನಾಟಕದ ವೈರುಧ್ಯಕರವಾದ ಎರಡು ಉದಾತ್ತ ಪಾತ್ರಗಳೆಂಬಂತೆ ಅಸಂಬದ್ಧವಾಗಿ ಬಿಂಬಿಸಿದರು. ಅವರಿಬ್ಬರ ನಡುವೆ ಹುಸಿ ಸಾಮರಸ್ಯ ಬೆಸೆಯಲು ಮುಂದಾದರು. ಡಿ. ಆರ್. ನಾಗರಾಜ್ ವಿಶ್ವವಿದ್ಯಾಲಯದಲ್ಲಿ ಕಾವ್ಯ, ನಾಟಕಗಳನ್ನು ಬೋಧಿಸುವ ಉಪನ್ಯಾಸಕರಾಗಿದ್ದ ಕಾಲದಲ್ಲಿ ಬರೆದಿದ್ದ 'ಫ್ಲೇಮಿಂಗ್ ಫೀಟ್' ಕೃತಿಯಲ್ಲಿ "ಇಬ್ಬರೂ ಪರಸ್ಪರ ಭಿನ್ನಾಭಿಪ್ರಾಯ ಹೊಂದಿದ್ದರೂ ಆಳದಲ್ಲಿ ಒಬ್ಬರಿಂದ ಮತ್ತೊಬ್ಬರು ಕಲಿತು ಬೆಳೆಯುತ್ತಿದ್ದರು ಮತ್ತು ತಮ್ಮನ್ನು ತಾವು ಪರಿವರ್ತಿಸಿಕೊಳ್ಳುತ್ತಿದ್ದರು" ಎಂದೆಲ್ಲ ಕಲ್ಪಿಸಿ ಸಿದ್ಧಾಂತ ಮಾಡಿರುವರು. ಇದು "ಬಸವಾದಿ ಶರಣರು ಸನಾತನ ಧರ್ಮದಿಂದಲೂ ಕಲಿತು ಬೆಳೆಯುತ್ತಿದ್ದರು" ಎಂಬ ನುಡಿಗಳಷ್ಟೇ ಅಸಂಗತವಾದ ನುಡಿಗಳಾಗಿವೆ. ಗಾಂಧಿಯೊಂದಿಗೆ ರಾಜಿ ಅಥವಾ ಅನುಸಂಧಾನ ಮಾಡಿಕೊಳ್ಳುವ ಯಾವ ಆಸಕ್ತಿಯೂ ಅಂಬೇಡ್ಕರ್‌ಗೆ ಇರಲಿಲ್ಲ. ಅವರಿಬ್ಬರ ನಡುವೆ ಕಡೆತನಕ ತಿಕ್ಕಾಟ ಇದ್ದೇ ಇತ್ತು ಎಂಬ ಅಂಶವನ್ನು ಪ್ರಗತಿಪರರೆನಿಸಿಕೊಂಡ ಕೆಲವರು ಇಂದಿಗೂ ಒಪ್ಪಲು ಇಷ್ಟ ಪಡುವುದಿಲ್ಲ.

ದೇವನೂರ ಮಹಾದೇವರಂತೂ ಗಾಂಧಿ-ಅಂಬೇಡ್ಕರ್‌ರನ್ನು ಮಕ್ಕಳ ಹಿತ ಬಯಸುವ ಸುಶಿಕ್ಷಿತ ಅಪ್ಪ-ಅಮ್ಮನಿಗೆ ಹೋಲಿಸುವರು. ಇವೆಲ್ಲ ಹೋಲಿಕೆಗೆ ಚೆಂದ ಕಾಣಿಸುತ್ತದೆಯೇ ವಿನಃ ವಾಸ್ತವವನ್ನು ಕಾಣಲು ಸಹಾಯಕವಾಗುವುದಿಲ್ಲ. ಈ ತರಹದ ಹೋಲಿಕೆಗಳು ಗಾಂಧಿ-ಅಂಬೇಡ್ಕರ್ ಇಬ್ಬರನ್ನೂ ವಸ್ತುನಿಷ್ಠವಾಗಿ ಮನಗಾಣಲು ಆಸ್ಪದ ನೀಡದೆ ಬದ್ಧತೆಯುಳ್ಳ ಬುದ್ಧಿಜೀವಿಗಳನ್ನು ಚಾರಿತ್ರಿಕ ವಿಸ್ಮೃತಿಗೆ ತಳ್ಳುತ್ತದೆ.

ಗಾಂಧೀ-ಅಂಬೇಡ್ಕರರನ್ನು ಬೆಸೆವ ಪ್ರೇರಣೆಗೊಳಗಾದ ನಮ್ಮ ಸಮಾಜವಾದೀ ಲೇಖಕರ ಎಲ್ಲ ಕತೆ ಕಾದಂಬರಿ, ನಾಟಕಗಳಲ್ಲೂ ಆ ಕಥನದ ನಾಯಕನು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ನಿಷ್ಕ್ರಿಯನಾಗಿ ನಿಲ್ಲುವುದನ್ನು

ಮತ್ತು ಕಡೆತನಕ ದ್ವಂದ್ವದಲ್ಲಿ ನವೆಯುವುದನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಬೇಕಾಗುತ್ತದೆ. ವೈಯಕ್ತಿಕವಾಗಿ ಅವೆಲ್ಲ ಉದಾತ್ತ ಪಾತ್ರಗಳೇ ಸರಿ. ಆದರೆ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಆ ಪಾತ್ರಗಳು ನಿಷ್ಪ್ರಯೋಜನಕಾರಿ ಎಂದು ಸಾಬೀತಾಗುತ್ತವೆ. ನಮ್ಮ ಪ್ರಗತಿಪರ ಚಿಂತನೆಯಲ್ಲಿದ್ದ ಈ ಕೆಲವು ದೋಷಗಳು ಪ್ರಾಯಶಃ ಪೂರ್ಣಚಂದ್ರ ತೇಜಸ್ವಿಗೆ ಗೋಚರಿಸಿತ್ತು ಎನಿಸುತ್ತದೆ. ನಾವು ಸಮಾಜವಾದವನ್ನು ನಂಬಿ ಈ ಮೂವತ್ತು ವರ್ಷಗಳನ್ನು ಸುಮ್ಮನೆ ಹಾಳು ಮಾಡಿಕೊಂಡೆವು ಎಂದು ಅವರು ೯೦ರ ದಶಕದ ಕೆಲವು ಲೇಖನಗಳಲ್ಲಿ ಪದೇ ಪದೇ ಹೇಳಿರುವರು (ಹೊಸವಿಚಾರಗಳು, ಲೇ: ಪೂರ್ಣಚಂದ್ರ ತೇಜಸ್ವಿ, ಪುಸ್ತಕ ಪ್ರಕಾಶನ, ಮೂಡಿಗೆರೆ)

ಎಲ್ಲ ಸಮಾಜಗಳೂ ನಿರ್ದ್ವಂದ್ವನಾದ, ದೃಢಚಿತ್ತದ ಒಬ್ಬ ಹೀರೋಗಾಗಿ ಹಾತೊರೆಯುತ್ತದೆಯೇ ವಿನಃ ತುಘಲಕ್, ಹ್ಯಾಮ್ಲೆಟ್ ತರಹದ ದ್ವಂದ್ವಗಳನ್ನು ಬೆದಕುವ ಬುದ್ಧಿಜೀವಿಗಳನ್ನು ಅದು ತನ್ನ ನಾಯಕನನ್ನಾಗಿ ಆರಿಸಲು ಇಷ್ಟ ಪಡುವುದಿಲ್ಲ. ಇದು ಯಾವುದೇ ಸಮಾಜದ ಬಹುಮುಖ್ಯ ಲಕ್ಷಣವಾಗಿದೆ ಅಥವಾ ದೌರ್ಬಲ್ಯವಾಗಿದೆ ಎನ್ನಲೂಬಹುದು. ಏಕೆಂದರೆ ದ್ವಂದ್ವಚಿತ್ತವಿಲ್ಲದ ಅಂತಹ ನಾಯಕನು ಕೆಲವು ಸಲ ಹಿಟ್ಲರ್, ಸ್ಟಾಲಿನ್‌ಗಳಂತೆ ಮೂರ್ಖರಾಗಿರಬಹುದು, ಕ್ರೂರಿಗಳಾಗಿರಬಹುದು. ಆದರೆ ಎಲ್ಲ ಕಾಲದ ಸಮಾಜವೂ ಅಂಥವಕ್ಕೆ ಕುರುಡಾಗಿರುತ್ತದೆ. ಇಂದಿಗೂ ನಾವು ಅಂತಹ ಮೂರ್ಖರ ಮತ್ತು ಕ್ರೂರಿಗಳ ಕೈಗೆ ಅಧಿಕಾರ ಸೂತ್ರಗಳನ್ನು ನೀಡಿರುವುದು ಈ ಕುರುಡುತನಕ್ಕೊಂದು ಪುರಾವೆಯಾಗಿದೆ.

ಸ್ವಾತಂತ್ರ್ಯಾನಂತರ ಗಾಂಧೀಪಕ್ಷವಾಗಿದ್ದ ಕಾಂಗ್ರೆಸ್ ಅಧಿಕಾರ ಪಡೆದ ಕಾರಣ ಸಹಜವಾಗಿಯೇ ಗಾಂಧಿ-ಅಂಬೇಡ್ಕರ್ ಬಗ್ಗೆ ಯಥಾರ್ಥವಾಗಿ ಚರ್ಚೆ, ವಾಗ್ವಾದಗಳು ಮುಂದುವರಿಯಲು ಆಸ್ಪದವಾಗಲಿಲ್ಲ. ಆದರೆ ನಮ್ಮ ಬುದ್ಧಿಜೀವಿಗಳ ಬುದ್ಧಿ ಎಲ್ಲಿ ಹೋಗಿತ್ತು? ಈ ಚಾರಿತ್ರಿಕ ವಿಸ್ಮೃತಿಯ ಪರಿಣಾಮವಾಗಿ ದೇಶದ ಮೊದಲ ಅತಿದೊಡ್ಡ ಪಕ್ಷವು ಗಾಂಧೀ ಪ್ರಣೀತವಾದ ಓಲೈಕೆಯ ರಾಜಕಾರಣದಲ್ಲಿ ತೊಡಗಿ ಅವನತಿಯ ಕಡೆಗೆ ಪಯಣಿಸಿತಲ್ಲದೆ ಮೇಲ್ವರ್ಗದ ಬಹುಸಂಖ್ಯಾತರಲ್ಲಿ ಗುಪ್ತವಾಗಿ ಅಸಹನೆಯನ್ನು ಬೆಳೆಸಿತು. ಈ ಅಸಹನೆಗೆ ಆಸ್ಪದ ನೀಡದೆ ಹೋಗಿದ್ದರೆ ಬಹುಶಃ ಇಂದು ದೇಶದಲ್ಲಿ ಕಾಂಗ್ರೆಸ್‌ಗೆ ಪರ್ಯಾಯವಾದ ಮತ್ತೊಂದು ರಾಜಕೀಯ ಪಕ್ಷ ಹುಟ್ಟುತ್ತಲೇ ಇರಲಿಲ್ಲವೇನೋ. ಏಕೆಂದರೆ ಸ್ವಾತಂತ್ರ್ಯಪೂರ್ವ ಕಾಲದ ಕಾಂಗ್ರೆಸ್ ಬಹುತೇಕ ಸವರ್ಣೀಯರೇ ತುಂಬಿದ್ದ ಕಟ್ಟಾ ಬಲಪಂಥೀಯ ಪಕ್ಷವಾಗಿತ್ತು. ಅಂದಿನ ಕಾಂಗ್ರೆಸ್ಸಿಗರರ ಬಲಪಂಥೀಯ ಧೋರಣೆಗೆ ಬೇಸತ್ತು ಅಂಬೇಡ್ಕರ್ ಕಾಂಗ್ರೆಸ್‌ನಿಂದ ಆಚೆಗೆ ನಡೆದರು, ಅವರ ಕಂದಾಚಾರದ ಮೌಲ್ಯಗಳಿಗೆ ಹೇಸಿ ಸುಭಾಷ್ ಚಂದ್ರಬೋಸ್ ರಾಜಿನಾಮೆ ನೀಡಿದರು ಮತ್ತು ಕಾಂಗ್ರೆಸ್‌ನಲ್ಲಿ ನೆಹರೂಗಿಂತಲೂ ಹಿರಿಯ ಕಾರ್ಯಕರ್ತರಾಗಿದ್ದ ಜಿನ್ನಾ ಕಾಂಗ್ರೆಸ್‌ನಿಂದ ಹೊರನಡೆದು ಮುಸ್ಲಿಂಲೀಗ್ ಸ್ಥಾಪಿಸಲು

ಮುಂದಾದರು. ಈ ಬೆಳವಣಿಗೆಗಳನ್ನು ನಿರೀಕ್ಷಿಸಿರದಿದ್ದ ಕಾಂಗ್ರೆಸ್ ತನ್ನಿಂದಾದ ಅಚಾತುರ್ಯವನ್ನು ಸರಿಪಡಿಸಿಕೊಳ್ಳಲು ಇಂದಿಗೂ ದಲಿತರ ಮತ್ತು ಮುಸ್ಲಿಮರ ಓಲೈಕೆಯನ್ನು ಮುಂದುವರಿಸುತ್ತಲೇ ಇದೆ.

ಇಂದು ದೇಶದ ರಾಜಕಾರಣದಲ್ಲಿ ವಿರೋಧ ಪಕ್ಷವೇ ಇಲ್ಲವೆಂಬ ಸ್ಥಿತಿ ನಿರ್ಮಾಣವಾಗಿದೆ. ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯ ಕಾವಲುಗಾರನಂತಿರಬೇಕಾದ ವಿರೋಧ ಪಕ್ಷವನ್ನು ರೂಪಿಸಬೇಕಾದ ಪ್ರಗತಿಪರ ಚಿಂತನೆಗಳೆಲ್ಲವೂ ಇಂದು ದಿಕ್ಕೆಟ್ಟು ನಿಂತಿವೆ. ಗತಕಾಲವನ್ನು ದ್ವಂದ್ವದಲ್ಲಿ ನಿಂತು ಅಸಂಬದ್ಧವಾಗಿ ವ್ಯಾಖ್ಯಾನಿಸಿಕೊಂಡುದರ ಪರಿಣಾಮವಾಗಿ ಈ ನಿರ್ವೀರ್ಯತೆ ಕಾಣಿಸಿಕೊಂಡಿದೆ. ಇಂದಿನ ಪ್ರಗತಿಪರ ಧಾರೆಗಳು ತನ್ನ ಚಿಂತನೆಯ ಮೂಲಧಾತುಗಳನ್ನು ಮತ್ತೊಮ್ಮೆ ಹೊಸದಾಗಿ ರೂಪಿಸಿಕೊಳ್ಳಬೇಕಾದ ಅಗತ್ಯವಿದೆ. ಇಂದು ಆಡಳಿತ ಪಕ್ಷ ಭವಿಷ್ಯಮುಖಿಯಾಗಿದೆ ಮತ್ತು ವಿರೋಧ ಪಕ್ಷ ಗತಕಾಲದ ವೈರುದ್ಧ್ಯಕರ ಸಿದ್ಧಾಂತಗಳನ್ನು ಅಸಂಬದ್ಧವಾಗಿ ಸಮನ್ವಯಿಸುತ್ತ ಕಾಲಹರಣ ಮಾಡುತ್ತಿದೆ. ಇನ್ನಾದರೂ ನಮ್ಮ ಪ್ರಗತಿಪರ ಚಿಂತನೆ ಗತಕಾಲದ ಹೊರೆಯನ್ನು ಕೆಳಗಿಳಿಸಿ ಭವಿಷ್ಯದತ್ತ ಅಲ್ಲದಿದ್ದರೂ ವರ್ತಮಾನದಲ್ಲಿ ಸ್ಥಿರವಾಗಿ ನಿಲ್ಲಬೇಕಾದ ಜರೂರಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಮೋದಿ ಅಲೆಯನ್ನು ನಿಯಂತ್ರಿಸುವ ಶಕ್ತಿಯನ್ನು, ಬಿಜೆಪಿಯನ್ನೂ ಒಳಗೊಂಡಂತೆ, ಭಾರತದ ಯಾವ ರಾಜಕೀಯ ಪಕ್ಷವೂ ಪಡೆದುಕೊಂಡಿರಲಿಲ್ಲ. ಈ ಕೊರತೆಯನ್ನು ತುಂಬಿಕೊಡುವ ಉದ್ದೇಶದಿಂದ ನಮ್ಮ ಪ್ರಗತಿಪರ ಚಿಂತಕರು ತಾತ್ವಿಕವಾಗಿ ಮೋದಿ ಅಲೆಯ ವಿರುದ್ಧ ವಿರೋಧ ಪಕ್ಷದ ನೆಲೆಯಲ್ಲಿ ನಿಂತರೇನೋ ಸರಿ. ಆದರೆ ಅದೇಕೆ ತಮಗೆ ತಾವೇ ಅನಗತ್ಯ ದುಗುಡ, ಆತಂಕಗಳನ್ನು ನಿರ್ಮಿಸಿಕೊಂಡರೆಂಬುದು ತಿಳಿಯುವುದಿಲ್ಲ. ವಿರೋಧ ಪಕ್ಷಕ್ಕೂ ಶತ್ರುಪಕ್ಷಕ್ಕೂ ನಡುವೆ ಅಪಾರವಾದ ವ್ಯತ್ಯಾಸವಿರುತ್ತದೆ ಎಂಬ ಪ್ರಾಥಮಿಕ ವಿವೇಕವನ್ನೂ ಕಳೆದುಕೊಂಡು ಸಮಾಜದಲ್ಲೂ ತಲ್ಲಣವನ್ನು ಸೃಷ್ಟಿಸಿದರು? ಅವರ ನಂಬಿಕೆಗಳು ಗಾಂಧಿ-ಅಂಬೇಡ್ಕರ್ ನಡುವಣ ಹುಸಿ ಸಮನ್ವಯದ ತಳಹದಿಯ ಮೇಲೆ ನಿಂತಿದ್ದರಿಂದ ಅವರು ಹಾಗೆ ಕಂಪಿಸಿದ್ದರೇ? ಇವೆಲ್ಲ ಆರೋಗ್ಯಕರವಾದ ದಿಕ್ಕಿನಲ್ಲಿ ಯೋಚಿಸಲು ಬಯಸುವ ಪ್ರಗತಿಪರರು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ವಿಷಯಗಳಾಗಿವೆ. ಈ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳದೆ ಯಥಾಸ್ಥಿತಿಯಲ್ಲಿ ಮುಂದುವರಿದದ್ದೇ ಆದಲ್ಲಿ ಇನ್ನು ಕೆಲವೇ ವರ್ಷಗಳಲ್ಲಿ ಪ್ರಗತಿಪರ ಚಿಂತನೆ ಎಂಬುದು ಬಲಪಂಥೀಯ ವಾದಿಗಳ ಕೈಲಿ ಒಂದು ಹಾಸ್ಯಾಸ್ಪದ ವಸ್ತುವಾಗುತ್ತದೆ. ಇಲ್ಲವೇ ಬಲಪಂಥೀಯರಲ್ಲಿ ಸಿನಿಕತನ ಬೆಳೆಸ ತೊಡಗುತ್ತದೆ. ಒಂದು ಪ್ರಗತಿಪರ ಚಿಂತನೆ ಬಹುಸಂಖ್ಯಾತ ಸಹಜೀವಿಗಳಲ್ಲಿ ಸಿನಿಕತನವನ್ನು ಪ್ರಚೋದಿಸುವುದಾದಲ್ಲಿ ಆ ಚಿಂತನೆಯ ಪ್ರಗತಿಪರತೆಯನ್ನೇ ನಾವು ಅನುಮಾನಿಸಬೇಕಾಗುತ್ತದೆ.

ಸಾಬಾರ : ಸಂಚಯ

ಸರ್ವೋದಯ ಆಂದೋಲನದ ಮುನ್ನಡೆ

ಅಖಿಲ ಭಾರತ ಸರ್ವ ಸೇವಾ ಸಂಘ (ಸರ್ವೋದಯ ಮಂಡಲ) ದ ಕಾರ್ಯಕಾರಿ ಸಮಿತಿ ಸಭೆ ೨೪ ಮತ್ತು ೨೫ ಡಿಸೆಂಬರ್ ೨೦೧೪ರಂದು ರಾಜಸ್ತಾನದಲ್ಲಿ ಖಿಮೇಲ್ ಎಂಬ ಪ್ರದೇಶದಲ್ಲಿ ನಡೆಯಲಿದೆ. ಖಿಮೇಲ್ ಎಂಬ ಸ್ಥಳ ರಾಣಿ ಎಂಬ ಜಿಲ್ಲೆಯಲ್ಲಿದೆ. ಸಭೆಯು ಮರುಧರ್ ಬಾಲಿಕ ವಿದ್ಯಾವಾಡಿ ಎಂಬ ಸಂಸ್ಥೆಯ ಆವರಣದಲ್ಲಿ ನಡೆಯುವುದು. ಈ ಸಭೆಯ ಸಭಾ ವಿಷಯ ಇಂತಿದೆ.

******

- ಕಳೆದ ನಡವಳಿಕೆಗಳನ್ನು ದೃಢೀಕರಿಸುವುದು.
- ಕೌಸಾನಿ ಸಭೆಯಲ್ಲಿ ಕೈಗೊಳ್ಳಲಾದ ನಿರ್ಣಯಗಳ ಅನುಷ್ಠಾನದ ಬಗ್ಗೆ ಚರ್ಚೆ.
- ಕಾರ್ಯದರ್ಶಿಯವರ ವರದಿ ಪರಿಶೀಲನೆ.
- ರಾಜ್ಯ ಸರ್ವೋದಯ ಮತ್ತು ಮಿತ್ರ ಮಂಡಲಿಗಳ ವರದಿಗಳ ಮಂಡನೆ.
- ಮಂಡಲಿಯ ವಿವಿಧ ಸಮಿತಿಗಳ ವರದಿ ಪರಿಶೀಲಿಸುವುದು.
- ಅದೇ ದಿನಗಳಲ್ಲಿ ಅದೇ ಸ್ಥರದಲ್ಲಿ ನಡೆಯುವ ಅರ್ಧವಾರ್ಷಿಕ ಅಧಿವೇಶನದ ಕಾರ್ಯಕಾಲಾಪಕ್ಕೆ ಸಂಬಂಧಿಸಿದ ಹಾಗೆ ಸಂಘಟನಾ ಸಮಿತಿ ರಚಿಸುವುದು.
- ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು
- ಕಾರ್ಯಕಾರಿ ಸಭೆಯ ಅಧ್ಯಕ್ಷತೆಯನ್ನು ಮಂಡಲಿಯ ಅಧ್ಯಕ್ಷರಾದ ಶ್ರೀ.ಮಹದೇವ್ ವಿದ್ರೋಹಿ ವಹಿಸುವರು.
- ಅರ್ಧವಾರ್ಷಿಕ ಅಧಿವೇಶನದ ವಿಷಯಗಳು ಇಂತಿವೆ.
- ಕಾರ್ಯದರ್ಶಿಯವರ ವರದಿ
- ಸೇವಾಗ್ರಾಮದಲ್ಲಿ ನಡೆದ ಅಧಿವೇಶನದ ವರದಿ
- ಅಧ್ಯಕ್ಷರ ಭಾಷಣ
- ಪ್ರಸ್ತುತ ರಾಷ್ಟ್ರೀಯ ಪರಿಸ್ಥಿತಿ ಮತ್ತು ಕೈಗೊಳ್ಳಬೇಕಾದ ಕಾರ್ಯಕ್ರಮ.
- ಅಧಿವೇಶನದ ಅಧ್ಯಕ್ಷತೆಯನ್ನು ಮಹದೇವ್ ವಿದ್ರೋಹಿಯವರು ವಹಿಸುವರು. ೨೦೧೪ ನವೆಂಬರ್ ೩ ಮತ್ತು ೪ ರಂದು ಸರ್ವಸೇವಾ ಸಂಘದ ಅಧ್ಯಕ್ಷರಾದ

ಮಹದೇವ್ ವಿದ್ರೋಹಿ, ಪ್ರಧಾನ ಕಾರ್ಯದರ್ಶಿ ಶೇಕ್‌ಹುಸೇನ್ ಮತ್ತು ವ್ಯವಸ್ಥಾಪಕ ಟ್ರಸ್ಟಿ ಟಿ.ಎನ್.ಆರ್.ಪ್ರಭು ಕರ್ನಾಟಕಕ್ಕೆ ಬರಲಿದ್ದಾರೆ. ರಾಜ್ಯದಲ್ಲಿ ಸರ್ವೋದಯ ಆಂದೋಲನದ ಸಂಘಟನೆ ಬಗ್ಗೆ ಚರ್ಚಿಸಲಿದ್ದಾರೆ.

******

ಜಯಪ್ರಕಾಶ್ ನಾರಾಯಣರ ಜನ್ಮಸ್ಥಳದಲ್ಲಿ ರಾಷ್ಟ್ರೀಯ ಸ್ಮಾರಕ ರಚಿಸಬೇಕೆಂಬ ಬೇಡಿಕೆಯನ್ನು ಕಳೆದ ಜೂನ್ ಮಾಹೆ ೨೬ರಂದು ನಡೆದ ರಾಷ್ಟ್ರೀಯ ಸಂಕಲ್ಪ ಸಂಗೋಷ್ಠಿಯಲ್ಲಿ ಸೇರಿದ್ದ ಮಹನೀಯರು ತೀರ್ಮಾನಿಸಿ ಸರ್ಕಾರವನ್ನು ವಿನಂತಿಸಿದ್ದಾರೆ. ಇದಕ್ಕಾಗಿ ೨೦೦ ಕೋಟಿ ರೂಪಾಯಿಯ ಅನುದಾನವನ್ನು ಸರ್ಕಾರದಿಂದ ಕೇಳಲಾಯಿತು.

******

ಸಂಪೂರ್ಣ ಕ್ರಾಂತಿ ರಾಷ್ಟ್ರೀಯ ಮಂಚ್‌ದ ವಾರ್ಷಿಕ ಸಮ್ಮೇಳನ ೨೦೧೪ಳ ಅಕ್ಟೋಬರ್ ೧೧ ಮತ್ತು ೧೨ ರಂದು ಬಿಹಾರ್ ರಾಜ್ಯದ ಮುಜಫರ್‌ಪುರ್‌ನಲ್ಲಿ ಆಯೋಜಿಸಲಾಗಿತ್ತು. ದೇಶದ ವರ್ತಮಾನ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ವಿಶ್ಲೇಷಿಸಿ ಸಂಪೂರ್ಣ ಕ್ರಾಂತಿ ರಾಷ್ಟ್ರೀಯ ಮಂಚ ಯಾವ ರೀತಿ ಪ್ರಭಾವ ಶಾಲಿ ಭೂಮಿಕೆಯನ್ನು ನಿರ್ವಹಿಸಬೇಕೆಂಬ ಬಗ್ಗೆ ಮತ್ತು ಅದನ್ನು ಸನ್ನದ್ಧ ಮಡುವ ಬಗ್ಗೆ ವಿಚಾರ ಮಂಥನ ನಡೆಯಿತು.

******

ಕಳೆದ ಜುಲೈ ೨೭ನೇ ತಾರೀಖು ರಾಜಸ್ತಾನದಲ್ಲಿ ಮೊದಲ ಬಾರಿಗೆ ಮಹಿಳಾ ಸರ್ವೋದಯ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಸುಮರು ೩೦೦ ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು. ದೊಡ್ಡ ಸಂಖ್ಯೆಯಲ್ಲಿ ಗ್ರಾಮೀಣರು ಭಾಗವಹಿಸಿದ್ದರು. ಸಮ್ಮೇಳನದಲ್ಲಿ ರಾಜಸ್ತಾನ ಸರ್ವೋದಯ ಮಂಡಲದ ಅಧ್ಯಕ್ಷೆಯಾದ ಆಶಾಭೋತರ ಮತ್ತು ಕಾರ್ಯದರ್ಶಿ ಶಶಿತ್ಯಾಗಿ ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

ಜನಪದ ನಿಲಯದ ಅಂತರಂಗದಲ್ಲಿ - ೧೨೭



ಸಮಾಜವಾದಿ ನಾಯಕರಾಗಿದ್ದ ಜಯಪ್ರಕಾಶನಾರಾಯಣರು ತಮ್ಮ ವೈಚಾರಿಕ ಚಿಂತನಾ ಯಾತ್ರೆ ಮತ್ತು ಪ್ರತ್ಯಕ್ಷ ಕಾರ್ಯಾನುಭವದ ಕಾರಣದಿಂದಾಗಿ ಸರ್ವೋದಯ ವಿಚಾರಕ್ಕೆ ತಮ್ಮನ್ನು ಜೀವನ ದಾನಿಯನ್ನಾಗಿ ಸಮರ್ಪಿಸಿಕೊಂಡ ಕಾಲಘಟ್ಟದಲ್ಲಿ ಅವರ ಆಪ್ತ ಸಹಾಯಕನಾಗಿ ಐದು ವರ್ಷ ಕೆಲಸಮಾಡುವ ಅವಕಾಶ ದೊರೆಯಿತು. ಆ ಸಮಯದಲ್ಲಿ ಹಲವಾರು ನಿಷ್ಠಾವಂತ ಸಮಾಜವಾದಿಗಳನ್ನು ಭೇಟಿ ಮಾಡುವ ಮಾತನಾಡುವ ಅವಕಾಶ ದೊರೆಯಿತು. ಅವರಲ್ಲಿ ಅನೇಕರು ಗತಿಸಿದ್ದಾರೆ. ಆದರೆ ಅವರೊಂದಿಗೆ ಉಂಟಾದ ಸಂಪರ್ಕದ ನೆನಪು ಮನದಲ್ಲಿ ಹಸಿರಾಗಿಯೇ ಇದೆ. ಸಮಾಜವಾದಿ ಜಯಪ್ರಕಾಶರನ್ನು ಈ ಜನ್ಮದಲ್ಲಿ ಮರೆಯುವಂತಿಲ್ಲ. ಅವರೊಂದಿಗೆ ಉಂಟಾದ ಸಂಪರ್ಕದ ಕಾರಣದಿಂದಾಗಿಯೇ ೬೦ ವರ್ಷಗಳ ಕಾಲ ಅಖಂಡವಾಗಿ ಸಾರ್ವಜನಿಕ ಕಾರ್ಯವನ್ನು ಮಾಡಿಕೊಂಡು ಬರಲು ಸಾಧ್ಯವಾಯಿತು ಮತ್ತು ಭವಿಷ್ಯದಲ್ಲಿಯೂ ಕೆಲಕಾಲ ಸಮಾಜಮುಖಿಯಾಗಿರಲೂ ಸಾಧ್ಯವಾಯಿತು.

ಜಯಪ್ರಕಾಶ್ ನಾರಾಯಣರು ಸಮಾಜವಾದಿ ಪಕ್ಷದಲ್ಲಿದ್ದಾಗ ಅವರ ಹಿಂದೆ ದೊಡ್ಡ ಕಾರ್ಯಕರ್ತರ ಸಮೂಹವೇ ಇತ್ತು. ಅವರೆಲ್ಲ ನಿಷ್ಠಾವಂತ ಮತ್ತು ಕರ್ಮಠ ಸಮಾಜವಾದಿಗಳಾಗಿದ್ದರು. ರಾಜಕೀಯ ಕ್ಷೇತ್ರದಲ್ಲಿ ಜಯಪ್ರಕಾಶ್ ನಾರಾಯಣರಿಂದ ಬಹಳಷ್ಟು ನಿರೀಕ್ಷಣೆಯಿಟ್ಟುಕೊಂಡಿದ್ದರು. ಉಪ ಪ್ರಧಾನಿ ಸ್ಥಾನಕ್ಕೆ ಆಹ್ವಾನ ಬಂದಿದ್ದಾಗ ಅದನ್ನು ತಿರಸ್ಕರಿಸಿದರು. ಆಗ ಅನೇಕ ಸಮಾಜವಾದಿಗಳಿಗೆ ನಿರಾಸೆ ಉಂಟಾಯಿತು. ಆದರೆ ಜಯಪ್ರಕಾಶರ ವ್ಯಕ್ತಿತ್ವ ಮತ್ತು ವಿಚಾರದಲ್ಲಿ ಆಳವಾಗಿ ನಂಬಿಕೆ ಇರಿಸಿಕೊಂಡಿದ್ದ ಸಮಾಜವಾದಿಗಳು ಜಯಪ್ರಕಾಶರ ಕರೆಯ ಮೇರೆಗೆ ಸಮಾಜವಾದಿ ಪಕ್ಷ ತ್ಯಜಿಸಿ ಬೋಧ ಗಯಾದಲ್ಲಿ ನಡೆದ ಅಖಿಲ ಭಾರತ ಸರ್ವೋದಯ ಸಮಾಜ ಸಮ್ಮೇಳನದಲ್ಲಿ ಸರ್ವೋದಯ ಆಂದೋಲನಕ್ಕೆ ಬಂದರು. ಹಾಗೆ ಬಂದವರಲ್ಲಿ ಕೆಲವರು ಜಯಪ್ರಕಾಶ್ ಸ್ಥಾಪಿಸಿದ್ದ ಸೊಕೋದೇವರಾದ ಸರ್ವೋದಯ ಆಶ್ರಮದಲ್ಲಿ ಇದ್ದರು. ನಾನು ಅಲ್ಲಿಗೆ ಹೋದಾಗ ಅವರೆಲ್ಲರ ಭೇಟಿಯಾಯಿತು. ಮೊಟ್ಟಮೊದಲು ಆಶ್ರಮಕ್ಕೆ ಹೋದ ತರುಣದಲ್ಲಿಯೇ ಭೇಟಿಯಾದದ್ದು. ತ್ರಿಪುರಾರಿಶರಣ್‌ಸಿಂಹ ಅವರು ಮೂವತ್ತು ವರ್ಷದವರಾಗಿದ್ದರು. ಅದೇ ತಾನೆ ಪಕ್ಷ ಬಿಟ್ಟು ಸರ್ವೋದಯ ಆಂದೋಲನಕ್ಕೆ

ಬಂದುದ್ದರಿಂದ ಸರ್ವೋದಯ ಕಾರ್ಯಕರ್ತರ ರೀತಿ ರಿವಾಜುಗಳ ಬಗ್ಗೆ ಟೀಕೆ ಮಾಡುತ್ತಿದ್ದರು. ಜೇ.ಪಿ ಸಮಾಜವಾದಿ ಪಕ್ಷ ಬಿಟ್ಟು ಬಂದುದಕ್ಕೆ ಅವರ ಮನಸ್ಸಿನಲ್ಲಿ ಇನ್ನು ನೋವಿತ್ತು. ಮುಂದೆ ಇವರು ಬಿಹಾರ್ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಲಿಯ ಅಧ್ಯಕ್ಷರಾದರು ಮತ್ತು ರಾಜ್ಯ ಸರ್ಕಾರವು ಕೊಡಮಾಡುವ "ಬಿಹಾರ್ ಪುರುಷ್" ಎಂಬ ಸನ್ಮಾನಕ್ಕೂ ಭಾಜನರಾದರು. ತ್ರಿಪುರಾರಿ ಶರಣ್ ನನ್ನ ಸಂಬಂಧ ಅಣ್ಣತಮ್ಮಂದಿರಂತಿತ್ತು. ಅನೇಕ ವಿಷಯಗಳಲ್ಲಿ ಅವರು ನನಗೆ ಮಾರ್ಗದರ್ಶಕರಾಗಿದ್ದರು. ನಾನಿರುವ ಸ್ಥಳವಾದ ಮೇಲುಕೋಟೆಗೆ ಎರಡು ಮೂರು ಬಾರಿ ಬಂದು ಹೋಗಿದ್ದರಲ್ಲದೆ ಶ್ರೀರಂಗಪಟ್ಟಣದಲ್ಲಿ ನಡೆದ ನನ್ನ ಮದುವೆಗೂ ಬಂದಿದ್ದರು.

ಮತ್ತೋರ್ವ ಸಮಾಜವಾದಿ ಯುವಕ ದಯಾನಂದ ಸಹಾಯ್. ಆಗ ಅವರಿಗೂ ಮೂವತ್ತರ ಹರೆಯ. ಅವರು ಇನ್ನೊಬ್ಬ ಸಮಾಜವಾದಿ ಕಾರ್ಯಕರ್ತೆಯಾಗಿದ್ದ ಡೆಹರಾಡೂನಿನ ಸುಶೀಲಾಗುಪ್ತ ಎಂಬುವರೊಂದಿಗೆ ಮದುವೆಯಾಗಿದ್ದರು. ಆಶ್ರಮದ ಎಲ್ಲ ಕೆಲಸ ಕಾರ್ಯಗಳಲ್ಲಿ ದಂಪತಿಗಳಿಬ್ಬರು ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಜೇ.ಪಿ ಪ್ರವಾಸ ಮುಗಿಸಿ ಆಶ್ರಮಕ್ಕೆ ಬಂದಾಗಲೆಲ್ಲ ಅವರೊಂದಿಗೆ ಬಿಸಿ ಬಿಸಿಯಾಗಿ ಚರ್ಚೆ ಮಾಡುತ್ತಿದ್ದರು. ಮುಂದೆ ಅವರು ಸಮಾಜವಾದಿ ಪಕ್ಷದಿಂದ ಪಾರ್ಲಿಮೆಂಟ್‌ನ ಸದಸ್ಯರಾದರು. ಅವರು ಸದಸ್ಯರಾಗಿದ್ದ ಕಾಲದಲ್ಲಿ ನಾನು ದಿಲ್ಲಿಯಲ್ಲಿಯ ಅವರ ನಿವಾಸದಲ್ಲಿ ಭೇಟಿಯಾಗಿದ್ದೆ. ಅನೇಕ ವರ್ಷಗಳವರೆಗೆ ಅವರೊಂದಿಗೆ ಸಂಪರ್ಕವಿತ್ತು. ಆಶ್ರಮದಲ್ಲಿದ್ದ ಇನ್ನೂ ಇತರ ಸಮಾಜವಾದಿ – ಸರ್ವೋದಯ ಮಿತ್ರರೆಂದರೆ ಅವದ ಬಿಹಾರಿ ಗೀತಾಬಾಬು ಮತ್ತು ದತ್ತಬಾಬು. ಅವದಬಿಹಾರಿಯವರು ವ್ಯವಸಾಯ ವಿಭಾಗವನ್ನು ನೋಡಿಕೊಳ್ಳುತ್ತಿದ್ದರು. ದತ್ತಬಾಬು ಮತ್ತು ಗೀತಾಬಾಬು ಆಶ್ರಮದ ಬೇರೆ ವಿಭಾಗಗಳನ್ನು ನೋಡಿಕೊಳ್ಳುತ್ತಿದ್ದರು. ಮಹಾರಾಷ್ಟ್ರದಿಂದ ಬಂದಿದ್ದ ರವಿಶಂಕರ್ ಶರ್ಮಾ ಕುಷ್ಠರೋಗಿಗಳ ಸೇವೆಗಾಗಿ ಆಶ್ರಮ ನಡೆಸುತ್ತಿದ್ದ ಆಸ್ಪತ್ರೆಯ ಕೆಲಸವನ್ನು ನಿರ್ವಹಿಸುತ್ತಿದ್ದರು. ಕೇರಳದಿಂದ ಬಂದಿದ್ದ ಕುರಿಯನ್ ಆಶ್ರಮದ ಡೈರಿ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದರು. ಆಗಾಗ್ಗೆ ಮಹಾರಾಷ್ಟ್ರದ ಪನ್ನಾಲಾಲ್ ಸುರಾನ್ ಮತ್ತು ಬಾಪುಕಾಲಧಾತೆ ಬರುತ್ತಿದ್ದರು. ಪನ್ನಾಲಾಲ್ ಮತ್ತು ಬಾಪುಕಾಲಧಾತೆ ಮಹಾರಾಷ್ಟ್ರದ ಸಮಾಜವಾದಿ ಚಿಂತಕ ಮತ್ತು ಭಾರತ ಸೇವಾದಳದ ಸಂಸ್ಥಾಪಕ ಸಾನೆಗುರೂಜಿಯವರ ಅಭಿಮಾನಿಗಳಾಗಿದ್ದರು. ಪನ್ನಾಲಾಲ್ ಸುರಾನ್ ಮೇಲುಕೋಟೆಗೆ ಬಂದು ಇಲ್ಲಿ ರಾಷ್ಟ್ರೀಯ ಸೇವಾದಳದ ಒಂದು ಶಿಬಿರ ನಡೆಸಿಕೊಟ್ಟರು. ಸೊಲ್ಲಾಪುರದಲ್ಲಿರುವ ಅವರ ಮನೆಗು ನಾನು ಹೋಗಿದ್ದೆ.

ಬಾಪುಕಾಲಧಾತೆ ಕೂಡ ಲೋಕಸಭಾ ಸದಸ್ಯರಾಗಿದ್ದರು.

ಇನ್ನೊರ್ವ ಪ್ರಮುಖ ಸಮಾಜವಾದಿ ನಾಯಕ ಅಚ್ಯುತ್ ಪಟವರ್ಧನ್ ಮತ್ತು ಅಪ್ಪಾ ಸಾಹೇಬ್ ಪಟವರ್ಧನ್ ಅವರ ಜೊತೆ ಕೂಡ ನನ್ನ ಸಂಪರ್ಕ ಬಂದಿತು. ಹಿಂದಿ ಶೀರ್ಘ ಲಿಪಿಯನ್ನು ಕಲಿಯಲು ಜೇ.ಪಿ ನನ್ನನ್ನು ಬನಾರಸ್‌ಗೆ ಕಳುಹಿಸಿದ್ದರು. ಆ ಕಾಲದಲ್ಲಿ ಅಚ್ಯುತ್ ಪಟವರ್ಧನ್ ರವರು ತತ್ವಜ್ಞಾನಿ ಜೆ.ಕೃಷ್ಣಮೂರ್ತಿಯವರ ಮಹಿಳಾ ಕಾಲೇಜಿನ ಆವರಣದಲ್ಲಿ ಇದ್ದರು. ಮತ್ತು ಭಗವದ್ಗೀತೆಯನ್ನು ಇಂಗ್ಲೀಷ್‌ಭಾಷೆಗೆ ತರ್ಜುಮೆ ಮಾಡುತ್ತಿದ್ದರು. ಅವರು ಇಂಗ್ಲೀಷ್‌ನಲ್ಲಿ ತರ್ಜುಮೆ ಮಾಡುತ್ತಿದ್ದುದನ್ನು ನಾನು ಬರೆದುಕೊಳ್ಳುತ್ತಿದ್ದೆ. ಒಂದೆರಡು ಅಧ್ಯಾಯದ ಅನುವಾದ ಆಗುವವರೆಗೆ ಮಾತ್ರ ನಾನು ಹೋಗುತ್ತಿದ್ದೆ. ಈ ಸಂದರ್ಭದಲ್ಲಿ ಅಚ್ಯುತ್ ಜಿ ಯವರ ನಿಕಟ ಪರಿಚಯವಾಯಿತು.

ಸವಮಾಜವಾದಿ ಪಕ್ಷ ಕಟ್ಟುವುದರಲ್ಲಿ ಜೇ.ಪಿಯುವರೊಂದಿಗೆ ಸಹವರ್ತಿಯಾಗಿದ್ದ ಮೀನು ಮಸಾನಿಯವರನ್ನು ಭೇಟಿ ಮಾಡುವ ಅವಕಾಶ ಸಿಕ್ಕಿತ್ತು. ಆಗ ಅವರು ಇಂಡಿಯನ್ ಸೊಸೈಟಿ ಆಫ್ ಕಲ್ಚರಲ್ ಫ್ರೀಡಂನ ಮುಖ್ಯಸ್ಥರಾಗಿದ್ದರು. ಜೇ.ಪಿಯವರು ಮಸಾನಿಯವರಿಗೆ ಬರೆದಿದ್ದ ಸ್ವಂತ ಖಾಸಗಿ ಪತ್ರವೊಂದನ್ನು ತಲುಪಿಸುವ ಸಂದರ್ಭದಲ್ಲಿ ಅವರನ್ನು ಭೇಟಿ ಮಾಡುವ ಅವಕಾಶ ದೊರೆಯಿತು. ಕರ್ನಾಟಕದ ಸಮಾಜವಾದಿ ಚಿಂತಕ ಖಾದ್ರಿ ಶಾಮಣ್ಣನವರ ಹೆಸರನ್ನು ನಾನು ಮೊಟ್ಟ ಮೊದಲ ಬಾರಿಗೆ ಬಿಹಾರ್‌ನಲ್ಲಿ ಜೇ.ಪಿಯವರ ಬಾಯಿಂದಲೇ ಕೇಳಿದ್ದೆ ಆ ಸಂದರ್ಭ ಮರೆತು ಹೋಗಿದೆ.

ನಾನು ಸಮಾಜವಾದಿ ಆಂದೋಲನದಲ್ಲಿ ನೇರವಾಗಿ ಭಾಗವಹಿಸದೆ ಹೋಗಿದ್ದರು ಜಯಪ್ರಕಾಶ್ ನಾರಾಯಣರಂಥ ಹಿರಿಯ ಸಮಾಜವಾದಿ ನಾಯಕನಿಂದ ಹಿಡಿದು ಬಾಸು ಕೃಷ್ಣಮೂರ್ತಿಯಂಥ ಸರಳ ಆದರೆ ದೃಢ ಸಮಾಜವಾದಿ ಕಾರ್ಯಕರ್ತರವರೆಗೆ ಸಂಪರ್ಕಕ್ಕೆ ಬಂದದ್ದು ಅಭಿಮಾನದ ಸಂಗತಿಯಾಗಿದೆ. ■

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ.ಕೆ.ಪ್ರಹ್ಲಾದರಾವ್,
ಶ್ರೀ.ಕೊಕ್ಕಡ ವೆಂಕಟರಮಣ ಭಟ್ – ಮಂಡ್ಯ
ಶ್ರೀ. ವಿಜಯದೇವನ್ – ಪಟ್ಟಸೋಮನಹಳ್ಳಿ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ. ಮುನಿಯಯ್ಯ, ಶ್ರೀ.ಜಿ.ಬಿ.ಸಜ್ಜನ್,
ಶ್ರೀ. ಪ್ರಮೋದ್ ಶ್ರೀನಿವಾಸ್ – ಬೆಂಗಳೂರು
ಶ್ರೀ.ರಾಜಶೇಖರ ಕದಂಬ, ಶ್ರೀ.ಡಿ.ಬಿ.ರಾಜಶೇಖರ ಮೂರ್ತಿ,
ಶ್ರೀ.ಕೆ.ಲೋಕನಾಥ್, ಶ್ರೀ.ಜೆ.ಜಿ.ಕೃಷ್ಣಮೂರ್ತಿ
ಶ್ರೀ.ಸುಬ್ಬರಾವ್ – ಮೈಸೂರು
ಶ್ರೀ.ಲಿಂಗರಾಜು – ಚಂದಗಾಲು
ಶ್ರೀ.ಶಿವಲಿಂಗೇಗೌಡ – ಹನುಮಂತ ನಗರ, ಮದ್ದೂರು
ಶ್ರೀ.ಬಿ.ಸಿ.ಆನಂದ್ – ತಿಪಟೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ. ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ



KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ......

[illegible]ಲಮ್ಮಗುರು ಐ/ಮ
ನಿಸರ್ಗ [illegible] ಲೇಔಟ್
784/[illegible] : ಅಂಚೆ
ಜಿಗಣಿ : [illegible]
ಬೆಂಗಳೂರು - 560003

......

......

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 316344/ 299854
e-mail : janapada@yahoo.com - Web : janapada.net
Printed at Sanketh Mudrna, Melkote